ದುರಂತ ಕರ್ಣ

(ಪೌರಾಣಿಕ ನಾಟಕ)



ಎಂ. ಕೃಷ್ಣಗೋಪಾಲ್

ದುರಂತ ಕರ್ಣ

(ಪೌರಾಣಿಕ ನಾಟಕ)

ಲೇಖಕ:

ಎಂ. ಕೃಷ್ಣಗೋಪಾಲ್

೧೯೮೭

ಮಹಾವೀರ ಮುದ್ರಣಾಲಯ

ರಥಬೀದಿ, ಮಂಗಳೂರು–575 001.


'DURANTHA KARNA'
a Kannada mythological Drama Written & Published by
M. Krishnagopal,
Mahavir Printers, Car Street, Mangalore-1.

Pages: 68 + 16

First Edition: 1987

Price: Rs. 7/-

Printed at:
Mahavir Printers, Car Street, Mangalore-575 001.



ಶ್ರೀ ರಾಜಾರಾಮ ಮಾಸ್ತರರು

ಮೂಡುಬಿದಿರೆ.

ರಂಗಭೂಮಿಗೆ ನನ್ನನ್ನು ಪ್ರಪ್ರಥಮವಾಗಿ

ಏರಿಸಿದ

ನನ್ನ

ವಿದ್ಯಾಗುರುಗಳು—ಕಲಾಗುರುಗಳು.

ಅವರಿಗೆ

ಈ ಕೃತಿಯನ್ನು ಭಕ್ತಿಪೂರ್ವಕ ಅರ್ಪಿಸಿದ್ದೇನೆ.

—ಕೃಷ್ಣಗೋಪಾಲ್

'ನನ್ನುಡಿ' . . . .

ನಾನು ಬರೆದ ನಾಟಕಗಳಲ್ಲಿ 'ದುರಂತ ಕರ್ಣ' ಕೊನೆಯದು—ಮೊದಲ ಮುದ್ರಣ.

ಈ ಕೃತಿಯನ್ನು ನಾನು, ನನ್ನ ಪ್ರಾಥಮಿಕ ಶಾಲಾ ಗುರುಗಳೂ, ಶಾಲಾ ವಾರ್ಷಿಕೋತ್ಸವದ ನಾಟಕಕ್ಕೆ ನನ್ನನ್ನೂ ಆಯ್ಕೆ ಮಾಡಿ, ರಂಗ ಭೂಮಿಯ ಪ್ರಥಮ ಪಾಠ ಹೇಳಿಕೊಟ್ಟ ಕಲಾಗುರುಗಳೂ ಆದ ಮೂಡು ಬಿದಿರೆ **ಶ್ರೀ ರಾಜಾರಾಮ ಷಾಸ್ತ್ರರಿಗೆ** ಭಕ್ತಿಪೂರ್ವಕ ಅರ್ಪಿಸಿದ್ದೇನೆ.

ನಾಟಕದ ಹುಚ್ಚು–ಹವ್ಯಾಸ ಬೆಳೆದಾಗ, 1951ರಲ್ಲಿ ನನ್ನನ್ನು ನಾಟಕ ಬರೆಯಲು ಬಲಾತ್ಕರಿಸಿ 'ವಿಷಕನ್ಯೆ' ಎಂಬ ಸಾಮಾಜಿಕ ನಾಟಕ ಬರೆಯಿಸಿ ದವರು–ಮೂಡುಬಿದಿರೆ ಚೌಟರ ಅರಮನೆಯ ದಿ॥ ಶ್ರೀ ಗುಮ್ಮಣ್ಣ ಬಲ್ಲಾಳರು. ಅದೃಷ್ಟವಶಾತ್, ಈ ನಾಟಕ ಬಹಳ ಪ್ರಸಿದ್ಧವಾಗಿ ಅನೇಕ ಬಾರಿ ಅಭಿ ನಯಿಸಲ್ಪಟ್ಟು, ಸ್ಪರ್ಧೆಗಳಲ್ಲೂ ಬಹುಮಾನ ಗಳಿಸಿದುದು ಪ್ರೋತ್ಸಾಹ ದಾಯಕವೆನಿಸಿತು. ನಂತರ ಅವಕಾಶಗಳ ಒತ್ತಡಕ್ಕೆ ಸಿಲುಕಿ ಹಲವು ನಾಟಕ ಗಳನ್ನು ಬರೆಯುವಂತಾಯಿತು. ಇಂತಹ ಅಪೂರ್ವ ಅವಕಾಶಗಳನ್ನು ಒದಗಿಸಿ ದುದು—ಇಂದಿಗೆ 150 ವರ್ಷ ತುಂಬಿದ ನನ್ನ ಹಳೆಯ ಶಾಲೆ, ಮಂಗಳೂರು ಬಿ. ಇ. ಎಂ. ಹ್ಯಾಸ್ಕೂಲಿನ ರಂಗಭೂಮಿ, 'ಕಲಾಮಂಟಪ'. ಈ ರಂಗ ಭೂಮಿಯಲ್ಲಿಯೇ ಪ್ರಸಿದ್ಧ ನಾಟಕಕಾರ ದಿ॥ ವಿದ್ವಾನ್ ಶ್ರೀ ಬೇಲಗದ್ದೆ ಅಪ್ಪಯ್ಯನವರಿಂದ ನಾಟಕ ಕಲೆಯ ಎಲ್ಲಾ ಮುಖಗಳ ರಂಗ ಶಿಕ್ಷಣ ದೊರಕಿ ದುದು. ಆಗ ನಾನು ಬರೆದಂತಹ ನಾಟಕಗಳನ್ನು ಯಶಸ್ವಿಯಾಗಿ ಪ್ರಯೋಗಿ ಸಲು ತುಂಬಾ ಅನುಕೂಲರಾದವರು ಶ್ರೀ ಬೇಲಗದ್ದೆ ಅಪ್ಪಯ್ಯನವರ ಗರಡಿ ಯಲ್ಲೇ ಪಳಗಿದ, ಆ ಶಾಲಾ ಹಳೇ ವಿದ್ಯಾರ್ಥಿಗಳ ಬಳಗದ ಗೆಳೆಯರಾದ ಶ್ರೀ ಇಂದುಶೇಖರ್, (ಖ್ಯಾತ ಚಲಚಿತ್ರ ಕಲಾವಿದ), ಶ್ರೀ ಬಿ.ವಿ. ಬಾಳಿಗಾ,

ಶ್ರೀ ನರೇಂದ್ರ ಮೆಂಡನ್, ಶ್ರೀ ಕೀಕಾನ ರಾಮಚಂದ್ರ, ಶ್ರೀ ಬಾಬು ಶೆಟ್ಟಿ, ದಿ॥ ಶ್ರೀ ಮಾಧವ, ಶ್ರೀ ಲಿಂಗಪ್ಪ ಮಾಸ್ತರ್ ಮೊದಲಾದವರು. ಇವರೆಲ್ಲರೂ ಉತ್ತಮ ನಟರಾಗಿದ್ದು, ನಾನು ಬರೆದ ಎಲ್ಲಾ ನಾಟಕಗಳೂ ಬಹಳ ಯಶಸ್ವಿಯಾಗುವಂತೆ ಮಾಡಿದ್ದಲ್ಲದೆ, ಆ ನಾಟಕಗಳಲ್ಲಿ ಅಭಿನಯಿಸಿ ಅವರು ಮತ್ತೂ ಖ್ಯಾತರಾದರು. ಇವರಲ್ಲದೆ ನನ್ನ ನಾಟಕಗಳಲ್ಲಿ ಪಾತ್ರವಹಿಸಿ, ಯಶಸ್ವಿಯಾಗಿ ನಿರ್ವಹಿಸಿ, ಕೃತಿಗೆ ಕೀರ್ತಿ ಒದಗಿಸಿದವರಲ್ಲಿ ಮೂಡುಬಿದಿರೆಯ ಶ್ರೀ ಬಸಪ್ಪ ಶೆಟ್ಟಿ, ಶ್ರೀ ಕಾಳಿಂಗ ಪೈ, ನನ್ನ ತಮ್ಮ ಗೋವರ್ಧನ ಹೊಸಮನಿ, ಕಾರ್ಕಳದ ಶ್ರೀ ವ್ಯಾಸಕೃಷ್ಣ, ಮಂಗಳೂರಿನ ಶ್ರೀ ಎಸ್. ಆರ್. ಬಾಲಗೋಪಾಲ್ ಮತ್ತು ತಾರಾನಾಥ್ ನಾಯಕ್ ಇವರು ಪ್ರಮುಖರು. ಹಲವು ವಿಧಗಳಲ್ಲಿ ಸಹಕರಿಸಿ ನಾಟಕಕ್ಕೆ ಜೀವ ತುಂಬಿದವರು ಹಿರಿಯರಾದ ಶ್ರೀ ಗೋಪಿನಾಥ ಭಟ್ ಗುಲ್ವಾಡಿ ಮತ್ತು ಯೆಲ್ಲೂರು ಉಮೇಶಣ್ಣ.

ಈ 'ದುರಂತ ಕರ್ಣ' ನಾಟಕ ಬರೆಯಲು ಪ್ರೇರೇಪಿಸಿ, ಪ್ರೋತ್ಸಾಹಿಸಿದವರು, ನನ್ನ ಮಿತ್ರ ಶ್ರೀ ಬಿ. ನಾರಾಯಣ ಶೆಣೈಯವರು. ಅವರು ಸ್ವತಹ ನಾಟಕಕಾರಲ್ಲವಾದರೂ, ಒಂದು ಕಾಲದಲ್ಲಿ ಅವರು ನಾಟಕ ಕಲೆಗೋಸ್ಕರ ಸವೆದ ಶ್ರಮ–ಸಾಹಸ–ಸೇವೆ ಅದ್ಭುತ. ಯಾವುದೇ ನಾಟಕವನ್ನು ರಂಗಭೂಮಿಯಲ್ಲಿ ಯಶಸ್ವಿಗೊಳಿಸುವುದಕ್ಕಾಗಿ ಪಡುವ ಅವರ ಶ್ರಮ—ಶ್ರದ್ಧೆ ಮಹತ್ತರವಾದುದು.

ಇನ್ನು, ಈ ಕೃತಿಯ ಕುರಿತು ಹೇಳುವುದಿದ್ದರೆ—ಪೌರಾಣಿಕ ನಾಟಕಗಳಿಗೆ ಇದು ಕಾಲವಲ್ಲ. ಪ್ರೋತ್ಸಾಹವೂ ಇಲ್ಲ—ಪ್ರಯೋಗಿಸಲು ಸುಲಭ ಸಾಧ್ಯವೂ ಅಲ್ಲ. ಆದ್ದರಿಂದ ಪ್ರಕಟಿಸಿದ ಈ ಕೃತಿಯನ್ನು ಕಲಾವಿದರು ಹೇಗೆ ಸ್ವಾಗತಿಸುವರೋ ತಿಳಿಯದು. ಅಂತೂ ನನ್ನ ಮುರುಕು ಲೇಖನಿಯಿಂದ ಬರೆಯಲ್ಪಟ್ಟಂತಹ ಈ ನಾಟಕಕ್ಕೆ ಆಧಾರವಾಗಿ ಕೈಲಾಸಂರವರ ಆಂಗ್ಲ ನಾಟಕ 'ಕರ್ಣ' ಮತ್ತು ಕುಮಾರವ್ಯಾಸನ 'ಮಹಾಭಾರತ' ಉಪಯೋಗಿಸಿದ್ದೇನೆ. ಕೆಲವು ದೃಶ್ಯಗಳಲ್ಲಿ ಕುಮಾರವ್ಯಾಸನ ಮಾತನ್ನೇ ಬಳಸಿದ್ದೇನೆ. ಅದು ಉಚಿತವೊ,ಅನುಚಿತವೊ-ಗೊತ್ತಿಲ್ಲ. ಅಂತೂ ಅವನ ಆ ಲೇಖನಿಯ ಸವಿ–

ಸೊಗಸುಗಳಿಗೆ ಮಾರುಹೋದ ನಾನು, ನಾಟಕದ ಯಶಸ್ಸಿಗಾಗಿ ಅವನನ್ನೂ ಆಶ್ರಯಿಸಿದೆ.

ಈ ನಾಟಕದಲ್ಲಿ ಹೆಚ್ಚಿನ ನಿರ್ದೇಶನ ಸೂತ್ರಗಳನ್ನು ಸೂಚಿಸಿಲ್ಲ. ಅದನ್ನು ಅಭಿನಯಿಸಲಿರುವ ಕಲಾವಿದರಿಗೇ ಬಿಟ್ಟಿದ್ದೇನೆ. ಚಾಣಾಕ್ಷನಾದ ನುರಿತ ನಿರ್ದೇಶಕ, ತನ್ನ ರಂಗಕೌಶಲ್ಯವನ್ನು ಯಥೇಷ್ಟ ಉಪಯೋಗಿಸುವ ಅವಕಾಶ ಇದರಲ್ಲಿದೆ. ಆದರೆ ಮಾತುಗಳನ್ನು ಮಾತ್ರ ಸರಿಯಾಗಿ ಕಂಠಪಾಠ ಮಾಡದೆ, ಸರಿಯಾದ ಸ್ವರಭಾರಗಳನ್ನು ಉಪಯೋಗಿಸದೆ ನಾಟಕವಾಡಿದರೆ ನಾಟಕ ಕಳಪೆಯಾದೀತು. ಈ ನಾಟಕದ ಜೀವಾಳವೇ ಸಾಹಿತ್ಯ–ಎಂಬುದು ನನ್ನೆಣಿಕೆ. ಅಭಿನಯಕ್ಕೆ ಎರಡನೇ ಸ್ಥಾನ. ಆದ್ದರಿಂದ ಕಲಾವಿದರು ಇದರೆಡೆಗೆ ಗಮನವಿಟ್ಟರೆ ನಾಟಕ ಯಶಸ್ವಿಯಾಗುವುದರಲ್ಲಿ ಅನುಮಾನವಿಲ್ಲ.

ಈ ನಾಟಕ ಕೃತಿಯನ್ನು ಮುದ್ರಿಸಿ ಪ್ರಕಟಿಸುವ ಅಭಿಪ್ರಾಯವನ್ನು ನಾನು ನನ್ನ ಗೆಳೆಯ ಹಿತೈಷಿಗಳೊಡನೆ ವ್ಯಕ್ತಪಡಿಸಿದಾಗ, ಅವರೆಲ್ಲರೂ ಆನಂದಪಟ್ಟರಲ್ಲದೆ, ನಾಟಕಕಾರರೂ ಬರಹಗಾರರೂ ಆದ ಶ್ರೀ ಗೋಪಿನಾಥ ಭಟ್ ಗುಲ್ವಾಡಿ, ಶ್ರೀ ಯೆಲ್ಲೂರು ಉಮೇಶ ರಾವ್, ಶ್ರೀ ಬಿ. ವಿ. ಬಾಳಿಗಾ ಮತ್ತು ಶ್ರೀ ಕೀಕಾನ ರಾಮಚಂದ್ರ ಇವರು ಕೆಲವು 'ನಲ್ನುಡಿ'ಗಳನ್ನೂ ಬರೆದುಕೊಟ್ಟರು. ಅವನ್ನು ಓದಿದಾಗ—ನಾಟಕರಂಗದಲ್ಲೂ, ಸಾಹಿತ್ಯಕ್ಷೇತ್ರದಲ್ಲೂ ಅತಿ ಕಿರಿಯನಾದ ನನ್ನನ್ನು ಅವರು ಅಷ್ಟು ಹಿರಿದಾಗಿ ತೋರಿಸಲು, ಅವರಿಗೆ ನನ್ನ ಮೇಲಿರುವ ಅಪಾರ ಅಭಿಮಾನವೇ ಕಾರಣವೆಂದು ಭಾವಿಸಿದೆ. ಆದರೂ, ಅವುಗಳನ್ನು 'ನಲ್ನುಡಿ' ಯಾಗಿ ಇದರಲ್ಲಿ ಪ್ರಕಟಿಸಿದ್ದೇನೆ. ನನ್ನ ಮೇಲಿನ ಅವರ ಸದ್ಭಾವನೆಗೆ ನಾನು ಅವರಿಗೆ ಸದಾ ಕೃತಜ್ಞನಾಗಿದ್ದೇನೆ.

ಈ ನಾಟಕ ಅಭಿನಯಿಸಲು ಯಾರಿಗೂ ನನ್ನ ಅನುಮತಿಬೇಕಾಗಿಲ್ಲ. ಅದಕ್ಕಾಗಿ ನನಗೆ ಯಾರೂ ಬರೆಯಬೇಕಾಗಿಲ್ಲ. ಕಲಾಭಿಮಾನಿಗಳು ಈ ನಾಟಕವನ್ನು ರಂಗಭೂಮಿಯಲ್ಲಿ ಪ್ರಯೋಗಿಸಿದಾಗಲೇ ನನಗೆ ಸಂತೃಪ್ತಿ–ಸಂತೋಷ.

— ಎಂ. ಕೃಷ್ಣಗೋಪಾಲ್

'ನಲ್ನುಡಿ'....

ಕನ್ನಡ ರಂಗಭೂಮಿಯ ಮೇಲೆ ನಟನಾಗಿ, ದಿಗ್ದರ್ಶಕನಾಗಿ, ನಾಟಕ ಕರ್ತೃನಾಗಿ ದುಡಿದು ಮೆರೆದು ವಿಜೃಂಭಿಸಿದವರು ಮಿತ್ರ ಕೃಷ್ಣಗೋಪಾಲರು. ಅವರ, ನನ್ನ ಪರಿಚಯ, ರಂಗಮಂಚದ ನಂಟು 4 ದಶಕಗಳ ಹಿಂದಿನಷ್ಟು. ಇಂದಿಗೂ ಸ್ವಲ್ಪ ಮಟ್ಟಿಗೆ ಮುಂದುವರಿದು ಬಂದಿದೆ. ಕೃಷ್ಣಗೋಪಾಲರ ಪರಿಚಯ ನನಗೆ ಆದದ್ದು 1950ರ ಸುಮಾರಿಗೆ. ಸ್ಥಳೀಯ ಮಿಶ್ಯನ್ ಹ್ಯಾಸ್ಕೂಲ್ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ ಅಂಗವಾಗಿ ದಿವಂಗತ ಬೇಲಗದ್ದೆ ಅಪ್ಪಯ್ಯ ವಿದ್ವಾನ್, ಇವರ ದಿಗ್ದರ್ಶನದಲ್ಲಿ ನಾಟಕಗಳ ಪ್ರದರ್ಶನ–ಅವುಗಳಲ್ಲಿ ಕೃಷ್ಣಗೋಪಾಲರ ಅಭಿನಯ, ಅವರ ಸ್ಫುರದ್ರೂಪ, ಆಕರ್ಷಕ ನಿಲುವು, ಅಸ್ಖಲಿತ ಉಚ್ಚಾರ, ಸಂದರ್ಭೋಚಿತ ನಟನೆ ಇವು ಎಲ್ಲರನ್ನೂ ಮೆಚ್ಚಿಸುವಂಥಹದು, ಇವರೋರ್ವ ಉತ್ತಮ ನಟ, ಕಲಾವಿದ ನೆಂದು ಸಾರಿ ಹೇಳುತ್ತಿದ್ದುವು. ಅಲ್ಲಿಂದ ಮುಂದೆ ಇವರು ದಿಗ್ದರ್ಶನದಲ್ಲೂ ಕೈಯಾಡಿಸಿ ಬಲ್ಲವರಿಂದ, ವಿಮರ್ಷಕರಿಂದ ಸೈ ಎನಿಸಿಕೊಂಡಿದ್ದಾರೆ.

ರಂಗಮಂಚದ ಮೇಲೆ ಪಳಗಿ ಮುಂದೆ ಸಾಗಿದಂತೆ ಕೃಷ್ಣಗೋಪಾಲರು ನಾಟಕ ರಚನೆಗೂ ತೊಡಗಿಸಿಕೊಂಡರು. ಚಿಕ್ಕ ಪ್ರಹಸನಗಳು ಮುಖ್ಯ ವಾಗಿ ಸಾಮಾಜಿಕ ಸಮಸ್ಯೆಗಳನ್ನು ಕುರಿತು ಲಘು ಹಾಸ್ಯಮಿಶ್ರಿತ ರಚನೆಗಳು ಇವರ ಚೊಚ್ಚಲ ಕೃತಿಗಳು. ಸಾಕಷ್ಟು ಸಂಖ್ಯೆಯಲ್ಲಿ ರಚಿತವಾದ ಇಂತಹ ನಾಟಕಗಳು ಅನೇಕ ಕಡೆಗಳಲ್ಲಿ ಅನೇಕ ಬಾರಿ ಪ್ರದರ್ಶಿತವಾಗಿವೆ. ಲೇಖನಿಯು ಪ್ರೌಢವಾದಂತೆ ರಂಗಮಂಚದ, ಅನುಭವ ಬೆಳೆದಂತೆ, ಮಾನಸಿಕ ವಿಕಸನ ಹೆಚ್ಚಾದಂತೆ ಇವರು ಚಾರಿತ್ರಿಕ, ಮತ್ತು ಪೌರಾಣಿಕ ಕಥಾವಸ್ತುಗಳ ಕಡೆಗೂ ಮನಸ್ಸನ್ನು ಹರಿಯಿಸಿದರು. ಈ ಕಾಲದಲ್ಲೇ ಇವರಿಂದ ಹಲವು ಉತ್ತಮ ಕೃತಿ ಗಳು ಬೆಳಕನ್ನು ಕಂಡವು. ಇವುಗಳಲ್ಲಿ 'ಸಾಮ್ರಾಟ್ ಚಂದ್ರಗುಪ್ತ', 'ಷಾಜಹಾನ್' 'ದರಿಯಾ ದೌಲತ್' (ಇದು ಶ್ರೀ ಇಂದುಶೇಖರರ ಸಹಯೋಗದಿಂದ ಬರೆದು ದೆಂಬ ಜ್ಞಾಪಕ) ಮತ್ತು ಈಗ ಮುದ್ರಣಗೊಂಡ 'ದುರಂತ ಕರ್ಣ' ಇವು

ಇವರ ಅಮೋಘ ಯಶಸ್ಸು ಸಂಪಾದಿಸಿದ ನಾಟಕಗಳಿನ್ನ ಬಹುದು. ಇವುಗಳಲ್ಲಿ 'ಸಾಮ್ರಾಟ್ ಚಂದ್ರಗುಪ್ತ', 'ಷಾಜಹಾನ್' ಮತ್ತು 'ದುರಂತ ಕರ್ಣ' ಇವು ಸಾಕಷ್ಟು ಬಾರಿ ಅಭಿನಯಿಸಲ್ಪಟ್ಟು ನಾಟಕ ಪ್ರೇಮಿಗಳಿಂದ ಹಾಗೂ ವಿಮರ್ಶಕರಿಂದ ಶ್ಲಾಘನೆಗಳಿಸಿದೆ.

'ಷಾಜಹಾನ್'ದಲ್ಲಿ ರಾಜಕುಮಾರ ಮಹಮ್ಮದ್‌ನಾಗಿ, 'ಸಾಮ್ರಾಟ್ ಚಂದ್ರಗುಪ್ತ'ದಲ್ಲಿ ಪ್ರಚಂಡ ಚಾಣಕ್ಯನಾಗಿ. 'ದುರಂತ ಕರ್ಣ'ದಲ್ಲಿ ಹತಭಾಗ್ಯ ಕರ್ಣನಾಗಿ ಕೃಷ್ಣಗೋಪಾಲರು ಸ್ವತಹ ಅಭಿನಯಿಸಿ ಮೆಚ್ಚುಗೆಗಳಿಸಿದ್ಧಾರೆ. ವಿಭಿನ್ನ ಸ್ವಭಾವದ ಈ ಪಾತ್ರಗಳನ್ನು ಯಶಸ್ವಿಯಾಗಿ ನಿರ್ವಹಿಸಿ ಎಲ್ಲರಿಂದ ಶಹಭಾಷ್ ಎನಿಸಿಕೊಂಡದ್ದು ಕೃಷ್ಣಗೋಪಾಲರ ನಟನಾ ಸಾಮರ್ಥ್ಯಕ್ಕೆ ಉದಾಹರಣೆ. ಮಾತ್ರವಲ್ಲ ಪ್ರೇಕ್ಷಕರಿಂದ ಮನ್ನಣೆ ಹಾಗೂ ವಿಮರ್ಶಕರಿಂದ ಹೊಗಳಿಕೆಯನ್ನು ಪಡೆದಿದ್ದಾರೆ. ಶ್ರೇಷ್ಟನಟ ದಿಗ್ದರ್ಶಕನೆಂದು ಪುರಸ್ಕೃತ ರಾಗಿದ್ದಾರೆ. ದಾವಣಗೆರೆಯ ಹಿರಣ್ಣಯ್ಯ ಸ್ಮಾರಕ ನಾಟಕ ಸ್ಪರ್ಧೆಯಲ್ಲಿ 'ಸಾಮ್ರಾಟ್ ಚಂದ್ರಗುಪ್ತ' ನಾಟಕ–ಮದ್ರಾಸಿನಲ್ಲಿ ದಕ್ಷಿಣ ಕನ್ನಡ ದ್ರಾವಿಡ ಬ್ರಾಹ್ಮಣಸಂಘದ ವಜ್ರೋತ್ಸವ ಸಂದರ್ಭದಲ್ಲಿ ಕೃಷ್ಣಗೋಪಾಲರ ದಿಗ್ದರ್ಶನ ದಲ್ಲಿ ಅವರ ಪಾತ್ರ ನಿರ್ವಹಣೆಯಲ್ಲಿ ಶ್ಲಾಘನೆ ಪಡೆದಿದೆ. ದಾವಣಗೆರೆಯಲ್ಲಿ ಸಾರ್ವಜನಿಕ ಸನ್ಮಾನದಲ್ಲಿ ಉತ್ತಮ ನಟ, ಉತ್ತಮ ದಿಗ್ದರ್ಶಕನೆಂದು ಗೌರವಿಸಲ್ಪಟ್ಟಿದ್ದಾರೆ.

ನಾಟಕೋತ್ಸವಗಳನ್ನು ವ್ಯವಸ್ಥೆಗೊಳಿಸುವುದರಲ್ಲೂ ಕೃಷ್ಣಗೋಪಾಲರು ಹಿಂದುಳಿದವರಲ್ಲ. ದಿವಂಗತ ಕುಡ್ವಿ ವಾಸುದೇವ ಶೆಣೈ, ಬಾಲ ಗೋಪಾಲರ ಜೊತೆಗೂಡಿ 'ಕಲಾಭವನ' ಎಂಬ ಸಂಸ್ಥೆಯ ಮೂಲಕ 6-8 ವರ್ಷಗಳ ಕಾಲ ಜಿಲ್ಲಾ ಮಟ್ಟದ ನಾಟಕ ಸ್ಪರ್ಧೆಗಳನ್ನು ಏರ್ಪಡಿಸಿದ್ದಾರೆ. ಇತ್ತೀಚೆಗಿನ ವರ್ಷಗಳಲ್ಲಿ ಗಣಪತಿ ಹೈಸ್ಕೂಲ್ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ ಗಳಿಗೆ ಬೇಕಾದ ನಾಟಕಗಳನ್ನು ಸಜ್ಜುಗೊಳಿಸುವುದರಲ್ಲಿ ಮುತುವರ್ಜಿಯಿಂದ ದುಡಿಯುತ್ತಾ ಇದ್ದಾರೆ. ತನ್ನ ಸ್ವಂತ ನಾಟಕಗಳಲ್ಲಿ ಮಾತ್ರ ಅಲ್ಲದೆ ಇತರರಿಂದ ರಚಿತವಾದ ನಾಟಕಗಳಲ್ಲೂ ಶ್ರದ್ಧೆಯಿಂದ ಪಾತ್ರವಹಿಸಿ ಅಭಿನಯಿಸಿದ್ದಾರೆ. ದಿಗ್ಧರ್ಶನ ಒದಗಿಸಿದ್ದಾರೆ. ಮಣಿಪಾಲದಲ್ಲಿ ಅ.ನ.ಕೃ. ರವರ ಅಧ್ಯಕ್ಷತೆಯಲ್ಲಿ

ಜರಗಿದ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ದಿವಂಗತ ಕುಡ್ಪಿವಾಸು ದೇವ ಶೆಣೈಯವರಿಂದ ರಚಿಸಲ್ಪಟ್ಟ—ಅವರೇ ದಿಗ್ದರ್ಶಿಸಿದ 'ಸನ್ಯಾಸಿಯ ಗೊಂಗಡಿ'ಯಲ್ಲಿ ನಕಲಿ ಸನ್ಯಾಸಿಯಾಗಿ, ಬೇಲಗದ್ದೆಯವರ' ಉಷಾ ಪರಿಣಯ' ದಲ್ಲಿ ಅನಿರುದ್ಧನಾಗಿ ನಟಿಸಿದ್ದಾರೆ. ಇವೆರಡು ಉದಾಹರಣೆಗಳು ಮಾತ್ರ. ಕಳೆದ 40 ವರ್ಷಗಳಲ್ಲಿ ಇವರು ಅಭಿನಯಿಸಿದ ನಾಟಕಗಳು ಅನೇಕ. ನಿರ್ವಹಿಸಿದ ಪಾತ್ರಗಳು ನೂರಾರು. ರಂಗ ಮಂಚದ ಮೇಲೆ ಕಾಣಿಸಿಕೊಂಡದ್ದು ಸಹಸ್ರಾರು ಬಾರಿ.

ಇಂತಹ ಬಹುಮುಖ ಪ್ರತಿಭೆಯ ಕಲೋಪಾಸಕ ಕೃಷ್ಣಗೋಪಾಲರು ಎಂದೋ ನಾಟಕ ಅಕಾಡಮಿಯಿಂದ ರಾಜ್ಯ ಮಟ್ಟದಲ್ಲಾದರೂ ಪ್ರಶಸ್ತಿ ಪಡೆಯಬೇಕಿತ್ತು. ಅಂತಹ ಯೋಗ್ಯತೆ ಅವರಲ್ಲಿ ಪರಿಪೂರ್ಣವಾಗಿ ಉಂಟು. ಎಲ್ಲಾ ವಿಧದ ಅರ್ಹತೆಯೂ ಉಂಟು. ತನ್ನ ಬಿಡುಸಮಯವನ್ನು ನಾಟಕ ಕಲೆಯ ಸೇವೆಗೆ ಮುಡಿಪಾಗಿಟ್ಟ ಅರ್ಹ ಕಲಾವಿದನೊಬ್ಬನಿಗೆ ನಡು ವಯಸ್ಸನ್ನು ದಾಟಲಿರುವ ಸಂದರ್ಭದಲ್ಲಾದರೂ ಅಂತಹ ಮಾನ್ಯತೆ, ಪುರಸ್ಕಾರ ದೊರೆತೀತು ಅಂತ ಆಶಿಸೋಣವೇ? ಅಂತಾದರೆ ಅವರ ಅಸಂಖ್ಯ ಅಭಿಮಾನಿಗಳಿಗೆ ಸಮಾಧಾನವಾದೀತು. ನಾಟಕ ಕಲೆಯ ಸೇವೆ ಕೃಷ್ಣ ಗೋಪಾಲರ ಕೈಯಲ್ಲಿ ಅವ್ಯಾಹತವಾಗಿ ಸಾಗಲಿ.

— ಗೋಪಿನಾಥ ಭಟ್, ಗುಲವಾಡಿ
ಕಾರ್ಯದರ್ಶಿ
ಸಾರಸ್ವತ ಎಜುಕೇಶನ್ ಸೊಸೈಟಿ (ರಿ) ಮಂಗಳೂರು.

‘ನಲ್ನುಡಿ’.... ೨

ನಾನೂ ‘ದುರಂತ ಕರ್ಣ’ ನಾಟಕಕರ್ತ ಶ್ರೀ ಕೃಷ್ಣಗೋಪಾಲರೂ ಕಳೆದ ಸುಮಾರು ನಾಲ್ಕು ದಶಮಾನಗಳಿಗೆ ಮೇಲ್ಪಟ್ಟು ರಂಗಭೂಮಿಯ ಸಹಪಾಠಿಗಳು. ಹೆಸರಾಂತ ನಟ, ನಾಟಕಕರ್ತ, ದಿಗ್ದರ್ಶಕ ದಿ॥ ಬೇಲಗದ್ದೆ ಅಪ್ಪಯ್ಯನವರ ಗರಡಿಯಲ್ಲಿ ಪಳಗಿದವರು. ‘ಗುರುವಿನಂತೆ ಶಿಷ್ಯ’ ಎಂಬ ಮಾತನ್ನು ಅವರು ಸಾರ್ಥಕಗೊಳಿಸಿದ್ದಾರೆ—ಸ್ವತಹ ನಾಟಕಗಳನ್ನು ಬರೆದೂ, ನಟಿಸಿ ಹಾಗೂ ದಿಗ್ದರ್ಶಿಸಿ.

ನಾಟಕದ ಗೀಳು ಕೃಷ್ಣಗೋಪಾಲರಿಗೆ ಅವರ ಶಾಲಾ ದಿನಗಳಿಂದಲೇ ಅಂಟಿಕೊಂಡಿತ್ತು. ಮೂಡಬಿದ್ರೆಯಲ್ಲಿ ದಿ॥ ಜಿ. ಗೋಪಾಲ ಪೈಯವರು ಸರಸ್ವತಿ ಸೇವಾ ಸಂಘ ಸ್ಥಾಪಿಸಿ, ಪ್ರತೀ ವರುಷ ದಸರಾ ಮಹೋತ್ಸವವನ್ನು ಸಡಗರದಿಂದ ಆಚರಿಸುತ್ತಿರುವ ದಿನಗಳಲ್ಲಿ, ಕಾರ್ಯದರ್ಶಿಯಾಗಿ ನಾಟಕ ಕಾರ್ಯಕ್ರಮಗಳಲ್ಲಿ ಮುಂಚೂಣಿಯಲ್ಲಿ ನಿಂತು ಕೆಲಸ ಮಾಡಿದ ಕೀರ್ತಿ ಅವರದು. ಮಂಗಳೂರಲ್ಲಿ ‘ಕಲಾಭವನ’ವೆಂದು ರಂಗಭೂಮಿಯ ಉದ್ಧಾರಕ್ಕೇನೆ ಮೀಸಲಾದ ಸಂಸ್ಥೆಯೊಂದು ಆರಂಭವಾಗಿ, ಬಿಡದೆ ಕೆಲವು ವರ್ಷಗಳ ತನಕ ಜಿಲ್ಲಾ ಮಟ್ಟದ ಹಾಗೂ ರಾಜ್ಯ ಮಟ್ಟದ ನಾಟಕ ಸ್ಪರ್ಧೆಗಳನ್ನು ನಡೆಸಿದಾಗ ಅದರಲ್ಲೂ ಅವರು ಪ್ರಧಾನ ಪಾತ್ರವಹಿಸಿದ್ದರು.

‘ವಿಷಕನ್ಯೆ’ (ಸಾಮಾಜಿಕ), ‘ಸಾಮ್ರಾಟ್ ಚಂದ್ರಗುಪ್ತ’, ‘ಷಾಜಹಾನ್’, ‘ಕನ್ನಡ ಕೇಸರಿ’, ‘ದರಿಯಾ ದೌಲತ್’ (ಚಾರಿತ್ರಿಕ) ಮತ್ತು ಇದೀಗ ಅಚ್ಚಾಗುತ್ತಿರುವ ಅವರ ‘ದುರಂತ ಕರ್ಣ’ (ಪೌರಾಣಿಕ) ಕೃಷ್ಣಗೋಪಾಲರು ರಂಗಭೂಮಿಗೆ ಅರ್ಪಿಸಿದ ಕೆಲವು ನಾಟಕ ಕುಸುಮಗಳು. ‘ವಿಷಕನ್ಯೆ’ ಮತ್ತು ‘ಸಾಮ್ರಾಟ್ ಚಂದ್ರಗುಪ್ತ’ ನಾಟಕಗಳು ಹತ್ತು ಹಲವು ಕಡೆಗಳಲ್ಲಿ ಹಲವು ಬಾರಿ ಪ್ರದರ್ಶಿಸಲ್ಪಟ್ಟು ಪ್ರದರ್ಶನದ ಮಟ್ಟಿಗೆ ದಾಖಲೆ ನಿರ್ಮಿಸಿದ–ಪ್ರೇಕ್ಷಕರ ಮೆಚ್ಚಿಕೆಗೆ ಹಾಗೂ ಪ್ರಶಂಸೆಗೆ ಪಾತ್ರವಾದ ನಾಟಕಗಳು. ದಕ್ಷಿಣ ಕನ್ನಡ ಜಿಲ್ಲಾ ಕಲೋತ್ಸವ ಸಮಿತಿಯವರು ಏರ್ಪಡಿಸಿದ

ನಾಟಕ ಸ್ಪರ್ಧೆಯಲ್ಲಿ ಅವರ 'ಷಾಜಹಾನ್' ಮತ್ತು 'ವಿಷಕನ್ಯೆ' ನಾಟಕಗಳು ಪ್ರಥಮ ಸ್ಥಾನ ಪಡೆದು ನಾಟಕ ರಚನೆಯ ಪಟ್ಟಿಗೂ ಮೊದಲ ಸ್ಥಾನ ಗಳಿಸಿದ್ದುವು.

ಚಲಚ್ಚಿತ್ರ ನಟ ಇಂದುಶೇಖರ್ ಅಭಿನಯಿಸಿದ ಹಾಗೂ ಶ್ರೀ ಕೃಷ್ಣ ಗೋಪಾಲರ ಸಹಯೋಗದಿಂದ ಬರೆದ 'ದರಿಯಾ ದೌಲತ್' ನಾಟಕ ಬೆಂಗಳೂರಲ್ಲಿ ಅಭಿನಯಿಸಲ್ಪಟ್ಟು ಅಲ್ಲಿಯ ನಾಟಕ ಪ್ರೇಮಿಗಳಿಂದ ಶಾಭಾಶ್‌ಗಿರಿ ಪಡೆದಿತ್ತು. ಸಮತಾವಾದಿ ಪಕ್ಷದ ಪ್ರಸಿದ್ಧ ಮುಂದಾಳು ದಿ॥ ಶಾಂತವೇರಿ ಗೋಪಾಲ ಗೌಡರು ಈ ನಾಟಕದ ಪ್ರದರ್ಶನವನ್ನು ಬೆಂಗಳೂರಿನ ಗುಬ್ಬಿ ಥಿಯೇಟರ್‌ನಲ್ಲಿ ಏರ್ಪಡಿಸಿದ್ದರು.

'ವಿಷಕನ್ಯೆ'ಯ ಮೋಹನ್, 'ದರಿಯಾ ದೌಲತ್' ನಾಟಕದ ಈಯಾಜ್ ಖಾನ್, 'ಸಾಮ್ರಾಟ್ ಚಂದ್ರಗುಪ್ತ'ದ ಚಾಣಕ್ಯ, ದಿ॥ ಕುಡ್ಪಿ ವಾಸುದೇವ ಶೆಣೈಯವರ 'ಸನ್ಯಾಸಿಯ ಗೊಂಗಡಿ' ನಾಟಕದ ಸನ್ಯಾಸಿ, ದಿ॥ ಬೇಲಗದ್ದೆ ಅಪ್ಪಯ್ಯ ವಿದ್ವಾನ್ ವಿರಚಿತ 'ಉಷಾ ಪರಿಣಯ' ನಾಟಕದ ಅನಿರುದ್ಧ ಇವು ದೀರ್ಘ ಕಾಲ ಅಚ್ಚಳಿಯದೆ ಪ್ರೇಕ್ಷಕರ ಮನಸ್ಸಿನಲ್ಲಿ ಉಳಿಯುವ ಕೃಷ್ಣಗೋಪಾಲರ ಪಾತ್ರಗಳು.

ನಾಟಕ ಪ್ರಪಂಚ ಬಿಟ್ಟು ಮಿಕ್ಕುಳಿದ ಕ್ಷೇತ್ರಗಳಲ್ಲೂ ಶ್ರೀ ಕೃಷ್ಣ ಗೋಪಾಲರು ತನ್ನ ಕೈಲಾದ ಸೇವೆ ಸಲ್ಲಿಸಿ ಜನಪ್ರಿಯರಾಗಿದ್ದಾರೆ. ಲಲಿತ ಕಲೆಗಳ ಏಳ್ಗೆಗೆ ತನ್ನಿಂದಾಗುವಷ್ಟು ಸಹಕಾರ ನೀಡಲು ಅವರು ಎಂದೂ ಹಿಂದೆ ಸರಿಯದವರು. ಅವರು ಶಿಕ್ಷಣ ಪಡೆದ ಮಂಗಳೂರು ಬಿ. ಇ. ಎಂ. ಹೈಸ್ಕೂಲ್ ಮತ್ತು ಗಣಪತಿ ಹೈಸ್ಕೂಲ್‌ಗಳ ಹಳೇ ವಿದ್ಯಾರ್ಥಿ ಸಂಘಗಳಲ್ಲೂ ಸಕ್ರಿಯ ಸದಸ್ಯರಾಗಿ ಈಗಲೂ ದುಡಿಯುತ್ತಿದ್ದಾರೆ.

ಸಾಮಾಜಿಕ, ಚಾರಿತ್ರಿಕ ಹಾಗು ಪೌರಾಣಿಕ ನಾಟಕಗಳನ್ನು ಬರೆವುದರಲ್ಲಿ ತನ್ನದೇ ಆದ ವಿಶಿಷ್ಟ ಶೈಲಿ ಬಳಸಿ, ನಾಟಕದ ಸಂಭಾಷಣೆಗಳು ಪ್ರೇಕ್ಷಕರ ಮನಸ್ಸಿಗೆ ನಾಟುವಂತೆ ಮಾಡಲು ಸಿದ್ಧಹಸ್ತರು. ಹಾಗಾಗಿಯೇ ಅವರ ಕೆಲವು ನಾಟಕಗಳು ಪ್ರದರ್ಶನವಾದಲ್ಲೆಲ್ಲಾ ನೋಡಿದವರಿಂದ ಸೈ ಸೈ

ಎನಿಸಿಕೊಂಡಿವೆ. ನಾಟಕದಲ್ಲಿ ನಾಯಕನ ಪಾತ್ರಕ್ಕೆ ಹೇಳಿದ ಅಂಗ ಸೌಷ್ಟವ, ದೇಹಧಾರ್ಢ್ಯ, ಅಭಿನಯ ಪ್ರೌಢಿಮೆ ಈ ವಿಶಿಷ್ಟ ಗುಣಗಳು ಎರಕ ಹೊಯ್ದುದರಿಂದಲೇ ನಟನೆಯಲ್ಲೂ ಸಾಕಷ್ಟು ಹೆಸರು ಗಳಿಸಿದ್ದಾರೆ.

ಅವರು ಬರೆದು ಹಸ್ತಪ್ರತಿಯ ರೂಪದಲ್ಲೇ ಮೂಲೆಗುಂಪಾಗಿ ಉಳಿದ ಅವರ ಶ್ರೇಷ್ಠ ಮಟ್ಟದ ನಾಟಕಗಳಲ್ಲಿ ಇದೀಗ 'ದುರಂತ ಕರ್ಣ' ಅಚ್ಚಿನ ಮಸಿ ಕಾಣುತ್ತಿರುವುದು ಅವರ ಸಹಪಾಠಿಗಳಾಗಿದ್ದ ನಮಗೆಲ್ಲರಿಗೂ ಹೆಮ್ಮೆ. ಅಚ್ಚಾದ ಪ್ರತಿಗಳೆಲ್ಲಾ ಅಲ್ಪಾವಧಿಯೊಳಗೆ ಖರ್ಚಾಗಿ ಮಿಕ್ಕುಳಿದ ನಾಟಕಗಳೂ ಪ್ರಕಾಶಕ್ಕೆ ಬರಲು ಅವಕಾಶ ಮಾಡಿ ಕೊಡಲೆಂದು ಮನವಾರೆ ಹಾರೈಸಿ ನಾಟಕ—ಪ್ರಪಂಚದಲ್ಲಿ ಇನ್ನೂ ಹಲವಾರು ವರ್ಷ ಪರಿಣಾಮ ಕಾರಿ ಸೇವೆ ಸಲ್ಲಿಸಲು ಪರಮಾತ್ಮನು ಅವರಿಗೆ ದೀರ್ಘಾಯುರಾರೋಗ್ಯ ಸುಖ ಭಾಗ್ಯಗಳನ್ನು ಕರುಣಿಸಲೆಂದು ಅನನ್ಯ ಭಕ್ತಿಯಿಂದ ಪ್ರಾರ್ಥಿಸುತ್ತೇನೆ.

ಬಿ. ವಿ. ಬಾಳಿಗಾ
ಸಂಪಾದಕ, 'ಪಂಚ್ಕಾದಾಯಿ'
ಕೊಂಕಣಿ ಮಾಸಿಕ ಪತ್ರಿಕೆ.

ಅಳ್ಕೆ, ಮಂಗಳೂರು-3.
ತಾ. 23-9-1987.

'ನಲ್ನುಡಿ'.... ೩

ನಮ್ಮ ಜಿಲ್ಲೆಯ ಕಲಾಭಿಮಾನಿಗಳಲ್ಲಿ ಶ್ರೀ ಕೃಷ್ಣಗೋಪಾಲರನ್ನು ಅರಿಯದವರೇ ಇರಲಿಕ್ಕಿಲ್ಲ. ಅವರಿಂದ ರಚಿತವಾದ ಹಲವಾರು ನಾಟಕಗಳು ಜಿಲ್ಲೆಯಾದ್ಯಂತ ಅಭಿನಯಿಸಲ್ಪಟ್ಟಿವೆ. ಮಾತ್ರವಲ್ಲ ಜಿಲ್ಲೆಯ ಹೊರಗೂ ಅನೇಕ ಪ್ರದರ್ಶನಗಳಾಗಿವೆ. ನಟನಾಗಿ, ನಿರ್ದೇಶಕನಾಗಿ, ರಂಗಸಜ್ಜಿಕೆಯ ತಾಂತ್ರಿಕನಾಗಿ,ನೇಪಥ್ಯದ ಅಧ್ವರ್ಯುವಾಗಿ. ಅವರು ಪಡೆದ ಅನುಭವ ಅವರ ಕೃತಿಗಳಲ್ಲಿ ಮೂಡಿಬಂದಿವೆ. ಹಾಗಾಗಿ ಅವರ ನಾಟಕಗಳನ್ನು ಆಡುವುದೆಂದರೆ ಕಲಾವಿದರಿಗೆ ಅಚ್ಚುಮೆಚ್ಚು. ನಾಟಕಗಳ ಸಂಭಾಷಣೆಯೇ ನಟರಿಗೆ ಸ್ಫೂರ್ತಿ ನೀಡುತ್ತದೆ. ನಾಟಕದ ತಂತ್ರದ ಜತೆಗೆ ಭಾಷಾಪಾಂಡಿತ್ಯವನ್ನೂ ಬೆರಸಿ ಪಾತ್ರಗಳನ್ನು ರಚಿಸಿದ್ದಾರೆ. ಸುಪ್ತವಾದ ಪ್ರತಿಭೆಯನ್ನು ಬಡಿದೆಬ್ಬಿಸಿ ಉತ್ತಮ ನಟನಾ ಕೌಶಲ್ಯವನ್ನು ತೋರಿ ಮೆರೆಯಲು ನಟರಿಗೆ ಇನ್ನೇನು ಬೇಕು? ಶ್ರೀಯುತರ ನಾಟಕಗಳು ಯಶಸ್ವಿಯಾಗಲು ಸತ್ವಯುತವಾದ ಭಾವಪೂರ್ಣವಾದ ಮಾತುಗಾರಿಕೆಯೂ ಮುಖ್ಯವಾಗಿದೆ.

ಶ್ರೀ ಕೃಷ್ಣಗೋಪಾಲ ಅವರು ಬರೇ ಒಬ್ಬ ವ್ಯಕ್ತಿಯಲ್ಲ. ಅವರೇ ಒಂದು ಶಕ್ತಿ. ಸಮಾಜದ ವಿವಿಧ ರಂಗಗಳಲ್ಲಿ ನಿಷ್ಠೆಯಿಂದ ದುಡಿದವರು. ಹದಿಹರೆಯದಲ್ಲೇ ಮೂಡಬಿದ್ರೆಯ ಸರಸ್ವತಿ ಸೇವಾ ಸಂಘದ ಪ್ರಥಮ ಕಾರ್ಯದರ್ಶಿಗಳಾಗಿ ನಾಡಹಬ್ಬವನ್ನು ನಡೆಸಿದವರು. ಕನ್ನಡದ ಉದ್ದಾಮ ಸಾಹಿತಿಗಳನ್ನು ಆಮಂತ್ರಿಸಿ ವರ್ಷದಲ್ಲಿ ಹತ್ತು ದಿನಗಳ ಕಾಲ ಸಂಗೀತ, ನೃತ್ಯ, ನಾಟಕ ಹಾಗೂ ಭಾಷಣಗಳನ್ನೇರ್ಪಡಿಸಿ, ಆಸುಪಾಸಿನ ಎಲ್ಲರಿಗೂ ರಸದೌತಣವನ್ನುಣಿಸಿದವರು. ಅವರ ಸಮಾಜ ಸೇವೆ ಇತರ ತರುಣರಿಗೆ ಆದರ್ಶಪ್ರಾಯ.

ಮೃದು ಹೃದಯದ, ಜನರ ನೋವು ನಲಿವುಗಳಿಗೆ ಸ್ಪಂದಿಸುವ ಸರಳ ಜೀವಿ ಶ್ರೀ ಕೃಷ್ಣಗೋಪಾಲರು. ಅವರ ಸ್ನೇಹದ ಸವಿಯನ್ನು ಅನುಭವಿಸಿ

ದವರಿಗೆ ಮಾತ್ರ ಅವರ ಪರಿಚಯ. ಬಹುಶಃ ಅವರ ಕರ್ತೃತ್ವ ಶಕ್ತಿಗೆ ನಮ್ಮ ಜಿಲ್ಲೆ ತುಂಬಾ ಚಿಕ್ಕದಾಯಿತು ಎನಿಸುತ್ತದೆ. ವಿಶಾಲ ನಗರಗಳಲ್ಲಿ ಅವರ ಪ್ರತಿಭೆಗೆ ಬೇಕಾದ ಅವಕಾಶಗಳು ಲಭಿಸಿ ಇನ್ನಷ್ಟು ಜನಸಾಮಾನ್ಯರಿಗೆ-ಕಲಾವಿದರಿಗೆ ಅವರ ಸಾಮರ್ಥ್ಯದ ಅರಿವಾಗುತಿತ್ತೋ ಏನೋ. ಅವರ ಕೀರ್ತಿಯು ವಿಶಾಲವಾಗಿ ಪಸರಿಸುತ್ತಿತ್ತು.

ಗೆಳೆಯ ಕೃಷ್ಣಗೋಪಾಲರಿಂದ ಇನ್ನಷ್ಟು ಕೃತಿಗಳು ಮೂಡಿಬರಲಿ. ಅವರ ಪ್ರತಿಭೆಯ ಪ್ರಯೋಜನವನ್ನು ಜನರು ಪಡೆಯುವಂತಾಗಲಿ ಎಂದು ಹಾರೈಸುತ್ತೇನೆ.

ಶ್ರೀಯುತರಿಗೆ ಪರಮಾತ್ಮ ಸಕಲ ಶಕ್ತಿ ಸಾಮರ್ಥ್ಯ ಆರೋಗ್ಯ ಭಾಗ್ಯ ಕರುಣಿಸಿ ಹರಸಲಿ.

ಯೆಲ್ಲೂರು ಉಮೇಶರಾವ್
ಕಾರ್ಯದರ್ಶಿ
ದ. ಕ. ಜಿಲ್ಲಾ ಸಂಗೀತ ನಾಟಕ ಅಕಾಡಮಿ
ಮಂಗಳೂರು.

'ನಲ್ನುಡಿ'.... ೪

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಖ್ಯವಾಗಿ ಮಂಗಳೂರಲ್ಲಿ ರಂಗ ಪ್ರಿಯರು ನಾಟಕದ ಬೆಳವಣಿಗೆಯ ಕುರಿತು ಪ್ರಸ್ತಾಪ ಮಾಡುವಾಗ ಕೃಷ್ಣಗೋಪಾಲರು ಈ ನಿಟ್ಟಿನಲ್ಲಿ ಮಾಡಿದ ಸಾಧನೆ ಕಣ್ಣೆದುರಿಗೆ ನಿಲ್ಲದೆ ಇರುವುದಿಲ್ಲ. ಅವರ ಲೇಖನಿಯಿಂದ ಮೂಡಿಬಂದ ಹಲವು ನಾಟಕ ಕಗಳು, ಅವರ ಅಭಿನಯ ಕೌಶಲ್ಯ, ಅವರ ಅಂಗ ಸೌಷ್ಠವ, ಅವರ ಮನ ಮೋಹಕ ನಿಲುವು, ಅವರ ಸ್ಫುರದ್ರೂಪ ಇವುಗಳಿಂದೆಲ್ಲ ಅವರು ಉತ್ತಮ ವರ್ಗದ ರಂಗಕಲಾವಿದರಾಗಿ ಮೆರೆಯುವ ಭಾಗ್ಯ ಅವರ ಪಾಲಿಗೆ ಬಂದಿದೆ. ಮಂಗಳೂರ ರಂಗಭೂಮಿ ಅವರನ್ನು ಮರೆಯುವಂತಿಲ್ಲ. ಅವರ ಉತ್ತಮ ಕೃತಿಗಳಾದ ವಿಷಕನ್ಯೆ, ಸಾಮ್ರಾಟ್ ಷಹಜಹಾನ್, ಸಾಮ್ರಾಟ್ ಚಂದ್ರಗುಪ್ತ ಜಿಲ್ಲೆಯಾದ್ಯಂತ ಹಲವಾರು ಪ್ರಯೋಗಗಳನ್ನು ಕಂಡು ಮೆರೆದ ಕೆಲವು ನಾಟಕಗಳು.

ಸಂದರ್ಭಕ್ಕೆ ತಕ್ಕ ನಾಟಕಗಳನ್ನು ಬೇಡಿಕೆ ಬಂದಾಗ ಬರೆಯುವುದರಲ್ಲಿ ನಿಸ್ಸೀಮರು, ಕೃಷ್ಣಗೋಪಾಲರು. ಅಂತಹ ಒಂದು ವಿಶೇಷ ಸಂದರ್ಭಕ್ಕೆಂದೇ ಬರೆದ ನಾಟಕ 'ದುರಂತ ಕರ್ಣ'. ಕರ್ಣನ ಕುರಿತು ಬರೆದ ಹಲವಾರು ನಾಟಕಗಳು ದೊರಕುತ್ತಿವೆ ನಿಜ. ಆದರೆ ಈ ನಾಟಕದಲ್ಲಿ ಒಂದು ಹೊಸತನವನ್ನು ನಾವು ಕಾಣಬಹುದು. ಕೆಲವು ವರ್ಷಗಳ ಹಿಂದೆ ಈ ನಾಟಕ ಅವರ ಲೇಖನಿಯಿಂದ ಉದಯಿಸಿದ್ದು, ಇಷ್ಟರಲ್ಲೆ ಕೆಲವು ಪ್ರಯೋಗ ಗಳನ್ನು ಕಂಡು ಜನಪ್ರಿಯವಾಗಿದೆ. ಮಂಗಳೂರಿನ ಹಲವು ಪ್ರಸಿದ್ಧ ನಟ ನಟಿಯರು ಇದರಲ್ಲಿ ಅಭಿನಯಿಸಿ ವಿಜೃಂಭಿಸಿದ್ದಾರೆ.

"ಕುಲದಲ್ಲಿ ಕೀಳು ಇವನು ಎಂದು ಕಡೆಗಣಿಸಿ ಕಂಡರೆ ಆ ಬಹು ಬಂಧುವರ್ಗವನ್ನೆಲ್ಲ ಬಿಟ್ಟು, ನನ್ನನ್ನು ಕೈಕೊಂಡು ಸಿಂಹಾಸನದ ಮೇಲೆ ಕೂರಿಸಿ ನನಗೆ ಅಭಿಷೇಕ ಮಾಡಿ ಕುಲದ ಮಲಿನತೆಯನ್ನು ತೊಳೆದು ಹಾಕಿ

ದನು. ಕೌರವ ಕುಲದೊಡನೆ ಬೆಸುಗೆ ಹಾಕಿ ಸೇರಿಸಿಕೊಂಡನು. ಇಂಥ ಅವನಿಪಾಲಕ ತಿಲಕ ಕುರುಪತಿಗೆ ಆಪ್ತರಿಲ್ಲವಲ್ಲ". ಎಂದು ತನ್ನ ಕೊನೆಯ ಕಾಲದಲ್ಲಿ ಅಳಲಿದ ಕಲಿಕರ್ಣನ ಜೀವನ ದುರಂತಮಯ. ಹುಟ್ಟು ಬೆಳವಣಿಗೆ ಎಲ್ಲವೂ ದುರಂತಮಯವಾಯಿತು. ಅಗ್ರಗಣ್ಯ ಸ್ವಾಮಿನಿಷ್ಠನಿಗೆ, ಬಾಳು ಬಂಗಾರವಾಗಲಿಲ್ಲ. ಅಂಗಾರವಾಗಿ ಅಸ್ತಮಿಸಿತು. ಎಂತಹ ಎತ್ತರದ ವ್ಯಕ್ತಿತ್ವ. ಅಂತಹ ನರೋತ್ತಮನನ್ನು ತನ್ನ ನಾಟಕದಲ್ಲಿ ಸೊಗಸಾಗಿ ಸೆರೆ ಹಿಡಿಯುವುದು ಸುಲಭದ ಕಾಯಕವೇನಲ್ಲ. ಮಿತ್ರ ಕೃಷ್ಣಗೋಪಾಲರು ಈ ಕಾರ್ಯದಲ್ಲಿ ಜಯಶೀಲರಾಗಿದ್ದಾರೆ,

ಅವರಿಗೆ ಅಭಿನಂದನೆಗಳು.

ಕೇಕಾನ ರಾಮಚಂದ್ರ
ಅಧ್ಯಕ್ಷ, ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು
ಮಂಗಳೂರು–೫೭೫೦೦೧.

ಪಾತ್ರಗಳು

೧. ಶ್ರೀಕೃಷ್ಣ
೨. ಕರ್ಣ
೩. ಕೌರವ
೪. ಅರ್ಜುನ
೫. ಪರಶುರಾಮ
೬. ಧರ್ಮರಾಯ
೭ ಭೀಷ್ಮ
೮. ದ್ರೋಣ
೯. ಕೃಪ
೧೦, ಭೀಮ
೧೧. ಶಲ್ಯ
೧೨. ಶಕುನಿ
೧೩. ಅಶ್ವತ್ಥಾಮ
೧೪. ಕುಂತಿ
೧೫. ದ್ರೌಪದಿ
೧೬, ಸುಮುಖ
೧೭. ದುರ್ಮುಖ

ದುರಂತ ಕರ್ಣ

ದೃಶ್ಯ—1

(ಪ್ರಾತಃಕಾಲ—ಗಂಗಾತೀರ—ದೂರದ ಆಶ್ರಮಗಳಿಂದ ವೇದಪಠನ ಅಸ್ಪುಟವಾಗಿ ಕೇಳಿ ಬರುತ್ತಿರುವುದು. ಕುಂತಿ, ಕಪ್ಪು ಸೀರೆ ಉಟ್ಟು ಶಿಶುವೊಂದನ್ನು ಹಿಡಿದುಕೊಂಡು ಭಯವಿಹ್ವಲಳಾಗಿ ಹಿಂದು ಮುಂದು ನೋಡುತ್ತಾ ಮೆಲ್ಲಗೆ ಬರುವಳು—ಗಂಗಾ ತೀರದಲ್ಲಿ ನಿಂತು ಸೂರ್ಯನಿಗಭಿಮುಖಳಾಗಿ......)

ಕುಂತಿ: ಭಗವಾನ್ ಸೂರ್ಯದೇವಾ, ಪ್ರಮಾದವಶಾತ್ ಅರಿಯದೆ ಮಾಡಿಕೊಂಡ ಅಪರಾಧದ ಫಲವೇ ಈ ಎನ್ನ ಮುಗ್ಧ ಶಿಶು. ಅತಿಥಿಯಾಗಿ ಆಗಮಿಸಿದ್ದ ದೂರ್ವಾಸ ಮುನಿವರ್ಯರು ನಾಸಿತ್ತ ಸತ್ಕಾರವ ಮೆಚ್ಚಿ, ಮಹಾತ್ಮರಾದ ಮಕ್ಕಳಾಗಲು ಮಂತ್ರೋಪದೇಶವ ಮಾಡಿದರು. ಆ ಮಹಾ ಮಂತ್ರಗಳ ಮಹಿಮೆಯುನರಿಯದೆ ಮಕ್ಕಳಾಟಿಕೆಯ ಮನದಿಂದ, ಮದುವೆ ಆಗುವ ಮುನ್ನವೇ ನಿನ್ನ ಮಂತ್ರವನ್ನೆ ಮೊದಲಾಗಿ ಜಪಿಸಿದೆ. ಪರಿಣಾಮವಾಗಿ, ನಿನ್ನ ತೇಜಸ್ಸನ್ನೇ ಹೊತ್ತ ಈ ಸುಂದರ ಶಿಶು ನನ್ನ ಗರ್ಭದಲ್ಲಿ ಬೆಳೆದು ಇಂದು ನಿನ್ನ ಬೆಳಕ ಕಂಡಿತು. ಆದರೆ ಭಗವಾನ್, ಇನ್ನೂ ಕನ್ಯೆಯಾಗಿರುವ ನಾನು ಈ ಮಗುವನ್ನು ಮಡಿಲಲ್ಲಿ ಕಟ್ಟಿಕೊಂಡು ಈ ಪ್ರಪಂಚದಲ್ಲಿ ಯಾವ ಮುಖದಿಂದ ಬಾಳಲಿ? ಹಾಗೆಂದು ತಾಯ್ತನ ತೊರೆದು, ನಾನೆಂತು ಈ ಮಗುವನ್ನು ಕೈಬಿಡಲಿ? ಅಯ್ಯೋ ನನ್ನ ಬಾಳಿಗೆ ಬಂದ ದುರ್ಗತಿಯೇ? ...ಹೆಣ್ಣಲ್ಲವೇ ನಾನು? ...ಹೆಣ್ಣಾಗಿ, ವಿವಾಹಪೂರ್ವ ಅದೇಕೆ ಹಡೆದೆ ಈ ತೇಜೋಭರಿತ ಶಿಶುವ? ಹೆಣ್ಣಾಗಿ—ಹೆತ್ತ ಈ ಹಸುಳೆಯ ಹೇಗೆ ಎಸೆಯಲಿ ಈ ಹೊಳೆಯಲ್ಲಿ? ಹಾ! ನನ್ನ ಪ್ರಾರಬ್ಧವೇ! ಆವ ಪಾಪ ಕರ್ಮದ ಫಲವೋ—ಮತ್ತಾವ ದೋಷದ ದುರ್ವಿಧಿಯೋ?... ಮಗೂ ನೋಡಿತ್ತ. ನಾನು ನಿನ್ನ ಹೆತ್ತವ್ವ, ಮಹಾ ಪಾಪಿ. ಎತ್ತಿಕೊಂಡ ಈ ದುರ್ಭಾಗ್ಯ

ಕೈಗಳಿಂದಲೇ ಗಂಗಾಮಾತೆಗೆ ಅರ್ಪಿಸುತ್ತಿದ್ದೇನೆ ನಿನ್ನನ್ನು—ಅಮ್ಮಾ ಎಂದು ಕರೆಯಲು ಕಲಿಯುವ ಮುನ್ನವೆ, ಕೇವಲ ಅಪವಾದ ಭಯದಿಂದ. ಇನ್ನೆಂದು ಕಾಣುವೆನೋ ನಿನ್ನ; ಅಥವಾ ಕಾಣದೆ ಇರುವೆನೊ! ನಾನರಿಯೆ. ಎಂತಿದ್ದರೂ ಮಹಾ ಪಾಪಿಯಾದ ಈ ನಿನ್ನ ಹೆತ್ತ ತಾಯಿಯನ್ನು ಕ್ಷಮಿಸು ಮಗು, ಕ್ಷಮಿಸು. ಭಗವಾನ್ ಸೂರ್ಯದೇವಾ, ಈ ಮಗುವನ್ನು ಸಾಕಿ ಸಲಹುವ ಭಾಗ್ಯ ಹೆತ್ತ ತಾಯಿಯಾದ ನನಗಿಲ್ಲ. ನಿನ್ನ ಮಂತ್ರದಿಂದಲೇ ಜನಿಸಿದ ಈ ಶಿಶುವಿಗೆ ನೀನೇ ತಂದೆ,—ಮುಂದೆ ಈ ಗಂಗಾದೇವಿಯೇ ತಾಯಿ. ಆದ್ದರಿಂದ ಕಲ್ಲೆದೆ ಹೊತ್ತು ಈ ಕಂದನನ್ನು ಗಂಗಾ ಮಾತೆಗರ್ಪಿಸುತಿದ್ದೇನೆ. ನೀವೇ ರಕ್ಷಿಸಿರಿ ಈ ಶಿಶುವ. ನೀವೇ ರಕ್ಷಿಸಿರಿ. ನನ್ನನ್ನು ಮಾತ್ರ ಕ್ಷಮಿಸಿರಿ.

(ಮಗುವನ್ನು ಮುದ್ದಿಸಿ ಗಂಗೆಯಲ್ಲಿ ಬಿಡುವಳು)

(ತೆರೆ ಬೀಳುವುದು)

ದೃಶ್ಯ—2 ಮಾರ್ಗ

ಸುಮುಖ : ಕೇಳಿದೆಯೋ ದುರ್ಮುಖ ಸುದ್ದಿ?— ಆಶ್ಚರ್ಯ.

ದುರ್ಮುಖ : ಹೇಳಿದರೆ ಕೇಳುವೆನು, ಕಿವಿಯಿದೆ—ಕಿವುಡನಲ್ಲ.

ಸು. : ಅಲ್ಲವೋ—ಅದಿರಥ ಅಪ್ಪನಾದ

ದು. : ಯಾರಿಗೆ? ನಿನಗೆ ಅಪ್ಪನಾದನೆ?

ಸು. : ನನಗಲ್ಲವೊ: ಹುಚ್ಚ, ಅವನ ಮಗನಿಗೆ ಅವನು ಅಪ್ಪನಾದ.

ದು. : ಏನು ಹೇಳುವಿಯೋ ಸುಮುಖ. ಈ ಮುದಿ ಪ್ರಾಯದಲ್ಲಿ ಅಧಿರಥನಿಗೆ ಮಕ್ಕಳಾಗುವುದೆಂದರೆ ಹೇಗೋ ಅದು? ಅವನು ಆಚೆಗೆ ಬಹಳ ಹತ್ತಿರವಾಗಿದ್ದಾನೆ.

ಸು. : ಅದೇ ಒಂದು ವಿಶೇಷ, ಹೇಗೆಂದರೆ ಅದಿರಥ ಗಂಗಾ ನದಿಯ ತಟದಲ್ಲಿದ್ದಾಗ ಮಗುವೊಂದು ನದಿಯಲ್ಲಿ ತೇಲಿ ಬಂತಂತೆ. ಅದನ್ನು ನೋಡಿ ಅದಿರಥ ತನಗೆ ಮಕ್ಕಳಿಲ್ಲ

ದುದಕ್ಕೆ ದೇವರೇ ಮಗುವನ್ನು ಕೊಟ್ಟು ಕಳುಹಿಸಿದನೆಂದು ಸಂತೋಷದಿಂದ ಮನೆಗೆ ತಂದನಂತೆ. ಮಗುವೆಂದರೆ ಮಗುವಂತೆ! ಸಾಕ್ಷಾತ್ ಸೂರ್ಯನದೇ ತೇಜಸ್ಸಂತೆ, ಕವಚ ಕುಂಡಲಗಳಿವೆಯಂತೆ, ಅದಿರಥನ ಪೂರ್ವ ಪುಣ್ಯ ವೆಂದೇ ಹೇಳಬೇಕು, ಅವನ ಸಂತೋಷಕ್ಕೆ ಪಾರವೇ ಇಲ್ಲವಂತೆ.

ದು. : (ತುಸು ಅವನಷ್ಟಕ್ಕೆ ಆಲೋಚಿಸಿ) ಅದು-ಮಗು-ಎಷ್ಟು ಹೊತ್ತಿಗೆ ಎಲ್ಲಿ—ನದಿಯ ಯಾವ ಭಾಗದಲ್ಲಿ-ಹೇಗೆ ದೊರಕಿತಂತೆ?

ಸು. : ಅದೆಲ್ಲ ನಿನಗೆ ಯಾಕೋ?

ದು. : ಯಾಕೆಂದು ಗೊತ್ತಾಗಲಿಲ್ಲವೇ ಸುಮುಖಿ? ನನಗೂ ಅಪ್ಪ ನಾಗಬೇಕೆಂಬ ಒಂದು ಆಸೆ, ನನಗಾಗಿ ಅಲ್ಲವಾದರೂ ನಮ್ಮ ಮನೆಯಾಕೆಯ ಕಿರುಕುಳ ತಪ್ಪಿಸಲಿಕ್ಕಾಗಿಯಾದರೂ ನಾನೊಬ್ಬ ಅಪ್ಪ ಹೇಗಾದರೂ ಆಗುತ್ತಿದ್ದರೆ-ನನಗೂ ಒಂದು ಮಗು ಸಿಗುತ್ತಿದ್ದರೆ—ನಾನೂ ಅವಳ ಕೈಯಿಂದ ಪಾರಾಗುತಿದ್ದೆ,

ಸು. : ಪಾಪ, ಅದಿರಥ ಮುದುಕ—ನೀನೇನಾಗಿದ್ದಿಯೋ? ಇನ್ನೂ ನಲ್ವತ್ತು ದಾಟಿಲ್ಲ,

ದು. : ದಾಟಿಲ್ಲ ಹೌದು. ಆದರೆ ಇನ್ನೂ ಮಗುವಾಗಲಿಲ್ಲ.

ಸು. : ಭಾಗ್ಯವೇ ಇಲ್ಲವೋ ಏನೋ?

ದು. : ಕೊನೆಗೆ ಅದಿರಥನ ಭಾಗ್ಯವಾದರೂ ಆಗಬಹುದಿತ್ತು,

ಸು. : ಅದು ಹೇಗೋ? ಭಾಗ್ಯವೆಂದರೆ ನಾವು ಬಯಸಿದಾಗ ಬರುತ್ತದೆಯೆ? ಅದಿರಥ ಎಣಿಸಿದ್ದನೇ? ಅಥವಾ ಇಚ್ಛಿಸಿದ್ದನೆ? ಭಾಗ್ಯ ತಾನಾಗಿ ಬಂತು, ಭಾಗ್ಯಶಾಲಿಯಾದ.

ದು. : ಭಾಗ್ಯಶಾಲಿಯಾಗಬೇಕಾದರೆ ಏನು ಮಾಡಬೇಕೋ ಸುಮುಖಿ?

ಸು. : ಮಾಡುವುದೇನು? ಪೂರ್ವಜನ್ಮದಲ್ಲಿ ಪುಣ್ಯಮಾಡಿರಬೇಕು. ಆಗ ಒಂದಲ್ಲೊಂದು ತೆರ ಈ ಜನ್ಮದಲ್ಲಿ ಭಾಗ್ಯ ಸಿಗುತ್ತೆ.

ದು. : ಅಲ್ಲ ಸುಮುಖ, ನಾನೂ ಆ ಗಂಗಾನದಿ ದಡದಲ್ಲಿ ಕಾದರೆ, ನನಗೂ ಒಂದು ಮಗು ಸಿಗಲಿಕ್ಕಿಲ್ಲವೇನೋ?

ಸು. : ಹಾಗೆಲ್ಲಾ ಸಿಗಲಿಕ್ಕೆ ಅದೇನಾದರೂ ಮೀನೊ? ಏನೋ, ಹೇಗೋ ಮಗುವೊಂದು ತೇಲಿಬಂತು. ಅದಿರಥನಿಗೆ ಕಾಣ ಸಿಕ್ಕಿತು, ಮನೆಗೆ ತಂದ. ಇಂದು ಅವನ ಮನೆಯಲ್ಲಿ ಮಗು ದೊರೆತ ಸಂತೋಷಕ್ಕಾಗಿ ಸಮಾರಂಭವೇರ್ಪಡಿಸಿ ದ್ದಾನಂತೆ, ನಾವೂ ಅಲ್ಲಿಗೆ ಹೋಗೋಣ, ಆ ಮಗು ಹೇಗುಂ ಟೆಂದು ನೋಡೋಣ ಬಾ,

ದು. : ನೀನು ಅಲ್ಲಿಗೆ ಹೋಗು. ನಾನು ನದಿ ದಡಕ್ಕೆಹೋಗುತ್ತೇನೆ. ನನಗೂ ಒಂದು ಮಗು ದೊರೆವುದೋ ನೋಡುತ್ತೇನೆ.

ಸು. : ಏ ಹುಚ್ಚಾ, ನಿನಗೇನು ಭ್ರಾಂತಿಯೋ, ನನಗೆ 24 ಮಕ್ಕಳು ನೋಡು. ಆದರೆ ಆ ಮಕ್ಕಳನ್ನು ನೋಡಿದರೆ, ಮಕ್ಕಳಿ ಲ್ಲದೆ ಇದ್ದರೇ ಒಳ್ಳೆಯದಿತ್ತು, ಅನ್ನಿಸುತ್ತದೆ. ಅಂತಹ ದುರ್ಬುದ್ಧಿ ಮಕ್ಕಳು. ಏನು ಮಾಡಲಿ? ಮಕ್ಕಳ ತಾಯಿ ಗಾಗಿ ಸುಮ್ಮನಿದ್ದೇನೆ. ಇಲ್ಲವಾದರೆ ಎಲ್ಲವನ್ನೂ ಆ ಗಂಗಾ ನದಿಯಲ್ಲಿ ಬಿಸಾಡುತ್ತಿದ್ದೆ.

ದು: : ಹಾಗಾದರೆ ಅವರನ್ನು ಯಾವಾಗ ನದಿಗೆ ಬಿಸಾಡುವೆ? ನೀನು ಬಿಸಾಡಿದಾಗ ಒಂದು ಮಗುವನ್ನು ನದಿಯಿಂದ ಹೆಕ್ಕಿ ನನ್ನ ಯಜಮಾನಿಗೆ ಕೊಡುವೆ, ಆಗದೆ?

ಸು. : ನಿನಗೆ ಮಕ್ಕಳದ್ದೇ ಹುಚ್ಚು. ಅದಕ್ಕೆಲ್ಲಾ ಉಪಾಯ ನಾನು ಹೇಳಿಕೊಡುವೆ, ಬಾ ಹೋಗೋಣ.

(ಹೋಗುವರು.)

ದೃಶ್ಯ—3

(ಪರಶುರಾಮನ ಆಶ್ರಮ. ಅಶ್ವತ್ಥ ಕಟ್ಟೆಯಲ್ಲಿ ಪರಶುರಾಮ—ಅವನ ಕಾಲ ಬುಡದಲ್ಲಿ ಕರ್ಣ ವಿನೀತನಾಗಿ ಕೈಮುಗಿದು ಕುಳಿತಿರುತ್ತಾನೆ)

ರಾಮ: ಇಂದು ಕೊನೆಯ ದಿನವಲ್ಲವೇ ಕರ್ಣ?

ಕರ್ಣ: ಅಹುದು ಗುರುದೇವಾ.

ರಾಮ: ಕರ್ಣಾ, ಕಳೆದು ಹೋದ ಈ ಎರಡು ಯುಗಗಳಿಂದ ನನ್ನೀ ಆಶ್ರಮದಲ್ಲಿ ನೂರಾರು ದ್ವಿಜರು ಶಿಷ್ಯರಾಗಿ ಹೋಗಿರುವರು. ಇಚ್ಛಾ ಮರಣಿ ಭೀಷ್ಮ. ಆಚಾರ್ಯ ದ್ರೋಣ ಇವರೂ ನನ್ನ ಶಿಷ್ಯವರ್ಗದವರೆ, ಆದರೂ ಕರ್ಣ–ನನ್ನ ಮನಬಿಚ್ಚಿ ಮಾತಾಡುವೆ. ನಿನ್ನಂತಹ ಶಿಷ್ಯ ನನಗೆ ಈ ವರೆಗೂ ದೊರೆತದ್ದಿಲ್ಲ- ನಿನ್ನ ನಿರ್ಮಲ ಅಂತಃಕರಣದ ಸೇವೆ: ವಿನಯ, ಭಕ್ತಿಯ ಭಂಡಾರ. ಶಕ್ತಿಯ ಸಂಪತ್ತು ನನ್ನ ಹೃದಯವನ್ನೇ ಸೂರೆಗೊಂಡಿದೆ. ಆದ್ದರಿಂದ ನಿನ್ನ ಮೇಲಿನ ಅಗಾಧವಾದ ವಾತ್ಸಲ್ಯದಿಂದ ನಿನಗಿಂದು ಅಮೋಘವಾದ—ಅಪೂರ್ವವಾದ ಮಹಾಮಂತ್ರಪೂರಿತ ಮಾರಕಾಸ್ತ್ರವನ್ನು ಉಪದೇಶಿಸುವೆನು. ಈ ವಿದ್ಯೆ ಈ ವರೆಗೆ ನಾನು ಇನ್ನೊಬ್ಬರಿಗೆ ಕಲಿಸಿದ್ದಿಲ್ಲ. ಕರ್ಣಾ, ನಾನು ಹೇಳಿದ್ದಂತೆ ನಿನ್ನೆ ರಾತ್ರಿ ಉಪವಾಸ ವ್ರತವನ್ನಾಚರಿಸಿದೆಯಷ್ಟೆ;

ಕರ್ಣ: ಅಹುದು ಗುರುದೇವಾ.

ರಾಮ: ಪ್ರಾತಃಕರ್ಮಗಳನ್ನು ವಿಧಿವತ್ತಾಗಿ ಪೂರೈಸಿದೆಯಷ್ಟೆ?

ಕರ್ಣ: ಇಂದು ಸ್ವಲ್ಪ ವಿಶೇಷವಾಗಿಯೇ ಕೈಗೊಂಡಿರುವೆನು ಗುರುದೇವಾ

ರಾಮ: ತದೇಕಚಿತ್ತನಾಗು (ತುಸುಹೊತ್ತು ಧ್ಯಾನಮಗ್ನನಾಗಿ ನಂತರ ಕರ್ಣನ ಕಿವಿಗಳಲ್ಲಿ ಮಂತ್ರೋಪದೇಶ ಮಾಡುವನು) ಕರ್ಣಾ, ಇದು ನಿನಗೆ ನನ್ನ ಕೊನೆಯ ಉಪದೇಶ– ನಾನು ಉಪದೇಶಿಸಿದ ಸರ್ವ ವಿದ್ಯೆಯನ್ನೂ, ಸತ್ಯ ಸಾಧನೆಗಾಗಿ, ಧರ್ಮ ರಕ್ಷಣೆಗಾಗಿ

ಉಪಯೋಗಿಸು. ಇನ್ನು ನೀನು ತೆರಳಬಹುದು. ಭಗವಂತನು ನಿನಗೆ ಸತ್ಕೀರ್ತಿಯನ್ನು ದಯಪಾಲಿಸಲಿ.

ಕರ್ಣ: (ಆತ್ಯಾನಂದದಿಂದ)ಗುರುದೇವಾ, ಗುರುದೇವಾ, ಧನ್ಯನಾದೆ, ಧನ್ಯನಾದೆ. ನನ್ನಂತಹ ಪುಣ್ಯಾತ್ಮರು ಜಗತ್ತಿನಲ್ಲಿ ಯಾರಿದ್ದಾರು? ತಮ್ಮ ದಿವ್ಯ ಚರಣಗಳೇ ನನ್ನನ್ನು ಪರಮ ಪಾವನನನ್ನಾಗಿ ಮಾಡಿತು. ತಮ್ಮ ದರ್ಶನ ಲಾಭವೇ ನನ್ನನ್ನು ಪರಾಕ್ರಮಿಯನ್ನಾಗಿ ಪರಿವರ್ತಿಸಿತು. ಗುರುದೇವಾ, ನಾನು ಧನ್ಯನು. ಆಚಾರ್ಯ ಶ್ರೇಷ್ಠರಾದ ಭೀಷ್ಮ ಪಿತಾಮಹರಿಗೆ ಬೋಧಿಸದ- ಧನುರ್ಧಾರಿಗಳಲ್ಲಿ ದುರ್ಧರರೆನಿಸಿದ ದ್ರೋಣಾಚಾರ್ಯರಿಗೆ ಹೇಳಿಕೊಡದ ಧನುರ್ವಿದ್ಯಾ ಶಾಸ್ತ್ರಗಳನ್ನು ನನಗೆ ಹೇಳಿಕೊಟ್ಟು ನನ್ನ ಬಾಳನ್ನೇ ಬೆಳಗಿಸಿದಿರಿ. ನನ್ನ ಜೀವನವನ್ನೇ ಸಾರ್ಥಕಗೊಳಿಸಿದಿರಿ. ಈ ಋಣ ಭಾರವನ್ನು ನಾನೆಂತು ತೀರಿಸಲಿ ಗುರುವೇ?

ರಾಮ: ಋಣ ಭಾರವೇ? ಕರ್ಣಾ, ನಾನು ಕ್ಷಣ ಕ್ಷಣ ನಿನಗೆ ಬೋಧಿಸಿದ್ದನ್ನು ಮರೆತೆಯೇನು? ನಾನು ಕಲಿಸಿಕೊಟ್ಟ ಸಕಲ ಶಸ್ತ್ರಾಸ್ತ್ರ ವಿದ್ಯೆಯನ್ನು, ಈ ಪ್ರಪಂಚದಲ್ಲಿ ಮಹಾ ಮದಾಂಧರಾದ, ಅಧಿಕಾರ ಲಾಲಸಿಗಳಾದ ದುಷ್ಟ ಕ್ಷತ್ರಿಯರ ಸಂಹಾರಕ್ಕಾಗಿ ಉಪಯೋಗಿಸು. ತಿಳಿಯದೆ ನಿನಗೆ? ನನ್ನ ಜನಕ, ಜಮದಗ್ನಿಯ ಜುಟ್ಟೆಳೆದು ಕತ್ತು ಕತ್ತರಿಸಿದ ಕೆಟ್ಟ ಕ್ಷತ್ರಿಯರ ಕುಲ ಕ್ಷಯಕ್ಕಾಗಿ ಇಪ್ಪತ್ತೊಂದು ಬಾರಿ ಭೂಪ್ರದಕ್ಷಿಣೆಗೈದು ಸೇಡ ತೀರಿಸಿದೆನೆಂದು. —ಕ್ಷತ್ರಿಯ ಕುಲ ಸಂಹಾರವೇ ನೀನೆನಗೀವ ಗುರುದಕ್ಷಿಣೆ— ತೀರಿಸುವ ಋಣ ಭಾರ... ಹೋಗು, ಕರ್ಣಾ ಹೋಗು. ಹೋಗುವ ಮುನ್ನ ಒಮ್ಮೆ ನನ್ನನ್ನು ಆಲಂಗಿಸು, (ಆಲಂಗಿಸುವನು)

ಕರ್ಣ: (ಅಡ್ಡ ಬಿದ್ದು...ಅವನಿಗೆ ಸುತ್ತು ಬಂದು, ಮತ್ತೊಮ್ಮೆ ಕಾಲು ಮುಟ್ಟಿ ನಮಸ್ಕರಿಸಿ ಮೆಲ್ಲಗೆ ಹಿಂದೆ ಹಿಂದೆ ಹೋಗುವನು)

ರಾಮ: ಕರ್ಣನೆಂತಹ ಪುಣ್ಯಜೀವಿ—ಕಾಲಸ್ವರೂಪಿಯಾಗಿ ಷಡ್ವೈರಿಗಳನ್ನೂ ತನ್ನ ಅಂಕಿತದಲ್ಲಿಟ್ಟುಕೊಂಡ ನನ್ನಂತಹವನ ಹೃದಯ

ವನ್ನೂ ತನ್ನ ನಿರ್ಮಲಾಂತಃಕರಣದಿಂದ ಸೂರೆಗೊಂಡ ಈ ಕರ್ಣನ ವ್ಯಕ್ತಿತ್ವವು ಅಸಾಮಾನ್ಯವಾದುದು—ಕರ್ಣನನ್ನು ಬೀಳ್ಕೊಟ್ಟ ಈ ಆಶ್ರಮ ಅದೆಷ್ಟು ಕಾಂತಿಹೀನವಾಗಿ ಕಾಣುವುದು? ಕರ್ಣನನ್ನು ಕಳುಹಿಸಿಕೊಟ್ಟ ಈ ಭಾರ್ಗವನ ಹೃದಯ ಅದೇಕೆ ವಿಯೋಗ ದುಃಖವನ್ನನುಭವಿಸುವುದು? ಛೆ, ಇದು ಭಾರ್ಗವರಾಮನ ಹೃದಯ ದೌರ್ಬಲ್ಯವಲ್ಲ. ಕರ್ಣನ ಹೃದಯದ ಹಿರಿಮೆ, ಕರ್ಣನ ಕಡುನನ್ನಿ—ಕರ್ಣನ ತೇಜಸ್ಸು—ಓಜಸ್ಸು, ಪಂಥ—ಪರಾಕ್ರಮ; ವಿನಯ—ವಿಶಾಲ ಬುದ್ಧಿ: ಅನುಪಮ ಚಿತ್ತಶುದ್ಧಿ—ಗ್ರಾಹ್ಯಶಕ್ತಿ ಇವುಗಳಿಗೆ ನನ್ನ ಮನಸೋತರೆ ಆಶ್ಚರ್ಯವೇನು? ನನ್ನ ಏಕೈಕ ಪ್ರಿಯ ಶಿಷ್ಯ ಕರ್ಣ—ಕರ್ಣಾ, ನೀನು ಎರಡನೆಯ ಭಾರ್ಗವರಾಮ ನಾಗು. ಆಗ ನಾನೂ ಆನಂದಿಸುವೆ... ಛೆ, ಮನಸ್ಸೇಕೆ ಅಷ್ಟೊಂದು ವಿಚಲಿತವಾಗುವುದು: ಸತ್ಯ, ಸಂಯಮನ, ತ್ಯಾಗ. ನಿಷ್ಠೆ, ನಿಯಮ ಗಳಿಂದ ಪರಿವೇಷ್ಟಿತನಾದ ನಾನೂ, ಒಬ್ಬ ಕರ್ಣನ ಅಗಲುವಿಕೆಗೆ ವಿಚಲಿತನಾಗುವುದೇ? ಛೆ, ಇಲ್ಲ ಮನಸ್ಸಿನ ನೆಮ್ಮದಿಗಾಗಿ ತುಸು ವಿರಮಿಸುವೆನು, (ಅಲ್ಲೇ ಮರದ ಬುಡದಲ್ಲಿ ವಿರಮಿಸುವನು)

ತೆರೆ

ದೃಶ್ಯ—4 ಕಾಡು ಮಾರ್ಗ

ಕರ್ಣ: (ಸಂತೋಷದಿಂದ) ನಾನೆಂತಹ ಭಾಗ್ಯಶಾಲಿ? ನಾನೆಂತಹ ಪುಣ್ಯ ಜೀವಿ? ಜಗತ್ತಿನ ಅತೀ ಶ್ರೇಷ್ಠ ಧನುರ್ವಿದ್ಯಾಗುರು ಭಾರ್ಗವ ರಾಮನಿಂದ ಧನುರ್ವಿದ್ಯೆ ಪಡೆದ ನನಗೆ ಇನ್ನಾವ ವಿದ್ಯೆಯ ದಾಹ ಏದೆ? ದ್ರೋಣಾಚಾರ್ಯರು ನನಗೆ ಧನುರ್ವಿದ್ಯೆ ನೀಡಲು ನಿರಾ ಕರಿಸಿದರೇನಂತೆ. ಅವರ ಗುರುವೇ ನನಗೆ ಗುರುವಾದರು ...... ಗುರುದೇವ, ಭಾರ್ಗವನೆಂತಹ ಮಹಾತ್ಮ; ಎಷ್ಟೊಂದು ವಾತ್ಸಲ್ಯ ದಿಂದ ನನಗೆ ವಿದ್ಯಾದಾನ ಮಾಡಿದರು. ಗುರುದೇವಾ, ಗುರು ದೇವಾ, ಈ ಸೂತಕುಲದ ಕರ್ಣನಿಗೆ...ಏನು? ಸೂತಕುಲದ ಕರ್ಣ! ನಾನು ಸೂತಕುಲದವನೇ?...ಆದರೆ ಗುರುದೇವನಲ್ಲಿ ನಾನು

ಬ್ರಾಹ್ಮಣನೆಂದು ಹೇಳಿಕೊಳ್ಳಲಿಲ್ಲವೇ? ಬ್ರಾಹ್ಮಣ ಕುಮಾರನೆಂದೇ ನನಗೆ ನನ್ನ ಗುರುವು ವಿದ್ಯಾದಾನ ಮಾಡಿದ್ದಲ್ಲವೇ? ವಂಚನೆಯಲ್ಲವೇ ಇದು? ಗುರುದ್ರೋಹವಲ್ಲವೇ? ಛೆ, ಪರಶುರಾಮನಂತಹ ಗುರುವಿಗೆ ನಾನು ದ್ರೋಹ ಬಗೆವುದೆಂತು? ಇಲ್ಲ, ಇಲ್ಲ, ಗುರುವ ವಂಚಿಸಲಾರೆ. ಗುರುದೇವಾ, ಗುರುದೇವಾ ನಾನು ಅಪರಾಧಿ. ನಾನು ದ್ರೋಹಿ. ನಿಮ್ಮಿಂದ ವಿದ್ಯೆ ಪಡೆಯುವ ಏಕಮಾತ್ರ ಆಸೆಯಿಂದ ನಿಮ್ಮಲ್ಲಿ ಬ್ರಾಹ್ಮಣನೆಂದು ಹೇಳಿಕೊಂಡು ವಿದ್ಯೆ ಬೇಡಿದೆ, ನನ್ನ ನಂಬಿ ವಿದ್ಯೆ ನೀಡಿದಿರಿ. ಆದರೆ ನಾನು ಬ್ರಾಹ್ಮಣನಲ್ಲ......ಬ್ರಾಹ್ಮಣನಲ್ಲ. ನಾನು ಸೂತ ಕುಲದವ. ಕ್ಷಮಿಸಿರಿ ಗುರುದೇವಾ ಕ್ಷಮಿಸಿರಿ. ಈ ಸತ್ಯವನ್ನು ನಿಮ್ಮಲ್ಲಿ ಸಾರದೆ ನನಗೆ ಆತ್ಮಶಾಂತಿಯಿಲ್ಲ...ನನಗೆ ಮೋಕ್ಷವಿಲ್ಲ, ನನ್ನನ್ನು ಕ್ಷಮಿಸಿರಿ. ಕ್ಷಮಿಸಲಾರಿರಾದರೆ, ನಿಮ್ಮಲ್ಲಿ ಸಟೆಯಾಡಿದುದಕ್ಕೆ ಶಿಕ್ಷಿಸಿರಿ. ಶಿಕ್ಷಿಸಿರಿ ಗುರುದೇವಾ, ಆದರೆ ನಿಮ್ಮಲ್ಲಿ ಸತ್ಯ ಹೇಳದೆ ನಾನು ನಿಮ್ಮನ್ನು ಬಿಟ್ಟು ಹೋಗಲಾರೆ. ನೀವು ಕ್ಷಮಿಸಿದ ಅಥವಾ ಶಿಕ್ಷಿಸಿದ ನಂತರವೇ ನಿಮ್ಮ ಪಾಪಗಳಿಂದ ನನಗೆ ಬಿಡುಗಡೆ... ಇದೋ...ಬಂದೆ... (ಬಂದ ಹಾಗೆ ಹಿಂದೆ ಹೋಗುವನು)

ದೃಶ್ಯ—5

(ಪರಶುರಾಮನ ಆಶ್ರಮ. ರಾಮನು ನಿದ್ದೆ ಹೋಗಿರುವನು—ಕರ್ಣನು ಧಾವಿಸಿ ಬರುವನು, ನಿದ್ದೆ ಹೋದ ಗುರುವನ್ನು ಕ್ಷಣಕಾಲ ದಿಟ್ಟಿಸುವನು. ತಲೆಯ ಪಾರ್ಶ್ವದಿಂದ ಸೂರ್ಯನ ಕಿರಣ ಪರಶುರಾಮನ ಮುಖಕ್ಕೆ ಬೀಳುತ್ತಿತ್ತು ಆ ಬೆಳಕು ಮರೆಯಾಗಿ ತನ್ನ ಬೆನ್ನಿಗೆ ಬೀಳುವಂತೆ ಕುಳಿತು ಅವನ ತಲೆಯನ್ನೆತ್ತಿ ತನ್ನ ತೊಡೆಯ ಮೇಲೆ ಇಟ್ಟುಕೊಳ್ಳುವನು ಆಗ ದುಂಬಿಯೊಂದು ಸದ್ದು ಮಾಡುತ್ತಾ ಸುತ್ತುವದು)—

ಕರ್ಣ: ಛೆ, ಅದಾವ ಅವೇಳೆಯಲ್ಲಿ ಈ ಭ್ರಮರದ ಪ್ರವೇಶ–ಪ್ರಶಾಂತವಾದ ವಾತಾವರಣವನ್ನು ಕೆಡಿಸುವ ಆವೇಶ— (ದುಂಬಿಯು ತನ್ನ ಕ್ಷೇ

ಕಾರ ನಿಲ್ಲಿಸಿ ಕರ್ಣನ ತೊಡೆ ಕೊರೆಯುವುದು) ...... ಹಾ! ಈ ಕೀಟವು ಮರದ ತೊಗಟೆಯೆಂಬ ಭ್ರಮೆಯಿಂದ, ನನ್ನ ತೊಡೆಯನ್ನು ಕೊರೆಯುತ್ತಿರುವುದು—ಬಹು ಭೀಕರ ನೋವು, ಸಹಿಸಲಳವಲ್ಲ. ಆದರೂ ನೋವೆಂದು ಕಾಲ್ತೆಗೆದು ತುಂಬಿಯ ಕಿತ್ತೊಗೆದರೆ ಗುರುವಿಗೆ ನಿದ್ರಾಭಂಗವಲ್ಲವೇ? ವೀರಭಾರ್ಗವನ ಅಚ್ಚುಮೆಚ್ಚಿನ ಶಿಷ್ಯ ಕರ್ಣ, ಕೇವಲ ಕೀಟವೊಂದರ ಕುತ್ತುವಿಕೆಯನ್ನು ಸಹಿಸ ಲಾರನೇ? ಅಷ್ಟೊಂದು ಅಂಜುಬುರುಕನೇ ಈ ಕರ್ಣ?...ಆದರೆ, ಎಂತಹ ಕೀಟವಿದು? ರಕ್ತದಕೋಡಿ ಹರಿಸುವಷ್ಟು ಕಠಿನ. 'ಏನೇ ಇರಲಿ, ಗುರುದೇವನ ನಿದ್ದೆಗೆ ಭಂಗ ಬರದಿದ್ದರೆ, ಅಷ್ಟೇ ಸಾಕು... (ಕರ್ಣನ ತೊಡೆಯಿಂದ ರಕ್ತ ಹರಿಯುವುದು. ಅದು ರಾಮನ ಕೆನ್ನೆಗೂ ತಾಗುವುದು)

ರಾಮ: (ನೆತ್ತರಿನ ಬಿಸಿತಾಗಿ ಮೆಲ್ಲಗೆ ಏಳುವನು) ಏನಿದು?...ನಾನೆಲ್ಲಿ?...

ಕರ್ಣ: ಕ್ಷಮಿಸಿರಿ, ಗುರುದೇವಾ—ತಮ್ಮ ಕೆನ್ನೆಯಲ್ಲಿ ಕೆನ್ನೆತ್ತರಿದೆ. ಒರಸಿ ಬಿಡುವೆ—(ಮೆಲ್ಲಗೆ ಒರಸುವನು)

ರಾಮ: ನೆತ್ತರು! ಯಾರ ನೆತ್ತರು? ಯಾರಿಗೆ ಗಾಯವಾಯಿತು, ವತ್ಸಾ?

ಕರ್ಣ: ನನ್ನ ಹೃದಯಕ್ಕೆ ಗಾಯವಾಯಿತು ಗುರುದೇವಾ.

ರಾಮ: ನಿನ್ನ ಹೃದಯಕ್ಕೆ ಗಾಯವಾಗಿದ್ದರೆ, ನನ್ನ ಕೆನ್ನೆಯಲ್ಲೇಕೆ ರಕ್ತ?

ಕರ್ಣ: ತಮ್ಮ ನಿದ್ರಾಭಂಗವಾದುದರಿಂದ.

ರಾಮ: ಏನಿದು? ಏನಾಯ್ತು? ನಾನಿಲ್ಲಿ ವಿಶ್ರಮಿಸುವಾಗ ನಾನೊಬ್ಬನೆ. ಎಚ್ಚರಗೊಂಡಾಗ ನೀನು? ನಿನ್ನ ತೊಡೆಯಲ್ಲಿ ನನ್ನ ತಲೆ! ಕೆನ್ನೆ ಯಲ್ಲಿ ನೆತ್ತರು. ಏನು ಮಗೂ, ಏನಾಯ್ತು ಕರ್ಣಾ? ನೀನು ಆಶ್ರಮವನ್ನು ಬಿಟ್ಟು ಹೋಗಿರುವೆಯೆಂದೆಣಿಸಿದ್ದೆ. ನೀನು ಇಲ್ಲೇ ಇದ್ದೆಯೇನು?

ಕರ್ಣ: ಅಹುದು ಗುರುದೇವ್, ಹೋದವನು ಮರಳಿ ಬಂದೆ. ಬಂದಾಗ ತಾವು ನಿದ್ರಿಸುತಿದ್ದಿರಿ. ಮೊಗದ ಮೇಲೆ ಸೂರ್ಯನ ಬೆಳಕು

ಚೆಲ್ಲಿತ್ತು. ಬೆಳಕನ್ನು ಮರೆಸಲು ತಮ್ಮ ತಲೆಯನ್ನು ನನ್ನ ತೊಡೆಯಲ್ಲಿರಿಸಿದೆ, ಹಾಯಾಗಿ ನಿದ್ದೆ ಹೋಗಿರೆಂದು. ಆದರೆ ಮರಿದುಂಬಿಯೊಂದು ಆವುದನ್ನೋ ಅರಸಿ, ನನ್ನ ತೊಡೆಯನ್ನು ತನ್ನ ಮನೆ ಮಾಡಲು ಕೊರೆಯಿತು. ತಮ್ಮ ನಿದ್ದೆಗೆ ಭಂಗವಾಗಬಾರದೆಂದು ಸಹಿಸಿದೆ.

ರಾಮ: ಆದರೆ ಈ ರಕ್ತದ ಕೋಡಿ?

ಕರ್ಣ: ಭ್ರಮರವು ಕೊರೆದ ನನ್ನ ತೊಡೆಯಿಂದ ಹರಿದುದು.

ರಾಮ: ನಿನ್ನ ಶರೀರದಿಂದ ಹರಿದುದೇ?

ಕರ್ಣ: ಅಹುದು ಗುರುದೇವಾ. ಪ್ರಾಯಶಃ ಆ ಭ್ರಮರವಿನ್ನೂ ನನ್ನ ತೊಡೆಯ ಮಾಂಸ ಖಂಡದೆಡೆಯಲ್ಲಿ ಸುಖದಿಂದ ನಿದ್ರಿಸುತ್ತಿರಬಹುದು. (ಮೆಲ್ಲಗೆ ಗಾಯಕ್ಕೆ ಬೆರಳು ಹಾಕಿ ತುಂಬಿಯನ್ನು ಹೊರತೆಗೆದು) ಪಾಪ, ಎಳೆಯದು, ಹಾದಿ ತಪ್ಪಿ ಇತ್ತಬಂದು ನನ್ನ ತೊಡೆ ತನ್ನ ವಾಸ್ತವ್ಯವೆಂದು ಭ್ರಮಿಸಿದ್ದಿರಬೇಕು ಈ ಭ್ರಮರ. (ಭ್ರಮರವನ್ನುದ್ದೇಶಿಸಿ) ಹೋಗು. ನಿನ್ನ ಸ್ವಸ್ಥಾನ ಸೇರು (ಮರದ ಗೆಲ್ಲಿನಲ್ಲಿ ಇಡುವನು. ಕೂಡಲೇ ಅದು ಹಾರಿ ಮಾಯವಾಗುವುದು)

ರಾಮ: (ವಿಚಾರ ಮಗ್ನನಾಗಿ) ಕರ್ಣಾ, ಆ ಭ್ರಮರವು ನಿನ್ನ ತೊಡೆಯನ್ನು ಕೊರೆಯಿತೇ? ಈ ನೆತ್ತರ ತೊರೆ ನಿನ್ನ ತೊಡೆಯಿಂದಲೇ? ಆಶ್ಚರ್ಯ—ಮಹದಾಶ್ಚರ್ಯ; (ಗಂಭೀರನಾಗಿ) ಹಾಗಾದರೆ ಸತ್ಯ ಹೇಳು. ನೀನು ಬ್ರಾಹ್ಮಣನೇ? ಕ್ಷತ್ರಿಯನೇ? ನೀನಾರು? ಭಾರ್ಗವನ ಮುಂದೆ ಸಟೆ ಸಲ್ಲದು.

ಕರ್ಣ: (ದೀನನಾಗಿ) ದಿಟವನ್ನೇ ನುಡಿವೆ ಗುರುದೇವಾ, ನಾನು...... ಬ್ರಾಹ್ಮಣನಲ್ಲ. ಆದರೆ...

ರಾಮ: ನೀನು ಬ್ರಾಹ್ಮಣನಾಗಲಿಕ್ಕೆ ಸಾಧ್ಯವಿಲ್ಲ. ನಾನು ಬ್ರಾಹ್ಮಣ. ಬ್ರಾಹ್ಮಣ ಸ್ವಭಾವ ಏನೆಂಬುದನ್ನು ನಾನು ಬಲ್ಲೆ. ಭ್ರಮರವ

ಘೋರ ಕಡಿತವನ್ನು ಕ್ಷತ್ರಿಯನಲ್ಲದೆ ಈ ತೆರ ಬ್ರಾಹ್ಮಣ ಸಹಿಸಲಾರ. ನೀನು ಬ್ರಾಹ್ಮಣನಲ್ಲ. —ನೀನು ಬ್ರಾಹ್ಮಣನಲ್ಲ— ವಂಚಿಸಿದೆ ಕರ್ಣಾ, ವಂಚಿಸಿದೆ. ಕಾಳಸರ್ಪವನ್ನೇ ಕೆಣಕಿದೆ–ಅಗ್ನಿಯೊಡನೆ ಆಟವಾಡಿದೆ–ಭಾರ್ಗವನ ಚರಿತೆ ನೀನನರಿತಿಲ್ಲವೇನು? ಇಪ್ಪತ್ತಾರು ಬಾರಿ ಭೂಪ್ರದಕ್ಷಿಣೆಗೈದು ಕ್ಷತ್ರಿಯ ಕುಲಸಂಹಾರಗೈದ ಜಮದಗ್ನಿಸುತ ನಾನು. ನನ್ನ ಪರಶುವಿನ ರಕ್ತದಾಹ ಇನ್ನೂ ಆರಿಲ್ಲ. ಅಂತಿರಲು ಬ್ರಾಹ್ಮಣ ವೇಷದಿಂದ ನನ್ನಾಶ್ರಮವ ಹೊಕ್ಕು ದ್ವಿಜನಂತೆ ನಟಿಸಿ, ನನ್ನಿಂದ ವಿದ್ಯೆಯನ್ನುಪಡೆದೆ. ನನ್ನ ವ್ಯಾತ್ಸಲ್ಯವನ್ನು ಗಳಿಸಿದೆ. ಆದರೆ ಇದು ಘೋರ ಅನ್ಯಾಯ. ಅಕ್ಷಮ್ಯ ಅಪರಾಧ. ಪರಮ ನೀಚನು ನೀನು. ದ್ರೋಹಿ, ಇದೋ...ಇದೋ, ಕೇಳು. ಗುರುವನ್ನು ವಂಚಿಸಿ, ವಿದ್ಯೆಯನ್ನು ಗಳಿಸಿದೆಯಾದ್ದರಿಂದ, ನೀನು ನನ್ನಿಂದ ಕಲಿತ ವಿದ್ಯೆಯೆಲ್ಲವೂ ನಿನ್ನ ಮರಣಕಾಲದಲ್ಲಿ ನಿನಗೆ ಮರೆತೇ ಹೋಗಲಿ. ನಿನಗದು ಉಪಯೋಗವಾಗದೆ ಹೋಗಲಿ. ಇದೇ ನೀನು ನನಗೆಸಗಿದ ದ್ರೋಹದ ಭಾಗಕ್ಕೆ ಶಿಕ್ಷೆ. ಇನ್ನು ನಿನಗಿಲ್ಲ ನನ್ನಿಂದ ರಕ್ಷೆ......ಈ ಕ್ಷಣದಲ್ಲೇ ಈ ಆಶ್ರಮವನ್ನು ಬಿಟ್ಟು ತೊಲಗು.

ಕರ್ಣ: ಗುರುದೇವಾ, ಗುರುದೇವಾ...ಪ್ರಮಾದವಾಯಿತು, ಪ್ರಮಾದವಾಯಿತು. ಅಯ್ಯೋ, ಅನಾಹುತವಾಯಿತು. ಎನ್ನ ಅಪರಾಧಗಳನ್ನು ಕ್ಷಮಿಸಬೇಕು. ಕ್ಷಮಿಸಬೇಕು. ದುರ್ದೈವಿ ನಾನು. ಅಹುದು ಗುರುದೇವಾ ಅಹುದು. ಜಾತಿಯಲ್ಲಿ ನಾನು ಬ್ರಾಹ್ಮಣನಲ್ಲ—ಕ್ಷತ್ರಿಯನೂ ಅಲ್ಲ.

ರಾಮ: ಕ್ಷತ್ರಿಯನೂ ಅಲ್ಲ!

ಕರ್ಣ: ಕ್ಷತ್ರಿಯನೂ ಅಲ್ಲ—ಸೂತಜ. ಅದಿರಥನೆನ್ನ ತಂದೆ. ರಾಧೆಯೇ ತಾಯಿ. ಹೀನ ಕುಲದವ ನಿಜ. ಆದರೆ ನಾನು ಬೆಳೆದು ಬಂದಾಗ, ನನ್ನ ಕೆಚ್ಚು ಕೆರಳಿ ನಿಂತು. ಕ್ಷತ್ರಿಯೋಚಿತವಾದ ಧನುರ್ವಿದ್ಯೆ ಕಲಿಯಲು ಹಾತೊರೆಯಿತು. ಗುರು ದ್ರೋಣಾಚಾರ್ಯರಲ್ಲಿ

ಬಿಲ್ವಿದ್ಯೆ ಬೇಡಿದಾಗ ಸೂತಸುತನೆಂದು ಮಂತ್ರಾಸ್ತ್ರಗಳ ಕಲಿಸಲು ನಿರಾಕರಿಸಿದರು. ಆದರೆ ನನ್ನ ವಿದ್ಯಾರ್ಜನೆಯ ದಾಹ ಅಳಿಯದೆ ನಿಮ್ಮ ಪಾದಗಳ ಬಳಿಗೆ ನನ್ನನ್ನೆಳೆಯಿತು. ವಿದ್ಯೆಯ ಮೇಲಣ ಅಗಾಧವಾದ ಅಭಿಮಾನದಿಂದ ಬ್ರಾಹ್ಮಣನೆಂದು ಹೇಳಿಕೊಂಡೆ. ಆದರೆ ತಮ್ಮ ಪಾದದರ್ಶನವಾದ ಬಳಿಕ ನಾನು ಸಂಪೂರ್ಣ ಬ್ರಾಹ್ಮಣನೇ ಆಗಿದ್ದೇನೆ. ತಮ್ಮ ಆಶ್ರಮದಲ್ಲಿ ತಮ್ಮನ್ನೇ ನನ್ನ ತಂದೆಯಾಗಿ ಕಂಡಿದ್ದೇನೆ. ತಮ್ಮನ್ನೇ ನನ್ನ ತಾಯಿಯಾಗಿ ರೂಪಿಸಿದ್ದೇನೆ. ಮೇಲಾಗಿ ನನ್ನ ಒಬ್ಬನೇ ಒಬ್ಬ ನಿಜಗುರುವಾಗಿ ಗುರುತಿಸಿದ್ದೇನೆ. ಆದರೂ ಗುರುದೇವಾ, ನಾನಿಲ್ಲಿದ್ದಷ್ಟು ಕಾಲ ನೀವು ನನ್ನ ಮೇಲಿನ ಅಪರಿಮಿತವಾದ ಪ್ರೀತಿಯಿಂದ ಕಲಿಸಿಕೊಟ್ಟ ವಿದ್ಯೆ, ನಿರ್ಮಲ ಹೃದಯದಿಂದ ಇಟ್ಟ ವಿಶ್ವಾಸ, ಇವು ನನ್ನನ್ನು ನಿರಂತರ ನೋಯಿಸಿ, ಇವೆಲ್ಲವನ್ನೂ ಬ್ರಾಹ್ಮಣನೆಂದು ಸುಳ್ಳು ಹೇಳಿ ಪಡೆಯುದ್ದೇನಲ್ಲಾ ಎಂಬ ಕೊರಗುವಿಕೆಯಿಂದ ಸೊರಗುತಿದ್ದೆ, ತಾವು ಕ್ಷತ್ರಿಯ ಕುಲವನ್ನೇ ದ್ವೇಷಿಸುವವರೆಂದು ತಿಳಿದಿದ್ದರೂ, ನಾನು ಸೂತಜನಾದ್ದರಿಂದ ತುಸು ತೃಪ್ತಿಯಿತ್ತು. ಮಾತ್ರವಲ್ಲ, ನಾನು ಈ ಆಶ್ರಮವನ್ನು ಬಿಟ್ಟುಹೋಗುವ ಮುನ್ನ ತಮ್ಮಲ್ಲಿ ಸತ್ಯವನ್ನೇ ಸಾರಿ, ಸೂತಜನೆಂದು ತಿಳಿಸಿ ತಮ್ಮಲ್ಲಿ ನಾನಾಗಿ ಕ್ಷಮೆ ಬೇಡಿ, ನನ್ನನ್ನು ನಾನು ಪರಿಶುದ್ಧಗೊಳಿಸಬೇಕೆಂದು ನಿರ್ಧರಿಸಿದೆ— ಅಂತೆಯೇ ತಮ್ಮನಿಂದು ಬೀಳ್ಕೊಟ್ಟು, ಆಶ್ರಮವನ್ನು ಅಗಲಿ ತುಸುದೂರ ನಡೆದಾಗ, ಅಂದು ನಾನು ತಮ್ಮಲ್ಲಿ ಬ್ರಾಹ್ಮಣನೆಂದು ಹೇಳಿಕೊಂಡದ್ದು ನೆನಪಾಯಿತು. ಕಾಲುಗಳು ಮುಂದೆ ಹೋಗಲಿಲ್ಲ. ಹೃದಯವು ಭಾರವಾಗತೊಡಗಿತು. ಅಲ್ಲಿಂದಲೇ ಹಿಂತಿರುಗಿದೆ. ಜನ್ಮ ವೃತ್ತಾಂತ ಹೇಳಿ ತಮ್ಮಿಂದ ಕ್ಷಮೆ ಇಲ್ಲವೇ ಶಿಕ್ಷೆಯನ್ನು ಪಡೆದೇ ಮರಳುವುದೆಂದು ಬಂದೆ. ಬಂದಾಗ ನಿದ್ರಾವಶರಾಗಿ ವಿರಮಿಸುತಿದ್ದೀರಿ—ಸೂರ್ಯನ ಕಿರಣ ತಮ್ಮ ಕೆನ್ನೆಗೆ ಕುಕ್ಕುತ್ತಿತ್ತು—ಅದನ್ನು ತಡೆಯಲು ತಮ್ಮ ತಲೆಯನ್ನೆತ್ತಿ ನನ್ನ ತೊಡೆಯಲ್ಲಿರಿಸಿಕೊಂಡು ನಾನೂ ಆನಂದವನ್ನು

ಅನುಭವಿಸುತ್ತಿದ್ದೆ. ಆದರೆ ಗುರುದೇವಾ, ನನ್ನ ಪೂರ್ವಕರ್ಮದ ಪಾಪದ ಫಲವಾಗಿ ದುಂಬಿಯೊಂದು ಬಂದು ಈ ಅನಾಹುತವನ್ನೆಸಗಿ, ತಮ್ಮ ಶಾಪಕ್ಕೆ ನನ್ನನ್ನು ಈಡು ಮಾಡಿತು. ಪೂಜ್ಯರೇ, ತಮ್ಮ ಶಾಪದಿಂದ ತಾವು ಕಲಿಸಿದ ವಿದ್ಯೆ ನನ್ನಲ್ಲಿ ನಷ್ಟವಾಗಬಹುದೆಂಬ ದುಃಖ ನನಗಿಲ್ಲ. ಮರಣಕ್ಕೂ ನನಗೆ ಅಂಜಿಕೆಯಿಲ್ಲ. ಆದರೆ ಒಂದೇ ಒಂದು ಸುಳ್ಳು ಹೇಳಿ ತಮ್ಮನ್ನು ವಂಚಿಸಿ, ತಮ್ಮ ಮುನಿಸನ್ನು ಸಂಪಾದಿಸಿದೆನಲ್ಲಾ ಎಂಬ ಸಂತಾಪ ನನ್ನನ್ನು ಈಗಲೂ ಸುಡುತ್ತಿದೆ—ಗುರುದೇವಾ, ಈ ಹೃದಯ ವೇದನೆಯಿಂದ ನೀವೇ ನನ್ನನ್ನು ರಕ್ಷಿಸಿರಿ—ನೀವೇ ರಕ್ಷಿಸಿರಿ. (ಕಾಲಿಗೆ ಬೀಳುವನು)

ರಾಮ: (ಕರ್ಣನ ಮಾತುಗಳಿಂದ ಮನಕರಗಿ ಆತನನ್ನು ಮೆಲ್ಲಗೆ ಎಬ್ಬಿಸಿ, ಅವನ ತಲೆಯನ್ನು ಸವರಿ) ಕರ್ಣಾ,...ನನ್ನ ತಾಯಿಯ ತಲೆ ಕಡಿವಾಗಲೂ, ಕರಗದ ನನ್ನ ಕರುಳು. ನಿನಗಾಗಿ ಮರುಗುವುದು ಈಗ. ನೀನೊಬ್ಬ ಅದೃಷ್ಟಹೀನ. ವಿಧಿಯು ನಿನ್ನ ಜೀವನವನ್ನು ಕರುಣಾಜನಕವಾಗಿ, ದುರಂತದ ದಾರಗಳಿಂದ ಹೆಣೆದಿರುವುದು. ಕಾಲವು ಮಿಂಚಿಹೋಯಿತು. ನನ್ನ ಶಾಪವು ಸುಳ್ಳಾಗದು. ಆದರೆ ನಿನ್ನ ಕರ್ಮಕತೆಯಿಂದ ನನ್ನ ಹೃದಯವು ತಿಳಿಯಾಗಿದೆ. ಮುನಿಸು ಮಾಯವಾಗಿದೆ. ನಿನ್ನಂತಹ ಶಿಷ್ಯನಿಗೆ ನಾನು ಗುರುವೆಣಿಸಲು ಅಭಿಮಾನವೆನಿಸುವುದು. ಕರ್ಣಾ, ನೀನು ನನ್ನ ಶಾಪಕ್ಕೊಳಗಾದರೂ ನಿನ್ನ ಪರಾಕ್ರಮದಿಂದ, ನಿನ್ನ ಸ್ವಯಂ ಬುದ್ಧಿ ಜ್ಞಾನಗಳಿಂದ ಕೀರ್ತಿಶಾಲಿಯಾಗಿ ಬಾಳು—ಭಾರತದ ಮಹಾಚರಿತ್ರೆಯಲ್ಲಿ ನೀನೂ ಒಬ್ಬ ಮಹಾನಾಯಕನಾಗಿ ಶೋಭಿಸು—ನಿನಗೆ ಮಂಗಳವಾಗಲಿ.

ಕರ್ಣ: ಧನ್ಯನಾದೆ ಗುರುದೇವಾ, ಧನ್ಯನಾದೆ. ನನ್ನನ್ನು ಆಶೀರ್ವದಿಸಿರಿ.

ರಾಮ: ನಿನಗೆ ಶುಭವಾಗಲಿ.

ಕರ್ಣ: (ಪಾದಕ್ಕೆರಗಿ ತನ್ನ ಬಿಲ್ಲು ಬತ್ತಳಿಕೆಗಳನ್ನು ಹಿಡಿದುಕೊಳ್ಳುವನು. ಪರಶುರಾಮನು ಆಲಂಗಿಸಿ ಬೀಳ್ಕೊಡುವನು)

— ತೆರೆ —

ದೃಶ್ಯ—6 ಮಾರ್ಗ.

(ದುರ್ಮುಖ ಅವಸರವಸರದಲ್ಲಿ ಹೋಗುವನು—ಆಗ)

ಸುಮುಖ: ಏ, ದುರ್ಮುಖ? ಎಲ್ಲಿ ಓಡುತ್ತಿರುವೆಯೋ?

ದುರ್ಮುಖ: ಅಯ್ಯೋ ಶನಿಯೆ? (ತಿರುಗಿ ನೋಡಿ) ಯಾರು ಸುಮುಖನೇ? ಒಳ್ಳೆಯ ಕಾರ್ಯನಿಮಿತ್ತ ಹೋಗುವಾಗ, 'ಎಲ್ಲಿಗೋ'? ಅಂದಿಯಲ್ಲಾ? ಅಯ್ಯೋ ನನ್ನ ಪ್ರಾರಬ್ಧವೇ?

ಸು: ಏನದು ಒಳ್ಳೆಯ ಕಾರ್ಯ? ಏನು ಪ್ರಾರಬ್ಧ? ಕೆಟ್ಟ ಕಾರ್ಯಕ್ಕ್ಯೊ ಹೀಗೆ ಹೋಗುವುದುಂಟೇ ನೀನು? ಎಲ್ಲಿಗೆ ಹೋಗುತ್ತಿದ್ದೆ ಹೇಳು.

ದು: ಅದೇ, ಯಾವಾಗಲೂ ಹೋಗುವಲ್ಲಿಗೇ, ಇಂದೂ ಹೋಗೋದು. ಆ ಗಂಗಾ ನದೀ ದಡಕ್ಕೆ, ಮತ್ತೆಲ್ಲಿಗೆ?

ಸು: ಯಾಕೆ?

ದು: ಯಾಕೇಂತ ಗೊತ್ತಿಲ್ವೆ ಸುಮುಖಾ? ಮತ್ತೊಮ್ಮೆ ಹೇಳಬೇಕೆ? ಹೋಗೋದು, ಕಾಯೋದು. ಯಾರದಾದರೂ ಮಗು ತೇಲಾಡಿಕೊಂಡು ಬರುತ್ತದೋಂತ. ಎಲ್ಲಿ ಬರುತ್ತದೆ? ಕಾದೂ ಕಾದೂ ವರ್ಷಗಳೇ ಉರುಳಿದುವು.

ಸು: ನಿನ್ನ ಭ್ರಾಂತಿ ಇನ್ನೂ ಹೋಗಲಿಲ್ಲವೆಂದು ಕಾಣುತ್ತದೆ. ನಿನಗೆ ಆ ಭಾಗ್ಯವಿದ್ದರೆ, ಆ ನದಿಯೇ ನಿನ್ನ ಕಾಲಬುಡಕ್ಕೆ ಹರಿದುಬಂದು, ಮಗುವನ್ನು ಕರುಣಿಸುತ್ತದೆ. ಆದ್ದರಿಂದ ನೀನು ವ್ಯರ್ಥವಾಗಿ ನಿನ್ನ ಆಯುಷ್ಯವನ್ನು ಹಾಳು ಮಾಡಬೇಡ. ಅದಿರಥನು ನಿನ್ನ ಹಾಗೇ ಮಗುವನ್ನು ಹುಡುಕಿಕೊಂಡು ಹೋದನೇ? ಇಲ್ಲ. ಮಗುವೇ ತಾನಾಗಿ ಬಂತು, ಅವನಿದ್ದೆಡೆಗೆ. ಅದೆಲ್ಲಾ ಸಾಯಲಿ.

ದು: ಯಾವುದು ಸಾಯಲಿ?

ಸು: ನಿನ್ನ ಕರ್ಮ—ನಾಳೆ ನಾವಿಬ್ಬರೂ ಹಸ್ತಿನಾವತಿಗೆ ಹೋಗೋಣ. ಅಲ್ಲಿಯ ರಾಜಕುಮಾರರು ತಾವು ದ್ರೋಣಾಚಾರ್ಯರಿಂದ ಕಲಿತ

ವಿದ್ಯೆಯನ್ನು ಬಹಿರಂಗವಾಗಿ ಪ್ರದರ್ಶಿಸುವರಂತೆ. ಅದನ್ನು ನೋಡುವ ಅವಕಾಶ ನಾವು ಬಿಡುವುದೇಕೆ? ಮಾತ್ರವಲ್ಲ ಸಂದರ್ಭ ಸಿಕ್ಕಿದರೆ ಅಲ್ಲಿಯೇ ರಾಜಸ್ಥಾನದಲ್ಲಿ ಏನಾದರೂ ಉದ್ಯೋಗಕ್ಕೆ ಸೇರಿ ಅಲ್ಲಿಯೇ ಇರೋಣ. ಏನು ಹೇಳುವಿ?

ದು: ಅದೆಲ್ಲಾ ಆಗಬಹುದು—ಆದರೆ—ಗಂಗಾನದಿ...ಮಗು...?

ಸು: ಗಂಗಾನದಿಯೇನು?

ದು: ಗಂಗಾನದಿಯಲ್ಲಿ ಮಗು ಬಂದರೆ...?

ಸು: ಗಂಗಾನದಿಯಲ್ಲಿ ಮಗು ಬಂದರೆ...ಆ ಮಗು ನಿನಗೆ ದೊರೆಪ ಭಾಗ್ಯವಿದ್ದರೆ...ಗಂಗಾ ನದಿಯೇ ನೀನಿದ್ದೆಡೆಗೆ ಹರಿದುಕೊಂಡು ಬರುವುದು. ತಿಳಿಯಿತೇ?

ದು: ಹೌದೋ, ಸುಮುಖ? ಅದು ಸತ್ಯವೇ? ಭಾಗ್ಯವೆಂದರೆ ಹಾಗೋ?

ಸು: ಅಹುದು, ಹಾಗೆಯೇ...ಆದ್ದರಿಂದ ಚಿಂತಿಸಬೇಡ. ಬಾ ಹೋಗೋಣ.

ದೃಶ್ಯ—7

ರಾಜಾಂಗಣ—ಪ್ರದರ್ಶನ

(ಎತ್ತರದ ವೇದಿಕೆಯಲ್ಲಿ ದ್ರೋಣ, ಭೀಷ್ಮ, ಕೃಪ ಕುಳಿತಿರುವರು ಇಕ್ಕಡೆಗಳಲ್ಲಿ ಪಾಂಡವರು, ಕೌರವರು ಆಸೀನರಾಗಿರುವರು.)

ದ್ರೋಣ: ಭೀಷ್ಮ ಪಿತಾಮಹರೇ, ನೆರೆದ ಮಹಾ ರಾಜಾಧಿರಾಜರೇ ಮತ್ತು ನಾಗರಿಕರೇ, ಇಂದಿನ ಪ್ರದರ್ಶನದಲ್ಲಿ ನನ್ನ ಪ್ರಿಯ ಶಿಷ್ಯರಾದ ಕೌರವ ಪಾಂಡವರು ನನ್ನಿಂದ ಈ ವರೆಗೆ ಕಲಿತ ಧನುರ್ವಿದ್ಯೆ ಹಾಗೂ ಇತರ ಶಸ್ತ್ರಾಭ್ಯಾಸಗಳನ್ನು ನಮ್ಮ ಮುಂದೆ ಪ್ರದರ್ಶಿಸಿ ನಮ್ಮೆಲ್ಲರನ್ನು ಅತೀವ ಸಂತೋಷಪಡಿಸಿದ್ದಾರೆಂಬುದನ್ನು ಹೆಮ್ಮೆಯಿಂದ ಹೇಳುತ್ತಿದ್ದೇನೆ. ಅವರಿಗೆ ನಾನಿತ್ತ ಪಾಠಪ್ರವಚನಗಳು ಸಾರ್ಥಕವಾಗಿವೆ. ನನ್ನ ಶಿಷ್ಯರಲ್ಲಿ ಒಬ್ಬೊಬ್ಬರು ಒಂದೊಂದು

ವಿದ್ಯೆಯಲ್ಲಿ ನಿಸ್ಸೀಮರು. ಭೀಮ ದುರ್ಯೋಧನರು ಸಮಬಲರು. ಆದರೆ ಚಾಪವಿದ್ಯೆಯಲ್ಲಿ ಅರ್ಜುನನೊಬ್ಬನೇ ಅದ್ವಿತೀಯನು. ಆದ್ದರಿಂದ ಅವರವರ ಯೋಗ್ಯತಾನುಸಾರ ಕೌರವ ಪಾಂಡವರನ್ನು ಯುದ್ಧ ವಿಶಾರದರನ್ನಾಗಿ ಮಾಡಿರುತ್ತೇನೆ. ಇಂದಿಗೆ ನನಗೆ ಒಪ್ಪಿಸಿ ಕೊಟ್ಟಂತಹ ಕರ್ತವ್ಯವು ಮುಗಿದಿದೆಯೆಂದು ಹೇಳಲಿಚ್ಛಿಸುತ್ತೇನೆ.

ಭೀಷ್ಮ: ಆಚಾರ್ಯರೆ, ನಮ್ಮ ವಂಶದ ಕುಡಿಗಳಾದ ಪಾಂಡವರಿಗೂ ಕೌರವ ರಿಗೂ ತಾವು ಯೋಗ್ಯ ವಿದ್ಯೆಯಿತ್ತು ಅವರನ್ನು ಕ್ಷಾತ್ರವೀರ ರನ್ನಾಗಿ ಮಾಡಿರುತ್ತೀರಿ. ಇಂದವರು ನಮ್ಮ ಮುಂದೆ ಪ್ರದರ್ಶಿ ಸಿದ ಶೌರ್ಯೋತ್ಸಾಹಗಳು ಶ್ಲಾಘನೀಯ. ಕ್ಷತ್ರಿಯೋಚಿತವಾದ ವಿದ್ಯೆಯನ್ನೇ ನೀಡಿರುವಿರಿ. ಅದಕ್ಕಾಗಿ ಕುರುಕುಲ ಸಿಂಹಾಸನವೇ ನಿಮಗೆ ಋಣಿಯಾಗಿರುವುದು. ನಾವೆಲ್ಲರೂ ಸಂತುಷ್ಟರಾಗಿರುವೆವು. ಆದ್ದರಿಂದ ಆಚಾರ್ಯವರ್ಯ, ಈ ನಿಮ್ಮ ಶಿಷ್ಯವರ್ಗದಿಂದ ಯಾವ ಗುರುದಕ್ಷಿಣೆಯನ್ನು ಬಯಸುವಿರೆಂದು ದಯವಿಟ್ಟು ತಿಳಿಸಬೇಕು. ಮಾತ್ರವಲ್ಲ ಗುರುದಕ್ಷಿಣೆ ಸ್ವೀಕರಿಸಿದ ಬಳಿಕ ತಾವು ಹಸ್ತಿನಾವತಿಯ ಸಿಂಹಾಸನದ ಆಶ್ರಯದಲ್ಲೇ ಮಹಾನ್‌ವ್ಯಕ್ತಿಯಾಗಿದ್ದುಕೊಳ್ಳ ಬೇಕೆಂದು ಬಯಸುವೆವು.

ಧರ್ಮ. ಅಹುದು ಆಚಾರ್ಯ, ತಾವು ನಮ್ಮ ಬಳಿಯಲ್ಲೇ ಇದ್ದು ಸದಾ ಮಾರ್ಗದರ್ಶಕರಾಗಿ ಇರಬೇಕು. ಅಲ್ಲದೆ ಗುರುದಕ್ಷಿಣೆಯಾಗಿ ತಾವೇನು ಬಯಸುವಿರೆಂದು ತಿಳಿಸಿದರೆ ತಮ್ಮ ಶಿಷ್ಯರಾದ ನಾವು ಗಳೆಲ್ಲರೂ ಕೃತಾರ್ಥರು,

ಕೌರವ: ಯಾವ ರಾಜ್ಯದ ಪಟ್ಟವನ್ನು ಅಪೇಕ್ಷಿಸುವಿರೋ, ಅದನ್ನು ತಮ್ಮ ಪದತಲದಲ್ಲಿ ಗುರುದಕ್ಷಿಣೆಯಾಗಿ ಒಪ್ಪಿಸುವೆವು.

ಭೀಮ: ಆಚಾರ್ಯ, ಧನಕನಕಗಳೇ; ಭೊಕ್ಕಸ ಭಂಡಾರವೇ? ಏನು ಬೇಕಾ ದರು ಬಯಸಿರಿ. ನಿಮ್ಮ ಶಿಷ್ಯ ಭೀಮಸೇನನಿರುವ–ತಮ್ಮ ಬಯಕೆ ಯನ್ನೀಡೇರಿಸಲು.

ಅರ್ಜುನ: ಅಮರ ಲೋಕದ ಐರಾವತವೇ ? ಕಾಮಧೇನುವೇ ? ಕಲ್ಪ ವೃಕ್ಷವೇ ? ಅಥವಾ ಇನ್ನಾವುದೇ ಇರಲಿ, ಗುರುದಕ್ಷಿಣೆ ನೀಡುವ ಸಲುವಾಗಿ ಸ್ಫುರಿಸುತಿವೆ ಎನ್ನ ಬಾಹುಗಳು. ಗುರು ದೇ ವಾ, ಪಾರ್ಥನ ಸರ್ವಶಕ್ತಿಯೂ, ಗುರುದಕ್ಷಿಣೆಗಾಗಿ ತಮ್ಮ ಅಡಿದಾವರೆ ಗಳಲ್ಲಿ ಮುಡಿಪಾಗಿರುವುದು, ಸ್ವೀಕರಿಸಬೇಕು.

ದ್ರೋಣ: ಮೆಚ್ಚಿದೆನು, ಮೆಚ್ಚಿದೆನು—ನಿಮ್ಮೆಲ್ಲರ ಗುರುಭಕ್ತಿಯ ಕಂಡು. ಕುರುವಂಶಜರೇ, ಪಾಂಡುಪುತ್ರರೇ, ದಕ್ಷಿಣೆಯನ್ನಪೇಕ್ಷಿಸಿಯೇ ವಿದ್ಯಾದಾನವ ಮಾಡಿರುವೆನು ನಿಮಗೆ. ಕೇಳುವಿರೇ?–ನನ್ನ ಶಿಷ್ಯರಿಂದಲೇ ನಿನ್ನ ಹೆಡೆಮುಡಿಯ ಕಟ್ಟಿ ನನ್ನ ಕಾಲಬಳಿ ತರಿಸುವೆ ನೆಂದು ಶಪಥವ ಹಾಕಿರುವೆನು, ದುರುಳ ದ್ರುಪದನ ಮುಂದೆ ಅಂದು. ಒಂದು ದಿನ ರಾಜ ದ್ರುಪದ–ನನ್ನ ಸಹಪಾಠಿ–ಪರಮ ಮಿತ್ರ–ಮುಂದೆ ತಾನು ರಾಜನಾದಾಗ ಅರ್ಧ ರಾಜ್ಯವನ್ನೇ ನನ ಗೊಪ್ಪಿಸುವೆನೆಂದು ವಚನವಿತ್ತಿದ್ದ ಆತ. ವರ್ಷಗಳು ಉರುಳಿ ರಾಜ ನಾದಾಗ, ಬಡವನಾಗಿದ್ದ ನಾನು ಮಿತ್ರನೆಂಬ ಅಭಿಮಾನದಿಂದ ಅವನನ್ನು ಕಾಣಹೋಗಿದ್ದೆ. ಆದರೆ ರಾಜ್ಯಮದ, ಧನಮದದಿಂದ ಕೊಬ್ಬಿದ ಆತ ಈ ಬಡ ಬ್ರಾಹ್ಮಣನನ್ನು ತಿರಸ್ಕರಿಸಿದ. ಅವಮಾ ನಿಸಿದ. ಆಗಲೇ ನಾನು ಕೆರಳಿ ಕಟ್ಟಿಕೊಂಡೆ ಈ ಶಪಥವ. ಇಂದದು ಕೈಗೂಡಬೇಕು–ಕೊಡುವಿರೇ, ನಾನು ಬಯಸುವ ಗುರುದಕ್ಷಿಣೆ ?

ಎಲ್ಲರೂ: ಕೊಡುವೆವು—ಕೊಡುವೆವು.

ದ್ರೋಣ: ಕೊಡುವಿರಿ—ಕೊಡುವಿರಿ. ಆದರೆ, ಅದು ಒಬ್ಬನಿಂದ ಮಾತ್ರ ಸಾಧ್ಯ.

ಕೌರವ: ಯುವರಾಜನಾದ ನನ್ನಿಂದಲ್ಲವೇ ಗುರುದೇವಾ?

ದ್ರೋಣ: ಅಲ್ಲವೆಂದರೆ ಕುಪಿತನಾಗದಿರು ದುರ್ಯೋಧನ. ಉತ್ಸಾಹ ಹೀನನಾಗದಿರು.

ಕೌರವ: ಮತ್ತಾರು ಗುರುದೇವಾ—

ದ್ರೋಣ: ಅವನೇ—ಅವನೇ. ಪಾಂಡು ಪುತ್ರ ಫಲುಗುಣ. ಅವನೊಬ್ಬ

ನಿಂದಲೇ ಸಾಧ್ಯ. ಅವನೊಬ್ಬನೇ ಅದರೂ ನನ್ನ ಬಯಕೆಯ ಗುರುದಕ್ಷಿಣೆಯ ನೀಡಿದರೆ ನೀವೆಲ್ಲರೂ ಆ ಋಣದಿಂದ ಮುಕ್ತರಾಗುವಿರಿ–ಅರ್ಜುನ, ನನ್ನ ಪ್ರಿಯ ಶಿಷ್ಯ, ಅಪ್ರತಿಮ ಬಿಲ್ಲುಗಾರ—ಛಾಪವಿದ್ಯಾ ವಿಶಾರದ—ಅದ್ವಿತೀಯ ಧನುರ್ಧಾರಿ.

ಅರ್ಜುನ: (ಎದ್ದು ನಿಂತು ನಮಸ್ಕರಿಸುವನು) ಗುರುದೇವಾ ಧನ್ಯನಾದೆ.

ಕರ್ಣ: (ಪ್ರವೇಶಿಸಿ) ಸಾವಧಾನ; ಪಾರ್ಥನು ಈ ಧರಿತ್ರಿಯಲ್ಲಿ ಅದ್ವಿತೀಯ ಧನುರ್ಧಾರಿಯಾಗಬೇಕಾದರೆ, ಕರ್ಣನ ಹೆಗಲೇರಿದ ಈ ಧನುಸ್ಸನ್ನೆದುರಿಸಬೇಕು. ಪಾರ್ಥನು ಈ ಪ್ರಪಂಚದಲ್ಲಿ ಏಕೈಕ ಛಾಪವಿದ್ಯಾ ವಿಶಾರನಾಗಬೇಕಾದರೆ ಈ ಕರ್ಣನ ಶರಸಂಧಾನದಲ್ಲಿ ಸ್ಪರ್ಧಿಸಬೇಕು. ಆಚಾರ್ಯ, ಈ ಕಳದಲ್ಲಿ ಕರ್ಣನ ಸತ್ವ ಪರೀಕ್ಷೆಯೂ ನಡೆಯಬಹುದಷ್ಟೆ? ಆಚಾರ್ಯಶ್ರೇಷ್ಠರೇ, ರಾಜಾಧಿರಾಜರೇ ಪುರಜನರೇ, ಇಂದು ನಿಮ್ಮೆಲ್ಲರ ಮುಂದೆ ಏರ್ಪಡಿಸಿದ ಈ ಪ್ರದರ್ಶನಕ್ಕೆ ತೊಂದರೆ ಉಂಟುಮಾಡುವ ಇಚ್ಛೆ ನನ್ನದಲ್ಲ. ಆದರೆ ಇದೊಂದು ಸಾರ್ವಜನಿಕ ಸ್ಪರ್ಧಾರಂಗವೆಂದು ತಿಳಿದು ಬಂದಿರುವೆ. ಈ ಜಗತ್ತಿನ ಅತೀ ಶ್ರೇಷ್ಠ ಬಿಲ್ಲುಗಾರನ ಶಿಷ್ಯನಾಗಿರುವ ನಾನಿಂದು ಈ ಸ್ಪರ್ಧಾರಂಗಕ್ಕೆ ಇಳಿದಿರುವೆನು. ಪಾರ್ಥನೊಬ್ಬನೇ ಅಪ್ರತಿಮ ಜಗದೇಕ ಬಿಲ್ಲುಗಾರನೆಂದು ಸಾರಿದ ಈ ಆಚಾರ್ಯವರ್ಯರ ಘೋಷಣೆಯನ್ನು ನನ್ನ ಗುರುದೇವನ ಗೌರವಾರ್ಥ ಎದುರಿಸುತ್ತಿದ್ದೇನೆ—ಕೇವಲ ಧನುರ್ವಿದ್ಯೆಯಲ್ಲಿ ಮಾತ್ರವಲ್ಲ—ಕತ್ತಿವರಸೆಯಲ್ಲಿ— ಗದಾ ಪ್ರಹಾರದಲ್ಲಿ – ಮಲ್ಲಯುದ್ಧದಲ್ಲಿ—ಮತ್ತೇಕೆ? ಯಾವುದೇ ಶಸ್ತ್ರ ವಿದ್ಯೆಯಲ್ಲಿ ಈ ಕರ್ಣನು ಸ್ಪರ್ಧಿಸಲು ಮುಂದಾಗಿದ್ದಾನೆ.

ಕೃಪ: ಪಾರ್ಥನ ಛಾಪವಿದ್ಯಾ ಪ್ರದರ್ಶನವನ್ನು ಇಂದು ನೀನು ಕಂಡಿರುವೆಯೇನು?

ಕರ್ಣ: ಕಂಡಿರುವೆನು ಆಚಾರ್ಯ, ಕಂಡಿರುವೆನು. ಒಂದು ಬಾಣದಿಂದ ಆ ಅಶ್ವತ್ಥ ಮರದ ನೂರೆಲೆಗಳನ್ನು ಪಾರ್ಥನು ಛೇದಿಸುವುದನ್ನು ನೀವೆಲ್ಲರೂ ಕಂಡಿರುವಿರಾದರೆ—ಇದೋ, ಈ ಕರ್ಣನು ತನ್ನ

ಒಂದೇ ಬಾಣದಿಂದ ಅದೇ ಅಶ್ವತ್ಥ ವೃಕ್ಷದ ಎಲ್ಲಾ ಎಲೆಗಳನ್ನು ಕತ್ತರಿಸುವನು. (ಬಾಣ ಬಿಡುವನು—ಎಲ್ಲರೂ ಜಯಕಾರದಿಂದ ಕೈಚಪ್ಪಾಳೆ ಹೊಡೆವರು) ಪಾರ್ಥನು ಐದು ಶರಗಳಿಂದ ಸಿಡಿಲ ಮಳೆಗರೆದರೆ, ಕರ್ಣನು ಒಂದೇ ಒಂದು ಬಾಣದಿಂದ ಅದನ್ನು ಮಾಡಬಲ್ಲನು. (ಬಾಣ ಪ್ರಯೋಗಿಸುವನು—ಜಯಘೋಷ) ಕರ್ಣನ ಮತ್ತೊಂದು ಬಾಣ, ಮೇಘನಾದನನ್ನು ಒಲಿಸಿ ಮಳೆಗರೆಯಬಲ್ಲುದು—ಇನ್ನೊಂದು ಬಾಣ ಸುಂಟರ ಗಾಳಿಯ ಸೃಷ್ಟಿಸಿ ಜಗತ್ತನ್ನು ಅಲ್ಲೋಲ ಕಲ್ಲೋಲ ಮಾಡಬಲ್ಲುದು. (ಬಾಣ ಬಿಡುವನು—ಜಯಘೋಷ) ಬೆಂಕಿಯ ಮಳೆಗರೆಯಬಲ್ಲುದು—ಸಪ್ತ ಸಾಗರವ ಬತ್ತಿಸಬಲ್ಲುದು—ಈ ಕರ್ಣನ ಬತ್ತಳಿಕೆಯ ಬಾಣಗಳು. ಏಕೆ, ಆಚಾರ್ಯ ಪಾರ್ಥನೊಡನೆ ಪಂಥವನ್ನೊಡ್ಡಬಹುದಲ್ಲವೇ?

(ಕೌರವ ಮತ್ತು ಶಕುನಿಯರು ಗುಟ್ಟಾಗಿ ಏನನ್ನೋ ಮಾತಾಡುತ್ತಿರುವರು, ಹಿಂದಿನಿಂದ ಅಶ್ವತ್ಥಾಮನೂ ಬಂದು ಸಂಭಾಷಣೆಯಲ್ಲಿ ಭಾಗವಹಿಸುವನು. ಮತ್ತೊಂದೆಡೆ ಭೀಷ್ಮ, ದ್ರೋಣ, ಕೃಪಾಚಾರ್ಯರು ಏನನ್ನೊ ಮಾತಾಡಿಕೊಳ್ಳುವರು. ಪಾರ್ಥನು ಮಾತ್ರ ದುರಗುಟ್ಟಿ ಕರ್ಣನನ್ನು ನೋಡುತ್ತಿರುವನು)

ಕೌರವ: (ಎದ್ದು, ಕರ್ಣನ ವೇದಿಕೆಗೆ ಬಂದು ಹೂಮಾಲೆ ಹಿಡಿದು) ಎಲೈ ಆಗುಂತುಕವೀರಾ, ನೀನೊಬ್ಬ ಮಹಾಪರಾಕ್ರಮಿಯೆಂದು, ಅಪ್ರತಿಮ ಬಿಲ್ಲಾಳುವೆಂದು, ನಮಗೆಲ್ಲರಿಗೂ ವಿದಿತವಾಗಿದೆ, ನೀನು ಯಾರೇ ಇರು. ವೀರರನ್ನು ಗೌರವಿಸುವುದು ಕುರು ಸಿಂಹಾಸನದ ಸತ್ಸಂಪ್ರದಾಯ. ಆದ್ದರಿಂದ ಸಾದರದಿಂದ ಸ್ವಾಗತಿಸುತಿದ್ದೇನೆ. (ಮಾಲೆ ಹಾಕುವನು) ಮಾತ್ರವಲ್ಲ, ನಮ್ಮ ಮನೆತನಕ್ಕೆ ನೀನೊಡ್ಡಿದ ಪಂಥಾಹ್ವಾನವನ್ನು ಸ್ವೀಕರಿಸುವುದೂ ಕ್ಷಾತ್ರ ಧರ್ಮೀಯರಾದ ನಮ್ಮ ಕರ್ತವ್ಯವೂ ಆಗಿದೆ. ನಿನ್ನೊಡನೆ ಸ್ಪರ್ಧಿಸದಿದ್ದರೆ, ನಮ್ಮ ವಂಶಕ್ಕೆ ಅಪಕೀರ್ತಿ. ಆದರೆ ನಿನ್ನನ್ನು

ನೋಡುವಾಗ ಬಹುದೂರದಿಂದ ನಡೆದು ದಣಿದವನಂತೆ ತೋರುವಿ. ಹೊತ್ತ ಮೊದಲಾಗಿ ನನ್ನ ಶಿಬಿರಕ್ಕೆ ಬಂದು ದಣುವಾರಿಸಿಕೊಂಡು ಮತ್ತೆ ಪಾರ್ಥನೊಡನೆ ದ್ವಂದ್ವಕ್ಕೆ ನಿಲ್ಲಬೇಕೆಂದು ವಿನಂತಿಸುತ್ತೇನೆ. ಅಷ್ಟರೊಳಗೆ ನಮ್ಮ ಆಚಾರ್ಯ ವರ್ಗದವರು ನಿಮ್ಮ ಈರ್ವರ ಸ್ಪರ್ಧೆಯ ಸರ್ವ ಏರ್ಪಾಡುಗಳನ್ನು ಮಾಡುವರು. ಮಹಾ ಜನರೇ, ಈ ಆಗುಂತುಕ ತರುಣವೀರನೊಡನೆ, ನಮ್ಮ ಪಾರ್ಥನಿಂದ ನಡೆಯಲಿರುವ ಮಹಾ ಸ್ಪರ್ಧೆಯನ್ನು, ಶಾಂತಚಿತ್ತರಾಗಿ ನಿರೀಕ್ಷಿಸುತ್ತಿರಬೇಕಾಗಿ ಸಾರುತ್ತೇನೆ. (ಕರ್ಣನನ್ನು ಕರೆದುಕೊಂಡು ಹೋಗುವನು)

ಭೀಷ್ಮ: ದ್ರೋಣಾಚಾರ್ಯರೆ, ಅನಿರೀಕ್ಷಿತವಾಗಿ ಆಗಮಿಸಿದ ಈ ತೇಜಸ್ವಿ ತರುಣನ ಬಗ್ಗೆ ನಿಮ್ಮ ಅಭಿಪ್ರಾಯವೇನಿರಬಹುದು. ಈ ವೀರಾಗ್ರಣಿಯು ಪಾರ್ಥನಿಗೊಡ್ಡಿದ ಪಂಥವನ್ನು ನೀವು ಹೇಗೆ ವ್ಯವಹರಿಸುವಿರಿ?

ದ್ರೋಣ: ಏಕೆ ಪಿತಾಮಹ, ನನ್ನ ನೆಚ್ಚಿನ ಶಿಷ್ಯ ಪಾರ್ಥನ ಪೌರುಷದಲ್ಲಿ ಅನುಮಾನವೇ? ಪಾರ್ಥನು ಪಂಥವನ್ನು ಗೆಲ್ಲಲಾರನೆಂಬ ಸಂದೇಹವೇ?

ಭೀಷ್ಮ: ಆಚಾರ್ಯ, ಆ ಪ್ರಶ್ನೆಯೇ ಅಲ್ಲ. ಗೆಲ್ಲಲಿ ಬಿಡಲಿ. ಆದರೆ ಇವರೊಳಗಿನ ಸ್ಪರ್ಧೆಗೆ ಅವಕಾಶ ಕಲ್ಪಿಸಿಕೊಟ್ಟರೆ, ಕೌರವ ಪಾಂಡವರೊಳಗೆ ಮೊದಲೇ ಚಿಗುರೊಡೆದ ದ್ವೇಷ ಮಾತ್ಸರ್ಯಗಳು ದ್ವಿಗುಣಿತವಾಗುವುದು ಖಂಡಿತ. ಇವರ ಭಾವೀ ಏಳ್ಗೆಗಾಗಿ ನಾವು ರಾಜ್ಯವನ್ನು ವಿಂಗಡಿಸಿಕೊಡುವುದು ಅನಿವಾರ್ಯ. ಈಗ ಪ್ರವೇಶಿಸಿರುವ ಈ ನವತರುಣನು ಮಹಾ ಪರಾಕ್ರಮಿ ಎನ್ನುವುದರಲ್ಲಿ ಅನುಮಾನವಿಲ್ಲ.

ದ್ರೋಣ: ಆದರೂ ನನ್ನ ಶಿಷ್ಯನಲ್ಲಿ ನನಗೆ ಭರವಸೆಯಿದೆ, ಪಿತಾಮಹ. ಸ್ಪರ್ಧಾರಂಗಕ್ಕಿಳಿಸಿ ಪರೀಕ್ಷಿಸಿ ನೋಡೋಣ.

ಭೀಷ್ಮ: ಪಾರ್ಥನೆಂದು ಏಕೈಕ ಧನುರ್ಧರನೆಂದು ಸರ್ವ ವಿದಿತವಾಗಿರುವುದು. ಮುಂದೆ ನಡೆಯಬಹುದಾದ ಸ್ಪರ್ಧೆಯಿಂದ ಪಾರ್ಥನು ಸೋತರೂ, ಗೆದ್ದರೂ ಅಥವಾ ಸರಿಸಾಟಿಯಾದರೂ, ಕರ್ಣನೂ ಒಬ್ಬ ಮಹಾ ಧನುರ್ಧರನೆಂದು ಪ್ರಕಟವಾಗಿ ಪಾರ್ಥನನ್ನು ಎದುರಿಸಬಲ್ಲ ಒಬ್ಬ ವೀರಾಗ್ರಣಿಯೆಂದು ತೀರ್ಮಾನವಾಗುವುದು. ಆಗ ಕೌರವನು ಈ ತರುಣನನ್ನು ತನ್ನ ವಶಕ್ಕೆ ತೆಗೆದುಕೊಂಡು ಅವನ ಸಹಾಯ ದಿಂದ ಮುಂದೆ ಪಾಂಡವರನ್ನು ಎದುರಿಸಬಹುದು. ಆದ್ದರಿಂದ ಈ ಸ್ಪರ್ಧೆಯನ್ನು ನಿಲ್ಲಿಸುವುದು ಒಳ್ಳೆಯದು.

ದ್ರೋಣ: ಸ್ಪರ್ಧೆಯಿಂದ ಪಾರ್ಥನು ಹಿಂಜರಿದರೆ ಅವನಿಗೂ ಅವಮಾನ ವಲ್ಲವೇ ಪಿತಾಮಹ. ಅದೂ ಅಲ್ಲದೆ ಪಾರ್ಥನಾದರೂ. ಪಂಥದಿಂದ ಹಿಮ್ಮೆಟ್ಟುವ ಹೇಡಿಯಲ್ಲ. ಆದ್ದರಿಂದ ಏನುಪಾಯ?

ಭೀಷ್ಮ: ನೋಡಿ ಆಚಾರ್ಯರೆ, ನಾವು ಮೊದಲೇ ಸಾರಿದಂತೆ ಇಂದಿನ ಈ ಪ್ರದರ್ಶನವು ಕೊನೆಗಾಣಲು ಕೆಲವೇ ಅವಧಿ ಉಳಿದಿರುವುದು. ನೀವೆಲ್ಲರೂ, ನಿಮ್ಮ ಚಾತುರ್ಯದಿಂದ ಅಲ್ಲಿ ವರೆಗೆ ಸ್ಪರ್ಧೆಯು ನಡೆಯದಂತೆ ನೋಡಿಕೊಳ್ಳುವುದು— ಇದೇ ಉಪಾಯ.

ದ್ರೋಣ: ಸರಿ. ಅದು ಒಳ್ಳೆಯ ಉಪಾಯ – ಆದ್ದರಿಂದ ಕೃಪಾಚಾರ್ಯರೇ ಇದನ್ನು ನಿರ್ವಹಿಸಲಿ—ಆಚಾರ್ಯರೆ, ನಿಮಗೆ ತಿಳಿಯಿತಷ್ಟೆ, ವಿಷಯ? ಜಾಗರೂಕರಾಗಿರಿ, ಸರಿ ಅವರು ಬಂದಂತಿದೆ. (ಕರ್ಣನು ವೇಷಭೂಷಿತನಾಗಿ ಸುಯೋಧನನ ಜೊತೆಯಲ್ಲಿ ಬಂದು ವೇದಿಕೆಯ ನೇರುವನು. ಜನಸ್ತೋಮ ಹರ್ಷೋದ್ಗಾರಗೈವರು)

ಕೃಪಾ: (ಎದ್ದು ನಿಂತು) ಎಲೈ ತರುಣ ವೀರಾ, ಇಂದು ನಾವು ಏರ್ಪ ಡಿಸಿದ ಈ ಸ್ಪರ್ಧಾ ರಂಗಕ್ಕೆ ನೀನಿತ್ತ ಆಗಮನದಿಂದ ಹಾಗೂ ಪಂಥಾಹ್ವಾನದಿಂದ ಕಳೆಯೇರಿದೆ—ಶೀರ್ಪ್ರಗಾರರಾದ ನಾವು ನಿನಗೆ ಸ್ವಾಗತವನ್ನಿತ್ತಿದ್ದೇವೆ—ಆದರೆ ನೀನಿಂದು ಎದುರಿಸಲಿರುವ ಧನುರ್ಧಾರಿಯು ಚಂದ್ರವಂಶದ ಚಕ್ರವರ್ತಿ ಪಾಂಡುರಾಜನ ಸುತ ನಾದ ಪಾರ್ಥನು. ಅವನೊಡನೆ ಸೆಣಸಾಡಲಿರುವ ನಿನ್ನ ಅರ್ಹತೆ ಯನ್ನು ಅರಿತುಕೊಳ್ಳುವುದು ನಮ್ಮ ಕರ್ತವ್ಯವಾಗಿದೆ. ಆದ್ದ

ರಿಂದ ಈ ಶಸ್ತ್ರ ಪರೀಕ್ಷೆಯಲ್ಲಿ ನಿನ್ನ ಯೋಗ್ಯತೆಯೇನೆಂಬುದನ್ನು ತಿಳಿದುಕೊಳ್ಳಬಹುದಲ್ಲಾ.

ಕರ್ಣ: (ಗಟ್ಟಿಯಾಗಿ ನಗುವನು) ಆಚಾರ್ಯರೇ, ನನ್ನ ಯೋಗ್ಯತೆಯನ್ನು ಪ್ರಶ್ನಿಸಿದಿರೇ? ಕೆಲವೇ ಕ್ಷಣಗಳ ಹಿಂದೆ, ನನ್ನ ಬತ್ತಳಿಕೆಯ ಬಾಣಗಳು ಪ್ರದರ್ಶಿಸಿದ ಚಿತ್ರ ವಿಚಿತ್ರಗಳನ್ನು ಕಾಣಲಿಲ್ಲವೇ? ಮತ್ತೂ ಯೋಗ್ಯತೆಯ ಪ್ರಶ್ನೆಯೇ?

ಕೃಪಾ: ನಾವು ಸಿಂಹಾಸನದಿಂದ ನೇಮಿಸಲ್ಪಟ್ಟ ಇಂದಿನ ಸ್ಪರ್ಧೆಯ ನ್ಯಾಯಾಧೀಶರು, ನಿನ್ನ ಸಂಪೂರ್ಣ ಸತ್ವವು ನಮಗೆ ಸಮಾಧಾನವಾಗಬೇಕು.

ಕರ್ಣ: (ತಿರಸ್ಕಾರದಿಂದ) ಅದಕ್ಕಾಗಿಯೇ ಈ ಕಳದಲ್ಲಿ ನಿಂತು ಕೆಚ್ಚೆದೆಯ ವೀರರನ್ನು ಸ್ಪರ್ಧೆಗೆ ಕರೆಯುತ್ತಿದ್ದೇನೆ. ನೀವು ನನ್ನ ಸತ್ವವನ್ನು ಪರೀಕ್ಷಿಸುವ ಮುನ್ನ—ಯಾವಾತನ ನಾಮೋಚ್ಚಾರಣೆ ಮಾತ್ರದಿಂದ ಕ್ಷಾತ್ರವೀರರ ಹೃದಯವು ವಜ್ರಾಘಾತದಿಂದ ಜರ್ಝರಿತವಾಗುವುದೋ, ಯಾವಾತನ ಹುಂಕಾರ ಮಾತ್ರದಿಂದ ಈ ಧರಿತ್ರಿಯೇ ಧೂಳೀದೂಸರವಾಗುವುದೋ, ಆ ಪರಶುಧರ ಭಾರ್ಗವ ರಾಮನ ಪ್ರಿಯ ಶಿಷ್ಯನಾದ ನಾನು, ನನ್ನ ಸತ್ವವನ್ನು ಪ್ರಶ್ನಿಸುವ ನಿಮ್ಮೆಲ್ಲರ ಯೋಗ್ಯತೆಯನ್ನು ಅಳೆಯಬೇಕಾಗಿದೆ. (ದಿಟ್ಟಿಸಿ ಸುತ್ತ ನೋಡುವನು) ಓ ಎನ್ನ ನೆಚ್ಚಿನ ನಾಗರಿಕರೆ, ಈ ಸ್ಪರ್ಧಾ ಭೂಮಿಯಲ್ಲಿ ಭಾಗವಹಿಸಲು ಬೇಕಾದ ಅರ್ಹತೆಯೇನೆಂದರೆ ಪೌರುಷವಲ್ಲದೆ ಬೇರೇನಿಲ್ಲ. ನನ್ನ ಪೌರುಷವನ್ನು ಪ್ರಶ್ನಿಸುವ ಹಕ್ಕು ನನ್ನ ಗುರುದೇವನಾದ ಪರಶುರಾಮನಿಗಲ್ಲದೆ ಅನ್ಯರಿಗಿಲ್ಲ.

ಭೀಷ್ಮ: ದ್ರೋಣಾಚಾರ್ಯರೇ, ಕೃಪಾಚಾರ್ಯರೇ ಈ ವೀರಾವೇಶದ ಮಾತುಗಳಿಂದ ಮರುಳುಗೊಂಡ ಈ ಪ್ರೇಕ್ಷಕ ವೃಂದವು ನಿಮ್ಮಿಬ್ಬರನ್ನು ಕೂಡಾ, ಆತನೊಡನೆ ಸ್ಪರ್ಧೆಗಿಳಿಯುವಂತೆ ಬಲವಂತಪಡಿಸಬಹುದು. ಅದರ ಮೊದಲು ಆ ಹುಡುಗನೊಡನೆ ಕೇಳಿರಿ, ಅವನಾರೆಂದು. ಆವ ರಾಜಮನೆತನದವನೆಂದು, ಆತನ ತಾತ, ಮುತ್ತಾತರಾರೆಂದು.

ಕೃಪಾ: ಎಲೈ ತರುಣವೀರಾ, ಚಂದ್ರವಂಶಲಲಾಮ, ಗಂಗಾತನುಜ. ಕುರುಕುಲ ಸಿಂಹಾಸನದ ಅನಭಿಷಿಕ್ತ ಸಾರ್ವಭೌಮ, ಪರಶುರಾಮ ಶಿಷ್ಯರಾದ ಭೀಷ್ಮ ಪಿತಾಮಹರಿಂದ ಅನುಜ್ಞೆಯಾಗಿದೆ.—ನಿನಗೆ ಜನ್ಮವಿತ್ತ ಮನೆತನವಾವುದೆಂದು; ನಿನ್ನ ಪೂಜ್ಯ ಮಾತಾ ಪಿತೃಗಳಾರೆಂದು.

ಕರ್ಣ: ಓ ಪಿತಾಮಹ—ಬಲ್ಲೆನು. ಬಲ್ಲೆನು. ತಮ್ಮನ್ನು ಕೇಳಿಬಲ್ಲೆನು. ಈ ರಸಮಯ ಅಪೂರ್ವ ಸನ್ನಿವೇಶದಲ್ಲಿ ತಮ್ಮ ದರ್ಶನಲಾಭ ವನ್ನು ಪಡೆದ ನಾನು ಧನ್ಯನು—ನನ್ನ ಗುರುದೇವ ವರ ಪರಶು ರಾಮರ ಶಿಷ್ಯರಾದ ನೀವೂ ನನಗೆ ಸದಾ ಮಾನ್ಯರು—ವಂದ್ಯರು ಪೂಜ್ಯರು. ನನ್ನನ್ನು ಆಶೀರ್ವದಿಸಿರಿ: ಪಿತಾಮಹ. (ನಮಸ್ಕರಿ ಸುವನು)

ಭೀಷ್ಮ: ಆಯುಷ್ಮಂತನಾಗು, ವತ್ಸಾ.

ಕರ್ಣ: ಪಿತಾಮಹ, ನನ್ನ ಜನ್ಮ ವೃತ್ತಾಂತವನ್ನು ತಾವು ತಿಳಿಯಲಿಚ್ಛಿಸುವಿ ರಾದರೆ ಹೇಳುವೆ, ಕೇಳಿರಿ. ಜಾತಿಯಲ್ಲಿ ಸೂತನು ನಾನು—ತಂದೆಯೋ ಅಧಿರಥ—ರಾಧೆಯೋ ನನ್ನ ತಾಯಿ. ಗುರುವೋ ಭಾರ್ಗವ ರಾಮ. ಕರ್ಮದಲ್ಲಿ ಕ್ಷತ್ರಿಯ—ಕ್ಷತ್ರಿಯೋಚಿತವಾದ ಪೌರುಷ ನನ್ನಲ್ಲಿದೆ. ಪಾರ್ಥನೊಡನೆ ಸೆಣಸಾಡಬಲ್ಲ ಧನುರ್ವಿದ್ಯೆ ನನ್ನಲ್ಲಿದೆ.

ಎಲ್ಲರೂ: ಸೂತ ಪುತ್ರ......!

ಕೃಪಾ: ಜಾತಿಯಲ್ಲಿ ಹೀನನಾದ ಸೂತಪುತ್ರನಿಗೆ ಕ್ಷತ್ರಿಯರ ಕಳದಲ್ಲಿ–ಅದೂ ರಾಜಪುತ್ರರ ಸಮೂಹದಲ್ಲಿ ಸಮಾನಸ್ಥಾನ ಸಾಧ್ಯವಿಲ್ಲ. ಇದು ರಾಜಧರ್ಮ. ನೀನು ಕ್ಷತ್ರಿಯನೂ ಅಲ್ಲ, ರಾಜಪುತ್ರನೂ ಅಲ್ಲ—ರಾಜನೂ ಅಲ್ಲ.

ಕರ್ಣ: ಅಂದರೆ ಅರ್ಜುನನೊಡನೆ ಸ್ಪರ್ಧಿಸುವ ಅವಕಾಶ ನನಗಿಲ್ಲವೇ?

ಕೃಪಾ: ನಮ್ಮ ನಿಯಮಗಳಿಗನುಸಾರ ಸಾಧ್ಯವಿಲ್ಲ.

ಕೌರವ: (ಒಮ್ಮೆಲೇ ಎದ್ದು) ಸಾಧ್ಯವಿದೆ—ಆಚಾರ್ಯವರ್ಯರೆ. ರಾಜಾಧಿರಾಜರೆ, ಪುರಜನರೇ—ಇಂದು ನಿಮ್ಮೆಲ್ಲರ ಸಮಕ್ಷಮ ನಾನಿಂದು ನನ್ನ ಆಡಳಿತಗೊಳಪಟ್ಟ ಅಂಗರಾಜ್ಯದ ಪಟ್ಟವನ್ನು ಈ ಕರ್ಣನಿಗೆ ಒಪ್ಪಿಸಿದ್ದೇನೆ. ಕ್ಷುಲ್ಲಕವಾದ ದರ್ಭೆಯ ತುಂಡೊಂದು ಕೃಪಾಚಾರ್ಯರಂತಹ ಮಹಾ ಬ್ರಾಹ್ಮಣರ ಹುಟ್ಟಿಗೆ ಕಾರಣವಾಗಿದ್ದರೆ, ಕ್ಷುಲ್ಲಕವಾದ ಮಣ್ಣಿನ ಮಡಕೆಯೊಂದು ದ್ರೋಣಾಚಾರ್ಯರಂತಹ ಆಚಾರ್ಯ ಶ್ರೇಷ್ಠರ ಜನ್ಮಕ್ಕೆ ಕಾರಣವಾಗಿದ್ದರೆ, ವೀರಾಗ್ರಣಿಯಾದ ಸೂತಕುಲದ ಕರ್ಣನು ಅಂಗರಾಜ್ಯದ ಅಧಿಪತಿ ಆಗುವುದರಲ್ಲಿ ತಪ್ಪೇನು? ಅಂಗರಾಜ್ಯದ ವರಪ್ರಜೆಗಳೇ, ನೀವು ಕಳಕೊಂಡ ನಿಮ್ಮ ರಾಜ್ಯದ ರಾಜನ ಸ್ಥಾನಕ್ಕೆ ನನ್ನ ಮಿತ್ರನೂ, ಪರಾಕ್ರಮಿಯೂ ಆದ ಈ ಕರ್ಣನನ್ನು ನಿಮಗೆ ಕೊಟ್ಟಿರುವೆನು—ಸ್ವೀಕೃತವಷ್ಟೆ.

ಎಲ್ಲರೂ: ಅಂಗರಾಜನಿಗೆ ಜಯವಾಗಲಿ; ಕೌರವೇಶ್ವರನಿಗೆ ಶುಭವಾಗಲಿ.

ಕೌರವ: ಕರ್ಣಾ, ನೀನು ಯಾರೇ ಇರು, ಯಾವ ಜಾತಿಯೇ ಇರಲಿ, ಯಾವ ಕುಲವೇ ಇರಲಿ—ನಾನು ಧುರ್ಯೋಧನ. ಕುರುಸಾರ್ವಭೌಮನ ಜ್ಯೇಷ್ಠ ಪುತ್ರ, ನಿನ್ನ ಶೌರ್ಯವನ್ನು ಮೆಚ್ಚಿ ನಿನ್ನ ಮಿತ್ರತ್ವವನ್ನು ಯಾಚಿಸುವೆ. ಇಚ್ಛಿಸುವಿಯಾದರೆ ಇದೋ ನನ್ನ ಸ್ನೇಹ ಹಸ್ತ ನೀಡಿದ್ದೇನೆ. ನನ್ನ ಕೊನೆಯ ಉಸಿರಿನ ತನಕ ನಿನ್ನನ್ನು ನಾನು ನನ್ನ ಪರಮ ಸಖನನ್ನಾಗಿ ಪರಿಗ್ರಹಿಸುವೆನು.

ಕರ್ಣ: ಭಲೇ ಭಲೇ ಕೌರವೇಶ್ವರ. ಎಂತಹ ಉದಾರಿ ನೀನು. ಸೂತ ಕುಲವೆಂಬ ಅವಮಾನಗಳ ಆಘಾತದಿಂದ ಅಳಿದುಹೋಗಲಿದ್ದ ಕರ್ಣನ ಬಾಳಿನಲ್ಲಿ ಹೊಸ ಬೆಳಕನ್ನು ಚೆಲ್ಲಿದೆ. ನಿರ್ಭಾಗ್ಯ ನಿರ್ಗತಿಕನಾದ ನನ್ನಲ್ಲಿ ಮಹತ್ತಾದ ಆಶ್ರಯವಿತ್ತು ನವಚೇತನವನ್ನು ತುಂಬಿಸಿದೆ. ಇದೋ ಸೂರ್ಯಸಾಕ್ಷಿಯಾಗಿ ನನ್ನ ವಚನವೀಯು ತ್ತೇನೆ—ಇಂದಿನಿಂದ ನಿನ್ನ ಸುಖವೆಂದರೆ ನನ್ನ ಸುಖ—ನಿನ್ನ ದುಃಖ ವೆಂದರೆ ನನ್ನ ದುಃಖ—ನಿನ್ನ ಬೆವರು ಬೀಳುವಲ್ಲಿ ನನ್ನ ನೆತ್ತರು

ನೀನಿಂದು ನನಗೆ ನಿನ್ನ ಅಂಗರಾಜ್ಯದ ಪಟ್ಟವಿತ್ತಿದ್ದರೆ ಇದೋ ಕೇಳು—ನಿನಗಾಗಿ, ನಿನ್ನ ಮಿತ್ರತ್ವಕಾಗಿ ನನ್ನ ಪ್ರಾಣವನ್ನೇ ಪಣ ವಾಗಿಟ್ಟಿದ್ದೇನೆ.

ಕೌರವ: ಧನ್ಯನಾದೆ, ಮಿತ್ರ ಧನ್ಯನಾದೆ (ಆಲಂಗಿಸುವನು) ಆಚಾರ್ಯವರ್ಯ, ಇನ್ನಾದರೂ ಪಾರ್ಥನೊಡನೆ ಸ್ಪರ್ಧೆ ನಡೆಯಬಹುದಷ್ಟೆ.

ಅರ್ಜುನ: ಆಚಾರ್ಯರೇ, ಗುರುಗಳೇ, ನಿಮ್ಮ ಧನುರ್ವಿದ್ಯಾ ಗರಡಿಯಲ್ಲಿ ಪಳಗಿದ ನಾನು ಕ್ಷತ್ರಿಯನಾಗಿ, ಎದುರಾಳಿಯಿಂದ ಬಂದ ಪಂಥಾ ಹ್ವಾನವನ್ನು ಸ್ವೀಕರಿಸುವುದು ನನ್ನ ಧರ್ಮವಾಗಿದೆ. ರಾಜ ಧರ್ಮವು ಏನೇ ಇರಲಿ—ಪ್ರತಿಸ್ಪರ್ಧಿಯು ಹೀನಕುಲದವನೆಂಬ ನೆಪದಿಂದ ಸ್ಪರ್ಧೆಗೆ ಅವಕಾಶ ಕೊಡದಿರಬೇಡಿರಿ. ಎದುರಾಳಿಯನ್ನು ಎದುರಿಸುವಂತಹ ಧನುರ್ವಿದ್ಯೆ ನನ್ನಲ್ಲಿ ಸಾಕಷ್ಟಿದೆ, ನಡೆಯಲಿ ಸ್ಪರ್ಧೆ–ಹೂಂ–ಅನುಜ್ಞೆ ಕೊಡಿರಿ ಆಚಾರ್ಯ– (ಹಿನ್ನೆಲೆಯಿಂದ) ಮಹಾಮಾತೆ ಕುಂತೀ ದೇವಿಯವರು ಮೂರ್ಛಿತರಾಗಿರುವರು— (ಅಷ್ಟರಲ್ಲಿ ಘಂಟಾನಾದವಾಗುವುದು)

ಕೃಪಾ: ಮಹಾಜನರೇ, ನಾವು ಮೊದಲೇ ನಿರ್ಧರಿಸಿದಂತೆ ಇಂದಿನ ಶಸ್ತ್ರ ವಿದ್ಯಾ ಪರೀಕ್ಷಾಕಾಲವು ಸಮಾಪ್ತಿಯಾಗಿದೆ—ಇನ್ನು ಸ್ಪರ್ಧೆಗೆ ಇಲ್ಲಿ ಅವಕಾಶವಿಲ್ಲವೆಂದು ವಿಷಾದಪೂರ್ವಕ ವ್ಯಕ್ತಪಡಿಸಬೇಕಾಗಿದೆ.

— ತೆರೆ —

ದೃಶ್ಯ—8. ಮಾರ್ಗ

ಸು: ಹೇಗೆ?......ನಿನ್ನೆಯ ಪ್ರದರ್ಶನ ಹೇಗೆ? ಏನು ಪರಾಕ್ರಮ?

ದು: ಏನು ಸ್ಪರ್ಧೆ; ಏನು ಆಟ; ಏನು ನೋಟ; ಕಣ್ಣಿಗೆ ಹಬ್ಬವೇ ಹಬ್ಬ.

ಸು: ಇಂತಹ ಒಂದು ಶಕ್ತಿ ಪ್ರದರ್ಶನ ನಾನು ಈ ವರೆಗೆ ನೋಡಿದ್ದಿಲ್ಲ.

ದು: ಆ ಭೀಮ ದುರ್ಯೋಧನರು ಗದಾ ಪ್ರಹಾರಮಾಡಿಕೊಂಡರಲ್ಲಾ;

ಅವರ ಒಂದೊಂದು ತಾಡನ ನನ್ನ ಎದೆಯನ್ನು ಒಡೆದಂತೆ ಮಾಡು ತಿತ್ತು. ಯಾರು ಮೇಲು, ಯಾರು ಕೀಳು ಎಂದು ಹೇಳುವುದೇ ಕಷ್ಟ.

ಸು: ಕಷ್ಟವೇನು? ಆಟ ಮುಂದರಿಯುತ್ತಿದ್ದರೆ ಭೀಮ ಮೇಲೆ, ಕೌರವ ಕೆಳಗೆ— ಆಗುತಿತ್ತು.

ದು: ಅದು ಹೇಗೆ? ಕೌರವ ಮೇಲೆ ಭೀಮ ಕೆಳಗೆ—ಯಾಕೆ ಆಗಬಾರದು? ಆಗುತಿತ್ತು. ಆದರೆ ತೀರ್ಪುಗಾರರು ಬಿಡಲಿಲ್ಲ. ಅವರಿಬ್ಬರನ್ನೂ ಸಮಬಲರೆಂದು ಸಾರಿದರು.

ಸು: ಅದೆಲ್ಲ ಸಾಯಲಿ. ಆ ಅರ್ಜುನ: ವೀರನೆಂದರೆ ಅವನೆ. ಛೆ; ಛೆ, ಎಂತಹ ಕೈ ಚಮತ್ಕಾರ. ಅವನು ಬತ್ತಳಿಕೆಯಿಂದ ತೆಗೆಯುವಾಗ ಒಂದೇ ಬಾಣ. ಆದರೆ ಬಿಡುವಾಗ ಸಾವಿರಾರು ಆಗ್ತದಲ್ಲಾ? ಅದು ಹೇಗೆ? ಸುಮ್ಮನೆ ಹೇಳಲಿಲ್ಲ ದ್ರೋಣಾಚಾರ್ಯರು, 'ಛಾಪವಿದ್ಯೆಯಲ್ಲಿ ಅರ್ಜುನನೇ ಅದ್ವಿತೀಯ'ನೆಂದು.

ದು: ಆ ಮೇಲೆ ಕರ್ಣ ಅಲ್ಲಿಗೆ ಬರುವಾಗ ನೀನು ಎಲ್ಲಿಗೆ ಹೋಗಿದ್ದೆ? ಪ್ರಾಯಶ; ನಿದ್ದೆ ಮಾಡುತಿದ್ದೆಯೋ ಏನೋ? ಅಲ್ಲಾ. ಆ ಪೋರ ಅರ್ಜುನನೆಲ್ಲಿ? ಕಲಿ ಕರ್ಣನೆಲ್ಲಿ? ಕರ್ಣನ ಬಾಣ ಪ್ರಯೋಗ ಗಳನ್ನು ನೀನು ನೋಡಿಲ್ಲವೆಂದು ಕಾಣುತ್ತದೆ.

ಸು: ನೋಡದೆ ಏನು? ಅರ್ಜುನನಿಗೆ ಮತ್ತೆ ಪುನಃ ಅವಕಾಶ ಕೊಡುತಿ ದ್ದರೆ ಕರ್ಣನಿಗಿಂತಲೂ ಮಿಗಿಲಾದ ಪ್ರದರ್ಶನವನ್ನೀಯುತಿದ್ದ.

ದು: ಕರ್ಣ ಕರ್ಣನೆ—ಅರ್ಜುನ ಅರ್ಜುನನೆ.

ಸು: ಅರ್ಜುನ ಅರ್ಜುನನೆ—ಕರ್ಣ, ಕರ್ಣನೆ. ಕರ್ಣನಿಗಿಂತ ಅರ್ಜುನನೇ ಮೇಲು.

ದು: ಅರ್ಜುನನಿಗಿಂತ ಕರ್ಣನೇ ಮೇಲು. ಅವನೊಂದು ಗುಡುಗು ಬರಿಸಿದ ನನ್ನ ಎದೆಯೇ ಹಾರಿತು. ಮಳೆ ಬರಿಸಿದ, ನೆರೆ ಬಂತೋ ಹೆದರಿದೆ.

ಸು: ಅದೆಲ್ಲಾ ಅರ್ಜುನನಿಗೂ ಗೊತ್ತು–ಆದರೆ ಹಾಗೆಲ್ಲಾ ತೋರಿಸಲಿಲ್ಲ.

ದು: ಯಾಕೆ ತೋರಿಸಲಿಲ್ಲ? ಅವನಿಗೆ ಗೊತ್ತಿಲ್ಲ–ಅಷ್ಟೆ ಗುಟ್ಟು.

ಸು: ಗುಟ್ಟೇನು? ಗುಟ್ಟು ಏನೂ ಇಲ್ಲ. ಕರ್ಣನಿಗಿಂತ ಅರ್ಜುನನೇ ಶ್ರೇಷ್ಠ.

ದು: ಅರ್ಜುನನಿಗಿಂತ ಕರ್ಣನೇ ಶ್ರೇಷ್ಠ.

ಸು: ಸುಮ್ಮನೆ ಬಾಯಿಗೆ ಬಂದಂತೆ ಒದರದಿರು. ಅರ್ಜುನನಲ್ಲಿ ಸ್ಪರ್ಧಿಸುವಷ್ಟು ಸಾಹಸ ಕರ್ಣನಿಗೆ ಇಲ್ಲವೇ ಇಲ್ಲ.

ದು: ಬಾಯಿ ಮುಚ್ಚು. ಕರ್ಣನಲ್ಲಿ ಸ್ಪರ್ಧಿಸುವಷ್ಟು ಸಾಹಸ ಅರ್ಜುನನಿಗೆ ಇಲ್ಲವೇ ಇಲ್ಲ.

ಸು: ಇದೆ.

ದು: ಇಲ್ಲ.

ಸು: ಇದೆ.

ದು: ಇಲ್ಲ.

ಸು: ಇಲ್ಲ.

ದು: ಇದೆ.

ಸು: ಏನು ಇದೆ?

ದು: ಅರ್ಜುನನಲ್ಲಿ ಸ್ಪರ್ಧಿಸುವ ಸಾಹಸ ಕರ್ಣನಿಗೆ ಇದೆ,

ಸು: ಜೋಕೆ–ಜೋಕೆ. ನನ್ನ ಸ್ವಾಮಿ ಪಾರ್ಥನನ್ನು ನನ್ನೆದುರು ಹಂಗಿಸಿದರೆ ನಾನು ಸರ್ವಥಾ ಸಹಿಸಲಾರೆ.

ದು: ನನ್ನ ಸ್ವಾಮಿ ಕರ್ಣನನ್ನು ಭಂಗಿಸಿದರೆ ನಾನೂ ಸಹಿಸಲಾರೆ.

ಸು: ಹಾಂ! ಕರ್ಣ, ನಿನಗೆ ಸ್ವಾಮಿ, ಯಾವಾಗ ಆದ?

ದು: ನಿನಗೆ ಅರ್ಜುನ ಯಾವಾಗ ಒಡೆಯನಾದ?

ಸು: ನೋಡು, ಧನುರ್ವಿದ್ಯೆಯಲ್ಲಿ ಅರ್ಜುನನೇ ಶ್ರೇಷ್ಠನೆಂದು

ದ್ರೋಣಾಚಾರ್ಯರು ಸಾರಿದರಲ್ಲವೇ? ಆಗಲೇ ನಾನು ಅರ್ಜುನನ ಬಳಿಗೆ ಹೋಗಿ ನಾನವನ ಸೇವಕನಾಗುವೆನೆಂದು ಪ್ರಾರ್ಥಿಸಿಕೊಂಡೆ ಒಪ್ಪಿದ. ಈಗ ನಾನು ಅರ್ಜುನನ ಆಳು.

ದು: ನೋಡು, ಕರ್ಣ ಅಲ್ಲಿಗೆ ಬಂದು ನಮ್ಮನೆಲ್ಲಾ ಬೆರಗುಗೊಳಿಸುವ ಚಮತ್ಕಾರಗಳನ್ನು ಮಾಡಿತೋರಿಸಿ ಮತ್ತೆ ಕೌರವನೊಂದಿಗೆ ಶಿಬಿರಕ್ಕೆ ಹೋದನಲ್ಲವೇ, ಆಗ ನಾನೂ ಹೋಗಿ ಕರ್ಣನೊಡನೆ ಅವನ ಭೃತ್ಯನಾಗುವೆನೆಂದೆ. ನಾನೀಗ ಕರ್ಣನ ಭೃತ್ಯ.

ಸು: ಹೋ......ಹಾಗೆ.

ದು: ಅಹುದು—ಹಾಗೆ.

ಸು: ಆದರೆ, ನಿನ್ನ ಕರ್ಣ ಸೋಲದೆ ಇದ್ದರೂ ಗೆಲ್ಲಲಾರ.

ದು: ನಿನ್ನ ಅರ್ಜುನನೂ ಗೆಲ್ಲಲಾರ.

ಸು: ಹಾಗಾದರೆ ಅವರಿಬ್ಬರೂ ಸಮಬಲರೆಂದು ಹೇಳುವ—ಆಗದೆ?

ದು: ಹೇಳುವ--ಅದಕ್ಕೇನಂತೆ?

ಸು: ನಾವು ಯಾಕೆ, ಅವರಿಗಾಗಿ ಜಗಳಾಡಿಕೊಳ್ಳಬೇಕು?

ದು: ಜಗಳಾಡಿ ಸಾಯಬೇಕು.

ಸು: ಆದರೂ. ಆ ಅರ್ಜುನ ನಿಜವಾಗಿಯೂ ಅಪ್ರತಿಮ ಧನುರ್ಧಾರಿ.

ದು: ಧನುರ್ಧಾರಿ ಅಂದರೆ ಕರ್ಣನೆ—ಅವನಿಗಿಂತ ಶ್ರೇಷ್ಠ ಬೇರಿಲ್ಲ.

ಸು: ನೋಡು, ಪುನಃ ಜಗಳ ಆರಂಭಿಸಿದೆ?

ದು: ನೀನೇ ಆರಂಭಿಸಿದೆ.

ಸು: ಎಲ್ಲಿ ಆರಂಭಿಸಿದ್ದೇನೆ? ಇಡೀ ಪ್ರಪಂಚದಲ್ಲಿ ಶ್ರೇಷ್ಠ ಧನುರ್ಧಾರಿಗಳೆಂದರೆ ಅರ್ಜುನ ಮತ್ತು ಕರ್ಣ ಅಲ್ಲವೇ?

ದು: ಅಹುದು ಕರ್ಣ ಮತ್ತು ಅರ್ಜುನ.

ಸು: ಹೋಗುವ, ಕೆಲಸಕ್ಕೆ ಹೊತ್ತಾಯಿತು.

(ಹೋಗುವರು)

ದೃಶ್ಯ—9—(ದ್ವಾರಕೆಯಲ್ಲಿ)

ಕೃಷ್ಣ: (ಶ್ರೀ ಕೃಷ್ಣನು ಮಲಗಿರುವನು. ಅವನ ತಲೆಯ ಹತ್ತಿರ ಕೌರವನು,ಕಾಲಿನಹತ್ತಿರ ಅರ್ಜುನನು ಕುಳಿತುಕೊಂಡಿರುವರು.ತುಸು ಸಮಯದಲ್ಲಿ ಕೃಷ್ಣನು ಮೈಮುರಿದೆದ್ದು) ಹೋ ಅರ್ಜುನಾ, ಯಾವಾಗ ಬಂದೆ? (ಸುಯೋಧನ ಗಂಭೀರತೆಯಿಂದ ಕೆಮ್ಮಿ ಸದ್ದು ಮಾಡುವನು)

ಅರೆ, ಸುಯೋಧನ! ಏನಿದು. ಏನಾಶ್ಚರ್ಯ, ಈರ್ವರೂ ಏಕ ಕಾಲದಲ್ಲಿ. ಎಂತಹ ಸುಯೋಗ; ಎಂದೂ ಕಾಣೆ. ಉಭಯ ಮಹಾನುಭಾವರೂ ನಮ್ಮ ಆಲಯಕೆ ಚಿತ್ತೈಸಿದ ಕಾರಣ ದಯವಿಟ್ಟು ಹೇಳಿರಿ. ಬಾ, ಸುಯೋಧನ, ಬಾ, ಅರ್ಜುನಾ (ಇಬ್ಬರನ್ನೂ ಹತ್ತಿರ ಎಳೆಯುವನು)

ಸು. ಶ್ರೀ ಕೃಷ್ಣಾ, ಯಾದವರು ಕೌರವರೊಳು ಭೇದವೇನಾದರೂ ಇದೆಯೆ? ನೀವು ಭೇದವೆಣಿಸಿದರೂ ನಮಗೇನು ಅಗೌರವ? ನಿಮ್ಮಂತಹ ಸಖರು ನಮಗೆ ಬೇರಾರೂ ಇರುವರೇ? ಕೃಷ್ಣಾ ಕೇಳು. ಸೋದರರ ಮನಕದಡಿದುದು, ದಾಯಾದ ವಿಷಯದಲಿ. ನಾವು ಧರಣಿಗಾಗಿ ಕಾದುವೆವು. ನೀವು ನಮಗೆ ನೆರವಾಗಬೇಕು. ಬಲವಾಗಬೇಕು.

ಕೃಷ್ಣ: (ನಗುತ್ತ) ಕೌರವೇಶ್ವರ ಕೇಳು. ಈ ಧರಣೀನಾರಿ ಯಾವ ನೃಪನೊಡನೆಯೂ ಸಂಸಾರ ನಡೆಸಿಲ್ಲ. ಯಾರನ್ನೂ ಮೆಚ್ಚಲಿಲ್ಲ. ಯಾರೊಡನೆಯೂ ಸಹಗಮನಕ್ಕಿಳಿಯಲಿಲ್ಲ. ಭೂರಿ ಮಮಕಾರದಲಿ ನೃಪರು, ಈ ಧರೆ ತಮ್ಮದೆಂದೇ ಭ್ರಮಿಸಿ ನಾರಕದ ಸಾಮ್ರಾಜ್ಯ ಕೈದುವರು. ಸುಯೋಧನ, ನಾಡಿಗೋಸುಗ ಸೋದರರು ಹೊಯ್ದಾಡಿ ಹರಿಹಂಚಾದರೆಂಬುದನು ಆಡದಿಹುದೇ ಲೋಕ. ಬೇಡವಯ್ಯಾ ಜಗಳ ನಿಮ್ಮೊಳಗೆ. ನೀವು ಕೈಗೂಡಿ ಬದುಕುವುದೊಳಿತು. ನಾವ್ ನೆರೆ ನೋಡಿ ಸಂತಸಪಡುವೆವು. ಟಗರೆರಡ

ಖತಿಗೊಳಿಸಿ ಬಲು ಕಾಳಗವ ನೋಡಿ ಸಂತಸ ಪಡುವವರಂತೆ ನಿಮ್ಮನು ತೆಗೆತೆಗೆದು ಕಲಿಮಾಡುವರು ಖುಲ್ಲರಾದವರು. ಬೇಡ ಸುಯೋಧನ ಬೇಡ. ಕೊನೆಗೆ ನೀವಿಬ್ಬರೂ ಅಪಕೀರ್ತಿಯ ಹಾದಿಗೆ ಹೋಗುವಿರೈ.

ಸು: ಮುರವೈರಿ—ಧರ್ಮಶ್ರವಣಗೋಸುಗ ನಾವು ಬಂದಿಲ್ಲ. ನಾವಿಬ್ಬರೂ ಕದನ ವಿದ್ಯಾಕಾಮರೇ ಸೈ. ನಿಮಗೆ ನಾವು ಇತ್ತಂಡ—ಪಾಂಡವರಿಗೂ ಕೌರವರಿಗೂ ಸಹಾಯ ಮಾಡುವುದಾದರೆ ಮಾಡು—ಇಲ್ಲವಾದರೆ ಇಲ್ಲವೆನ್ನು.

ಕೃಷ್ಣ: ನಿನ್ನ ಮತವೇನು ಪಾರ್ಥಾ?

ಅರ್ಜುನ: ಎನಗೆ ಮತಬೇರೇನು ಕೃಷ್ಣಾ. ಸುಯೋಧನನ ಮತವೇ ನನ್ನ ಮತ. ನಿಮ್ಮ ಅನುನಯವೇ ನಯ. ನಮಗೆ ಸ್ವಾತಂತ್ರ್ಯವೆಲ್ಲಿಯದು?

ಕೃಷ್ಣ: ಆದರೆ ನೋಡು ಪಾರ್ಥ. ನಿಮ್ಮೊಳಗಿನ ಈ ಯುದ್ಧದಲ್ಲಿ ಯಾವುದೇ ತಂಡದ ಪರವಾಗಿ ಶಸ್ತ್ರ ಹಿಡಿದು ಕಾದುವ ಇಚ್ಛೆ ನನಗಿಲ್ಲ. ಆದರೆ ನೀವಿಬ್ಬರೂ ಯಾದವರ ಸಹಾಯವನ್ನು ಕೋರಿ ಬಂದಿರುವಿರಿ. ಆದ್ದರಿಂದ ಒಂದೆಡೆ ಬಲರಾಮಾದಿ ಯಾದವ ಸೈನ್ಯ—ಮತ್ತೊಂದೆಡೆ ಶಸ್ತ್ರಧಾರಿಯಾಗಿ ಯುದ್ಧ ಮಾಡದ ನಾನು. ಇವರಲ್ಲಿ ನೀ ಮೆಚ್ಚಿದುದ ಆರಿಸಿಕೋ.

ಅರ್ಜುನ: ಮುರಮಥನ, ಕೌರವ ಅತಿ ಸಿರಿವಂತ, ಯಾದವ ಸೈನ್ಯ ಸಾಗರವ ಕಟ್ಟಿಕೊಂಡು ಸಾಕಿ ಸಲಹಲು ಯೋಗ್ಯ. ನಾವಾದರೋ ಧರೆಯ ಸಂಪದವಿಲ್ಲದ ಅಡವಿಯ ತಿರುಕರು. ನಾವೆಂತು ಸಲಹಬಲ್ಲೆವು.—ಆ ಸೈನ್ಯ ಸಾಗರವ. ನಮಗೆ ನೀನೇ ಸಾಕು. ನಾವು ಬಡವರು, ಬಡವರಿಗೆ ನೀನೇ ಬೆಂಬಲನಾಗು. ಪಾಂಡವರ ನೀನೇ ಸಲಹು ಕೃಷ್ಣಾ. ನೀನೇ ಸಾಕು ನಮಗೆ.

ಸು: ಕೃಷ್ಣಾ, ಹೆಚ್ಚು ಮಾತೇಕೆ? ಪಾಂಡವರ ಪಕ್ಷಪಾತಿ ನೀನು. ಪಾರ್ಥನ ಕಂಡರೆ ನಿನಗೆ ಪ್ರಾಣ. ನಾವೆಂದರೆ ನಿನಗೆ ಅಪ್ರಿಯ. ಇದು

ನಿನ್ನ ಅಂತರಂಗ. ಇದೋ ಕೇಳು. ನೀನಂದಂತೆ ಈ ಧುರದಲ್ಲಿ ನೀನು ಪೊಕ್ಕು ಇರಿಯಲಾಗದು. ಉಳಿದ ನಿನ್ನಯ ಭೂಪಾಳಿಯು ನಮಗಿತ್ತು ಕೃಪೆ ಮಾಡು, ಇದನ್ನೇ ನಾನು ಬಯಸುವೆ.

ಕೃಷ್ಣಾ: ಹಾಗೇನೂ ಇಲ್ಲ ಸುಯೋಧನ, ಕೇಳು, ಇಡೀ ಯಾದವರ ಸೈನ್ಯದ ಬಲ ನಿನಗಿರುವಾಗ ಯುದ್ಧ ಮಾಡಲೊಲ್ಲದ ನನ್ನಿಂದೇನಾದೀತು.

ಸು: ಆಯಿತು—ಅತಿಲೇಸು—ನಾನಿನ್ನು ಹೊರಡುವೆನು. ನನ್ನನ್ನು ಕಳುಹಿಸಿಕೊಡು. ನಿನಗೆ ನಮ್ಮ ಕೃತಜ್ಞತೆಗಳು–(ಹೋಗುವನು)

ಕೃಷ್ಣ: ಎಲೇ ಧನಂಜಯ, ಕತ್ತಿಯನ್ನು ಬಿಸುಟು ಅದರ ಒರೆಯನ್ನು ಪಡೆದೆಯಲ್ಲಾ? ಅಯ್ಯೋ ಮಂದಮತಿಯೇ, ಅತುಲ ಯಾದವ ಬಲವನ್ನೆಲ್ಲಾ ಸುಯೋಧನನಿಗೆ ಕೊಟ್ಟು, ಕಾದಲಾರದ ನನ್ನನ್ನು ಬಯಸಿದೆಯಲ್ಲಾ? ಮರುಳೆ, ಇದನ್ನು ನಿನ್ನ ಅಣ್ಣ ತಮ್ಮಂದಿರು ಕೇಳಿದರೆ ನಿನ್ನನ್ನು ಗೇಲಿ ಮಾಡಲಾರರೇ?

ಅರ್ಜುನ: ಕೃಷ್ಣಾ, ಇದಾರಿಗೆ ಹೇಳುವಿ? ಮನವ ಕದ್ದಾಡುವಿ, ನಮ್ಮಲ್ಲಿ ನಿನ್ನ ಇಂದ್ರಜಾಲವೇ? ನಿನ್ನ ಗರಡಿಯಲ್ಲೇ ಪಳಗಿದವರಲ್ಲವೇ ನಾವು? ಧರ್ಮ, ಭೀಮನರಿಯರೇ ನಿನ್ನ ಮಹಾಮಹಿಮೆಯ? ನಕುಲ ಸಹದೇವರರಿಯರೇ ನಿನ್ನ ಪರಿಚಯವ? ನೀನು ದೇವರು, ದೇವರ ದೇವರು. ನಿನ್ನ ಹೊಗಳಿಕೆಗೆ ವೇದಗಳೇ ಸಾಲವು. ನಾವು ಭಕ್ತರು. ಭಕ್ತರ ಭೃತ್ಯರು. ನೀನು ಸಾರಥಿಯಾಗಿ ನಮ್ಮನ್ನು ಕಾಪಾಡು ಕೃಷ್ಣಾ—ನೀನೇ ಸಾಕು ನಮಗೆ— ನೀನೇ ಸಾಕು.

ಕೃಷ್ಣ: ಆಗಲಿ, ನಿಮ್ಮಿಚ್ಛೆಯಿದ್ದಂತಾಗಲಿ.

— ತೆರೆ —

ದೃಶ್ಯ—10. ರಾಜೋದ್ಯಾನ.

ದ್ರೌಪದಿ: ಏನು ಸಂಧಾನವೇ ಕೌರವರೊಡನೆ? ಎಂಥಹ ನಾಚಿಕೆ. ಎಂತಹ ಅವಮಾನ; ಎನ್ನ ಪತಿಗಳೈವರೂ ಇರಿದರೇ ಈ ಸತಿಯ? ಕಲಿತನದ

ನೀರಲ್ಲಿ ಕಲಕಿದರು. ಧರ್ಮಜನೂ ದಾರಿ ತಪ್ಪಿದನೇ? ಭೀಮನು ಷಂಡನಾದನೇ? ಪಾರ್ಥನು ಪೌರುಷ ಹೀನನಾದನೇ? ನಕುಲ ಸಹದೇವರು ಸೀರೆ ಉಟ್ಟು ಬಳೆತೊಟ್ಟರೇನು? ಅಯ್ಯೋ ಇವರೇನು ಪತಿಗಳೋ, ಯತಿಗಳೋ? ಸತಿಯ ಮಾನ ಕಾಪಾಡಲಾರದ ಕೀಟ ಗಳು; ಸಂಧಾನವಂತೆ ಸಂಧಾನ,

ಕೃಷ್ಣ: ಸಹೋದರಿ, ನಿನ್ನ ಅಭಿಮತವೇನು? ನಿನ್ನ ಪತಿಗಳು ಸಂಧಾನಕ್ಕಾಗಿ ಕಳುಹಿಸಿರುವರು ಕೌರವನೆಡೆಗೆ—ಹೋಗಿ ಬರಲೇ ತಾಯೀ,

ದ್ರೌಪದಿ: ಅಣ್ಣಾ ಕೃಷ್ಣಾ, ಸಂಧಿಯು ಮಹಾ ಹಾನಿಕರ. ಯಾಕೋ ಕಾಣೆ. ಕುಂತೀಸುತರು ಎಂದಾದರೂ ಕೌರವರೊಡನೆ ಕೂಡಿ ಸುಖದಿಂದ ರಾಜ್ಯಭಾರಮಾಡುವರೇ? ಕೂಡಿ ಬದುಕುವವ ಭೀಮಸೇನನೇ? ಧೈನ್ಯದಿಂದ ಐದೂರುಗಳ ಬೇಡುವವ ಧರ್ಮರಾಯನೇ? ಅಯ್ಯೋ ಎಂತಹ ಅವಮಾನ; ಕೃಷ್ಣಾ ಸಾಕು, ಸಾಕು ಸಂಧಿಯ ಮಾತು. ಅಣ್ಣಾ, ನೀನೇ ಬಲ್ಲೆ. ಅಂದು ನನ್ನ ಮುಂದಲೆಯ ಹಿಡಿದೆಳೆದು ತುಂಬಿದ ಸಭೆಯಲ್ಲಿ ತಂದು ಸೀರೆಯನ್ನು ಸೆಳೆದಾಗ ಮೌನದಲ್ಲಿ ಇದ್ದರಲ್ಲಾ ನನ್ನ ಪತಿಗಳು? ಉಸುರಿದರೇ? ಮಹಾ ವೀರರಂತೆ. ಸತಿಯ ಮಾನಭಂಗದ ಹೀನ ದೃಶ್ಯವನು ಕಂಡೂ ಕುರುಡ ರಾದರು. ಮೂಕರಾದರು. ಕೃಷ್ಣಾ, ಅಂದು ನೀನೇ ಎನ್ನ ಮಾನವ ಕಾಪಾಡಿದೆ. ಮತ್ತೂ ಸಂಧಿಯ ಮಾತೇ? ನೋಡು – ನೋಡು, ಮಧುಸೂದನಾ, ಒಂದು ವೇಳೆ ನನ್ನ ಪತಿಗಳು ಯುದ್ಧಕ್ಕೆ ಹಿಂಜರಿದರೆ ನನ್ನ ಮಕ್ಕಳು, ಘಟೋತ್ಕಜ, ವೀರ ಅಭಿಮನ್ಯು ನನ್ನ ತಂದೆ ದ್ರುಪದ, ಸಹೋದರ ದೃಷ್ಟದ್ಯುಮ್ನ ಮತ್ತು ಮೂರು ಅಕ್ಷೋಹಿಣೀ ಸೇನೆಗಳೇ ಸಾಕು. ಧೈರ್ಯದಿಂ ಧುರವ ಕಾದುವರು. ಆ ದುಷ್ಟ ದುಶ್ಯಾಸನನ ರಕುತವ ಕುಡಿದು, ಕುರುಕುಲ ವನು ಸುಡುವರು. ಕೌರವನ ಆ ತೊಡೆ ಮುರಿವರು. ನಿಮ್ಮ ಹಂಗೇಕೆ? ಸಂಧಾನವ ನೀವೇ ಮಾಡಿಕೊಳ್ಳುವಿರಂತೆ.

ಕೃಷ್ಣ ಸೈರಿಸು. ಸಹೋದರೀ ಸೈರಿಸು—ಉದ್ವೇಗಗೊಳ್ಳದಿರು. ಧರ್ಮಕ್ಕೆ ಶರಣುಹೋಗಿರುವರು, ನಿನ್ನ ಪತಿಗಳು—ಷಂಡರಲ್ಲ. ಚಿಂತಿಸದಿರು

ತಂಗೀ— ಸಂಧಾನವೇ ಮುರಿದು ಸಮರವೇ ತೀರ್ಮಾನವಾದರೆ, ಮಿಡುಕುಳ್ಳ ನಿನ್ನ ಗಂಡ ಭೀಮನೊಬ್ಬನೇ ಸಾಲದೇ? ಎಲ್ಲರಿಪುಗಳ ಕೆಡಹಿ ಕರುಳ ದಂಡೆಯ ಮುಡಿಸುವನು ನಿನ್ನ ತುರುಬಿಗೆ. ನೀನು ಸುರಿಸುವ ಕಂಬನಿಗಳಿಗೆ ಶತ ಸಾವಿರ ಮಡಿಯು ಕಂಬನಿಯ ಸುರಿಸುವ–ಹಗೆಯ ಹೆಂಡಿರಲಿ ವರವೀರ ಪಾರ್ಥ. ಆದರೆ ಧರ್ಮಜನ ಧರ್ಮದ ಕಡಿವಾಣ ಇವರೀರ್ವರ ಪೌರುಷವನ್ನು ತಡೆ ಹಿಡಿದಿದೆ ತಾಯೀ.

ದ್ರೌಪದಿ: ದೇವಾ, ಸ್ಥಾವರಕೆ ಜಂಗಮಕೆ ನೀನೇ ಜೀವಾಳ—ನೀನು ಸಂಧಿಗೋಸ್ಕರ ಪ್ರಯತ್ನ ಪಡದಿರು. ಎನ್ನಾಣೆ ಕೃಷ್ಣಾ, ಕರುಣೆಯಲಿ ನೋಡು (ನಮಸ್ಕರಿಸುವಳು)

ಕೃಷ್ಣ: ಏಳುತಾಯೀ, ಕಣ್ಣೀರ ಹೊನಲ ಹರಿಯಿಸದಿರು–ವಿಧಿಯಿಚ್ಛೆಯ ಮೀರುವುದೆಂತು ಸಾಧ್ಯ? — ಸುಯೋಧನನು ಸಂಧಾನಕೊಪ್ಪಿದರೆ ಬದುಕುವ — ಒಪ್ಪದಿದ್ದರೆ ಸಮರದಲಿ ಸಾಯುವ. ಧರ್ಮಕ್ಕೆ ಜಯವು ಸತ್ಯ. ಪಾಂಡವರಲ್ಲಿ ಧರ್ಮವಿದೆ. ಆದ್ದರಿಂದ ಸಂತೈಸಿಕೊ ತಪಸ್ವಿನೀ, ಹೋಗು. (ದ್ರೌಪದಿ ಹೋಗುವಳು) ಪಾಪ, ಧರ್ಮಾವಲಂಬಿಗಳಿಗೆ ಯಾವಾಗಲೂ ಕಷ್ಟವೇ ಅಧಿಕ—ಈ ದ್ರೌಪದಿಯಾದರೂ ಧರ್ಮಪರರಾದ ಪಾಂಡವರ ಕೈಹಿಡಿದು ಅದೆಷ್ಟು ಕಷ್ಟಗಳನ್ನನುಭವಿಸಿದಳು—ಅದಾರು? ಕುಂತೀ ದೇವಿಯೇ ಇತ್ತ ಬರುತ್ತಿರುವಳಲ್ಲವೇ, ಚೆನ್ನಾಯಿತು. (ಕುಂತಿಯ ಪ್ರವೇಶ) ಕುಂತೀ ತಾಯಿಗೆ ನಮಿಸುವೆ.

ಕುಂತಿ: ಶುಭವಾಗಲಿ, ಕೃಷ್ಣಾ,

ಕೃಷ್ಣ: ತಾಯೀ, ನಿನ್ನ ಸುತರು ಸತ್ಯವಂತರು. ಧರ್ಮಿಷ್ಟರೆಂದು ಲೋಕವೇ ಮೆಚ್ಚುವುದು. ಪಣವಂತೆ ಕಾಡಿನಲಿ ಹನ್ನೆರಡು ವರ್ಷ ಕಾಲ ಕಳೆದರು. ಮಹಾಮಹಿಮರು. ಸತ್ಯವಂತ ಧರ್ಮರಾಯ, ಬಲವಂತನಾದ ಭೀಮಸೇನ—ಬಿಲ್ಲಾಳು ಫಲುಗುಣ, ಚತುರ ನಕುಲ ಸಹದೇವರು—ನಿನ್ನ ಸೊಸೆ ಪಾಂಚಾಲೆ ಮಹಾವೀರ ರಮಣಿ. ಅಂತಹ ಕರ್ಮಿಷ್ಠರಿಗೆ–ಶೀಲವಂತರಿಗೆ ಅರ್ಧ ರಾಜ್ಯವ ಕೊಡಿಸಲು

ಸಂಧಿಗಾಗಿ ಹೋಗಿ ಬರುವೆ. - ಒಂದು ವೇಳೆ ಸಂಧಿ ಮುರಿದರೆ, ನೀನು ನಿನ್ನ ಹಿರಿಯ ಮಗ ಕರ್ಣನನ್ನು ಒಲಿಸಿಕೊಳ್ಳಬೇಕು. ನಾನೂ ಕರ್ಣನಿಗೆ ಅಭ್ಯುದಯದ ಹಾದಿ ತೋರುವೆ. ಕರ್ಣನ ಕ್ರೂರ ಅಸ್ತ್ರಗಳಿಂದ ನಿನ್ನ ಮಕ್ಕಳೈವರ ತಲೆಗಳನ್ನು ಕಾಯ್ದು ಕೊಳ್ಳುವ ಹದನವ ಮಾಡು–ನಾನಿನ್ನು ಹೋಗಿ ಬರಲೇ ತಾಯೀ.

ಕುಂತಿ: ಹೋಗಿ ಬಾ ಕೃಷ್ಣ—ನಿನ್ನ ಸಂಧಿಕಾರ್ಯವು ನೆರವೇರಲಿ,

ದೃಶ್ಯ—11. ಕೌರವನ ಸಭೆ

ಕೃಷ್ಣ: ಕೌರವೇಶ್ವರ ಇದೇನು? ಮೊಗದಲ್ಲಿ ಮುಗುಡವಿದೆ. ಏಕೆ, ನಿನ್ನ ಆಸ್ಥಾನಕ್ಕೆ ನಾನು ಬಂದುದು ಅಸಮ್ಮತವೇ ನಿನಗೆ? ಬಹು ಕಾಲದ ನಂತರ ಬಂದಿಹೆ ನಾನು, ನಿಮ್ಮೆಲ್ಲರ ಕಾಣಲು.

ಕೌರವ: ಕೃಷ್ಣಾ, ನಿನ್ನ ಆಗಮನದ ವಾರ್ತೆ ಕೇಳಿ, ಬಹು ಆನಂದಗೊಂಡು, ನಿನ್ನ ಸತ್ಕಾರಕ್ಕಾಗಿ ಅತ್ಯುತ್ಸಾಹದಿಂದ ನಾನಾ ವಿಧದ ಷಡ್ರ ಸೋಪೇತ ಭಕ್ಷ್ಯಾದಿಗಳ ಸಿದ್ಧಗೊಳಿಸಿ, ನಿನ್ನ ಆಗಮನವನ್ನೇ ನಿರೀಕ್ಷಿಸುತಿದ್ದರೆ, ನೀನು ಕೇವಲ ಆ ಬಡವನಾದ ವಿದುರನ ಮನೆಗೆ ಹೋಗಿ ಉಂಡು ಬಂದೆಯಲ್ಲೋ? ಇದು ಕುರುಕುಲ ಸಿಂಹಾಸನಕ್ಕೆ ಮಾಡಿದ ಘೋರ ಅವಮಾನವಲ್ಲವೇ, ಕೃಷ್ಣಾ? ಒಂದು ವೇಳೆ ನನ್ನಲ್ಲಿಗೇ ಬರಲು ನಿನಗೆ ಇಷ್ಟವಿಲ್ಲದೆ ಹೋಗಿದ್ದರೆ, ಪಿತಾ ಮಹರಾದ ಭೀಷ್ಮಾಚಾರ್ಯರಿದ್ದರು. ಗುರು ದ್ರೋಣಾಚಾರ್ಯ ರಿದ್ದರು—ಕೃಪಾಚಾರ್ಯರಿದ್ದರು. ಅವರಲ್ಲಿಗಾದರೂ ಹೋಗ ಬಹುದಿತ್ತಲ್ಲವೇ?

ಕೃಷ್ಣ: ವಿನಯ್ಯಾ ಕೌರವ? ಪಾಂಡವರು ನಿನ್ನ ಹಗೆಗಳಲ್ಲವೇನಯ್ಯಾ? ಅವರ ಪಕ್ಷಪಾತಿಯಾದ ನಾನು ನಿನ್ನಲ್ಲಿ ಹೇಗೆ ಉಣಲಯ್ಯಾ? ರಾಜ ನೀತಿಯೇ ಇದು, ಸುಯೋಧನಾ?

ಕೌರವ: ಅಂದರೆ?

ಕೃಷ್ಣ: ನಾನೂ ನಿನ್ನಲ್ಲಿ ಉಣಬಲ್ಲೆ-ನಿನ್ನ ಆದರದ ಆತಿಥ್ಯ ಸ್ವೀಕರಿಸಬಲ್ಲೆ.

ಯೂವಾಗ? ಪಾಂಡವರ ಶತ್ರುವಾಗಿರುವ ನೀನು ಅವರ ಮಿತ್ರ ನಾಗಬೇಕು—ಹಿತೈಷಿಯಾಗಬೇಕು.

ಕೌರವ: ಒಗಟಾಗಿ ನುಡಿಯದಿರು. ಮನವ ಬಿಚ್ಚಿ ಮಾತಾಡು ಕೃಷ್ಣಾ.

ಕೃಷ್ಣ: ಒಗಟಂತೆ ಕಂಡರೆ ಸರಳವಾಗಿ ಹೇಳುವೆ—ಕೇಳು. ಪಾಂಡವರಲ್ಲಿ ಪಣವಾದಂತೆ ಅವಧಿ ಮುಗಿದುದು. ಅವರಿಗೆ ಅರ್ಧರಾಜ್ಯವನ್ನು ಕೊಡುವುದು ನಿನ್ನ ಧರ್ಮ. ಅದು ಇಷ್ಟವಿಲ್ಲವಾದರೆ ಐದೂರು ಗಳನ್ನಾದರೂ ಕೊಡು. ನಿನ್ನ ಕುಲಕ್ಕೆ ಕೀರ್ತಿ. ಚೆನ್ನಾಗಿ ಯೋಚಿಸಿ ನೀನು ನಿನ್ನ ಸೋದರರ ಸಲಹು. ನಾನಿಂದು ಸಂಧಿಗೋಸುಗ ಬಂದಿಹೆನು. ಯುದ್ಧವ ನಿಲ್ಲಿಸಲು ಇದೆನ್ನ ಕೊನೆಯ ಪ್ರಯತ್ನ.

ಕೌರವ: ಓಹೋ......ಸಂಧಿಗಾಗಿ ಆಗಮನವೇ? ಹ...ಹ......ಹ...... ಎಲೈ ಕರ್ಣ, ಶಕುನಿಮಾವ, ಕೇಳಿದಿರಲ್ಲವೇ ನೀವು? ಸಂಧಿ ಯಂತೆ; ನಮ್ಮ ಕೃಷ್ಣ ಸಂಧಿಯಸಾಧಿಸಲು ಬಂದಿಹನಂತೆ. ಸಂಧಿ! ಅಲ್ಲವೇ? ಸಂಧಿ......ಏಕಾಗದು?......ಏಕಾಗದು? ಅಲ್ಲವೇ ಪಿತಾಮಹ?

ಭೀಷ್ಮ: ಕೌರವ, ನೀವು ಸಹೋದರರು ಕೂಡಿ ಬಾಳುವುದೆಂದರೆ, ಈ ಮುದಿ ಭೀಷ್ಮನಿಗೆ ಅದಕ್ಕಿಂತ ಮೇಲಾದ ಸಂತೋಷವೇನಿದೆ? ಕೌರವರೂ ಪಾಂಡವರೂ ನನ್ನ ತೊಡೆಗಳಲ್ಲಿ ಕುಣಿದು ಬೆಳೆದವ ರಲ್ಲವೇ? ಅಂತಹರು ಇಂದು ಪರಸ್ಪರ ಕಾದಾಡಿಕೊಂಡರೆ ವಿನಾಶ ವಲ್ಲದೆ ಮತ್ತೇನು? ಶ್ರೀ ಕೃಷ್ಣನ ಹಿತವಚನಗಳನ್ನು ಸ್ವೀಕರಿಸು. ತ್ಯಾಗಶೀಲನಾಗು. ಸಂಧಿಮಾಡಿಕೊಂಡು ಪಾಂಡವರೊಡನೆ ಕೂಡಿ ಬಾಳಿದಿಯೆಂದರೆ ನಿನ್ನ ಕೀರ್ತಿಯು ಅಜರಾಮರವಾಗುವುದು— ನಾನಂತೂ ಆ ಆನಂದದಿಂದಲೇ ಮತ್ತೂ ಹಲವು ಕಾಲ ಬದುಕಬಲ್ಲೆ.

ಕೌರವ: ಗುರು ದ್ರೋಣಾಚಾರ್ಯರು ಏನೋ ಆಲೋಚನಾಮಗ್ನ ರಾಗಿರುವರಲ್ಲಾ.

ದ್ರೋಣ: ಭೀಷ್ಮ ಪಿತಾಮಹರಿಗೆ ನೀವೂ ಪಾಂಡವರೂ ಮೊಮ್ಮಕ್ಕಳಾದರೆ ನನಗೆ ನೀವು ಇತ್ತಂಡದವರೂ ಮಕ್ಕಳೋಪಾದಿ ಮಮತೆಯು

ಶಿಷ್ಯರು, ಹಾಲುಣಿಸಿದ ಕೈಗಳಿಂದ, ವಿಷ ಬಡಿಸುವಂತಹ ಸಂಧಿಗ್ಧ ಪರಿಸ್ಥಿತಿ ನನ್ನಬಾಳಿನಲ್ಲಿ ಬರದಂತೆ ಮಾಡು. ನಾವೆಲ್ಲ ಹಿರಿಯರು ನಿನ್ನ ಅಭ್ಯುಧಯವನ್ನೇ ಬಯಸುವವರು, ನಿಮ್ಮ ಸುಖವೇ ನಮ್ಮ ಸುಖವೆಂದು ಭಾವಿಸಿಕೊಂಡವರು—ಇಂತಿರಲು ಸಂಧಿಗೆ ಸಂತೋಷದಿಂದಲೇ ಒಪ್ಪು—ನಾವೂ ಸಂತೋಷಪಡುವೆವು.

ಕೌರವ: ಕೃಪಾಚಾರ್ಯರೇ......

ಕೃಪ: ಪಿತಾಮಹರಾದ ಭೀಷ್ಮಾಚಾರ್ಯರು? ಗುರು ದ್ರೋಣಾಚಾರ್ಯರು, ಶಾಸ್ತ್ರ ಸಮ್ಮತವಾದ ಅಭಿಪ್ರಾಯವನ್ನೇ ವ್ಯಕ್ತಪಡಿಸಿದ್ದಾರೆ. ಅಂತಿರಲು ಆಚಾರ್ಯನಾದ ನಾನಾದರೂ ನಿನಗೆ ಅಧರ್ಮವನ್ನು ಬೋಧಿಸಿ, ಸಂಧಿಗೆ ಒಪ್ಪಬೇಡ ಅನ್ನುವುದು ಎಂತಹ ಹೀನ ಕಾರ್ಯ? ಸುಯೋಧನಾ, ವಯೋವೃದ್ಧರಾದ ನಮ್ಮಲ್ಲಿ ನೀನು ಸಂಧಿಯ ಪ್ರಸ್ತಾಪದಲ್ಲಿ ಅಭಿಪ್ರಾಯಗಳನ್ನು ಕೇಳುವಂತಹ ದೊಡ್ಡ ಮನಸ್ಸು ಮಾಡಿದ ಬಗ್ಗೆ ನಮಗೆಲ್ಲರಿಗೂ ಸಂತೋಷವೇ ಸರಿ. ಆದರೆ ನೀನು ನಮ್ಮ ಅಭಿಪ್ರಾಯದಂತೆ ಸಂಧಿಯ ಕೊಡುಗೆಯನ್ನು ಸ್ವೀಕರಿಸಿದಿಯೆಂದರೆ ಆದಕ್ಕಿಂತ ಅಧಿಕವಾದ ಆನಂದ ನಮಗೆ ಬೇರಿಲ್ಲ. ದೇವರು ನಿನಗೆ ಒಳ್ಳೆಯದನ್ನೆ ಮಾಡಲಿ.

ಕೌರವ: ಮಿತ್ರನಾದ ಕರ್ಣ—?

ಕರ್ಣ: ಪ್ರಭುವಿನ ಚಿತ್ತವೇ ನನ್ನ ಚಿತ್ತ.

ಕೌರವ: ಪ್ರಭು! ನಾನು ನಿನ್ನನ್ನು ಮಿತ್ರನೆಂದರೆ, ನೀನು ನನ್ನನ್ನು ಪ್ರಭು ಅನ್ನುವುದೇ? ಅನುಚಿತವಲ್ಲವೇ ಕರ್ಣಾ ಇದು—ಹಾಗಾದರೆ ನಾನು ನಿನ್ನ ಮಿತ್ರನಲ್ಲವೇ?

ಕರ್ಣ: ಮಿತ್ರನೂ ಆಹುದು. ಪ್ರಭುವೂ ಆಹುದು. ಆದರೆ ಸಮಯಾ ಸಮಯುಗಳಲ್ಲಿ ಮಾತ್ರ.

ಕೌರವ: ಕರ್ಣ-ಕೌರವರಲ್ಲಿ ಸಮಯಾಸಮಯಗಳೆಲ್ಲಿ? ಈ ರಾಜಸಭೆಗೀ ತಿಳಿದಿಲ್ಲವೇ? ಏಕೆ, ಜಗತ್ತೇ ತಿಳಿದಿಲ್ಲವೇ? ಕರ್ಣ ಕೌರವರ ದೇಹ ಬೇರೆಯಾದರೂ, ಮತವೊಂದೇ—ಮನವೊಂದೇ ಎಂದು.

ಕರ್ಣ: ಸಖಿನ ಸೌಜನ್ಯತೆ ಅದು.

ಕೌರವ: ಶಕುನಿ ಮಾವ ಏಕೆ ಸುಮ್ಮಗಿರುವರು? ಕೌರವನು ನಿಮ್ಮಲ್ಲೂ ವಿಚಾರಿಸಷ್ಟು ಕಠಿಸನೇ?

ಶಕುನಿ: ಭೀಷ್ಮ ಪಿತಾಮಹರು, ಗುರು ದ್ರೋಣಾಚಾರ್ಯರು, ಆಚಾರ್ಯ ರಾದ ಕೃಪರು ಅಂದಂತೆ ನೀನು ಸಂಧಿಯನ್ನು ಮಾಡಿಕೊಳ್ಳುವುದೇ ಉತ್ತಮ. ಇಲ್ಲವಾದರೆ ಹಿರಿಯರಾದ ಅವರ ಮಾತು ಮೀರಿದ ಅಪವಾದಕ್ಕೆ ಗುರಿಯಾಗುವೆ. ವಯೋವೃದ್ಧರವರು—ಗುರು ಗಳವರು—ಜ್ಞಾನವೃದ್ಧರು—ಅಂತಿರಲು ಅವರ ಮತವನ್ನೆಂತು ಮೀರುವೆ. ಸಂಧಿಯನ್ನೆ ಮಾಡಿಕೋ. ಆದರೆ, ನನಗೆ ಮಾತ್ರ ಈ ನಿನ್ನ ರಾಜ್ಯ ಬಿಟ್ಟು ಹೋಗುವುದಕ್ಕೆ ದಯವಿಟ್ಟು ಅನುಮತಿ ಕೊಡು—ಸಂಧಿಯ ನಂತರದ ನಿನ್ನ ಸೌಭಾಗ್ಯವನ್ನು ನೋಡುವ ಅವಕಾಶ ನನಗೆ ಕೊಡದಿರು. ಇಷ್ಟೆ ನನ್ನ ಕೋರಿಕೆ—ನಿನಗೆ ದೇವರು ಒಳ್ಳೆಯದನ್ನುಂಟುಮಾಡಲಿ.

ಕೌರವ: (ನಸುನಗುತ್ತಾ......ಒಮ್ಮೆಲೇ ಸಿಟ್ಟು) ಸಂಧಿ;...ಸಂಧಿ?...... ಸಂಧಿ ಸಾಧ್ಯವಿಲ್ಲ. ಎಲ್ಲರೂ ಕಿವಿಗೊಟ್ಟು ಕೇಳಿರಿ. ಸುಯೋಧನ ನಿಂದು ಶ್ರೀ ಕೃಷ್ಣನಿಂದ ಮಂಡಿಸಲ್ಪಟ್ಟ ಸಂಧಿಯನ್ನು ಮುರಿದಿ ದ್ದಾನೆ. ಇಂದು ಸಂಧಿ ಮಾಡಿಕೊಳ್ಳಲು ಅಂದು ನಾನು ಪಾಂಡ ವರನ್ನು ವನವಾಸಕ್ಕಟ್ಟಲಿಲ್ಲ. ಸಂಧಿಗೋಸ್ಕರ ದ್ಯೂತವಾಡಲಿಲ್ಲ. ಇಡೀ ಬ್ರಹ್ಮಾಂಡವೇ ನನ್ನ ಮೇಲೆ ಉರಿದು ಬಿದ್ದರೂ, ಸಂಧಿಯು ಸಾಧ್ಯವಿಲ್ಲ. ಈ ಸಭೆಯಲ್ಲಿ ಯಾರು ಬೇಕಾದರೂ ಪಾಂಡವ ರೊಡನೆ ಸಂಧಿ ಮಾಡಿಕೊಳ್ಳಲಿ. ಆದರೆ ಈ ಸಿಂಹಾಸನವೆಂದೂ ಸಂಧಿಗೊಪ್ಪದು. ಕುರುಕುಲ ಸಿಂಹಾಸನವನ್ನು ಇರುವಷ್ಟು ಕಾಲ ರಕ್ಷಿಸುವೆನೆಂದು ವಚನಬದ್ಧರಾದ ಪಿತಾಮಹರು ಪಾಂಡವರೊಡನೆ ಸಂಧಿಯನ್ನು ಮಾಡಿಕೊಂಡು ವಚನಭ್ರಷ್ಟರಾಗಲಿ. ಗುರು ದ್ರೋಣಾಚಾರ್ಯರು ಪಾಂಡವರ ಪಕ್ಷಕ್ಕೆ ಸೇರಿಕೊಂಡು, ಹಸ್ತಿನಾ ವತಿಯ ರಾಜದಂಡಕ್ಕೆ ದ್ರೋಹವೆಸಗಲಿ—ಕೃಪಾಚಾರ್ಯರೂ

ಅವರನ್ನೇ ಹಿಂಬಾಲಿಸಲಿ. ಆದರೆ ನನಗೆ ಒಬ್ಬನೇ ಒಬ್ಬ ಕರ್ಣ ನಿದ್ದರೆ ಸಾಕು. ನನ್ನ ಸಹೋದರರೇ ಸಾಕು. ಧುರವ ಕಾದುವೆ. ಜಯವಧುವ ವರಿಸುವೆ. ವರಿಸಲಿಲ್ಲಾ—ನನ್ನ ಒಡಹುಟ್ಟಿದ ಸಹೋದರರ ಕೂಡೆ, ನನ್ನ ಜೀವದ ಗೆಳೆಯ ಕರ್ಣನ ಕೂಡೆ ರಣದಲ್ಲಿ ಮಡಿವೆ. (ಎದ್ದು ನಿಂತು) ಯಾರಿಹರು? ಯಾರಿಹರು...? ನನ್ನೀ ಛಲವ ಮುರಿವವರು?

ಕೃಷ್ಣ: ಇಲ್ಲ—ಯಾರೂ ಇಲ್ಲ—ಕೌರವೇಶ್ವರನ ಈ ಛಲವ ಮುರಿ ವವರು ಈ ಸಭೆಯಲ್ಲಿ ಯಾರೂ ಇಲ್ಲ.

ಕೌರವ: ಈ ಸಭೆಯಲ್ಲೇಕೆ? ಮೂರು ಲೋಕಗಳಲ್ಲೂ ಇರಲೊಲ್ಲರು. ಏಕೆ, ಕೃಷ್ಣಾ ನಂಜಿನ ನುಡಿಗಳಿಂದ, ಕೌರವನ ಕೆಚ್ಚನ್ನು ಮತ್ತೂ ಕೆರಳಿಸುವೆ. ನಾನು ನಿನ್ನನ್ನರಿಯೆನೇ? ಹಿಂದೆ ಬಲಿಚಕ್ರವರ್ತಿ ಕೇವಲ ಮೂರಡಿ ನೆಲವ ಕೊಟ್ಟು ಪಾತಾಳಕ್ಕೆ ಬಿದ್ದ. ಇಂದು ನೀನು ಐದೂರುಗಳ ಕೇಳಿ ನನ್ನನ್ನಾವ ಮಸಣಕ್ಕೆ ಎಸೆಯಬಲ್ಲೆ ಯೆಂಬುವ ನಾನೂ ಬಲ್ಲೆ. ಸಂಧಿಯಾಗದು ಕೃಷ್ಣಾ, ಸಂಧಿಯಾಗದು, ಐದೂರುಗಳ ಬಿಡು. ಒಂದಂಗುಲ ಕೂಡಾ ಕೊಡೆ. ದನಕಾವ ಗೊಲ್ಲರಿಗೆ ಈ ಸಂಧಿಕಾರ್ಯ ಅನುಚಿತ. ಸಾಕು ನಿನ್ನ ಹಿರಿತನ. ಮಣಿದು ಬದುಕುವವನಲ್ಲ. ಹಗೆಯುಲಿ ಸೆಣಸಿ ಬಿಡುವವನಲ್ಲ. ಧಾರಿಣಿಯ ಸಿರಿಗೆ ಸೋಲುವವನಲ್ಲ. ಅಳುಕಿಲ್ಲ ಕಾಯದಲಿ. ರಣ ಮಹೋತ್ಸವ ಎನ್ನ ಮತ. ಕೈದಣಿಯೆ ಹೊಯ್ದಾಡುವೆನು. ಮನದಣಿಯೆ ಮುಯ್ಯ ತೀರಿಸುವೆ. ಕೃಷ್ಣಾ, ನಿನ್ನ ಕೆಣಕದಲ್ಲದೆ ಎನಗೆ ಕೈವಲ್ಯವಿಲ್ಲ. ನಿನ್ನ ಕೈಯಲ್ಲಿ ಸತ್ತರೂ ಎನಗೆ ಸ್ವರ್ಗ. ಸಂಧಿಯ ಮಾತು ಮರೆ. ಬರಲಿ ಪಾಂಡವರು ಯುದ್ಧಕ್ಕೆ. ಇದು ನನ್ನ ಛಲ.

ಕೃಷ್ಣ: ಶಹಭಾಷ್, ಕೌರವ, ಮೆಚ್ಚಿದೆ ನಿನ್ನ ಛಲಕ್ಕೆ—ನಿನ್ನ ವೀರ್ಯ ಬಲಕೆ. ಸಂಧಿಯ ಕೊಡುಗೆಗೆ ನೀ ಕೈ ನೀಡಿದರೆ ನಿನಗೇ ಒಳಿತು. ಅದರಿಂದ ನಿನಗೆ ಸನ್ಮಂಗಲವೆಂದು ನುಡಿದೆ. ಆದರೆ ಸಂಧಿಯು ಬವಲಿಗೆ

ಸಂಗ್ರಾಮವನ್ನೇ ಇಚ್ಛಿಸುವಿಯಾದರೆ, ಅದರ ಘೋರ ಪರಿಣಾಮ ಗಳನ್ನು ನೀನು ಎದುರಿಸಬೇಕಾಗುವುದು. ನಾನಂತೂ ಕೇವಲ ಒಬ್ಬ ದೂತನಾಗಿ ಬಂದಿರುವೆನು ಪಾಂಡವರ ಕಡೆಯಿಂದ. ಸಮರವು ಸರ್ವನಾಶಕ್ಕೆ ಹೇತು. ಕೊನೆಗೆ ಪಶ್ಚಾತ್ತಾಪಕ್ಕೆ ಈಡಾಗುವಿ. ಸರಿ ನನ್ನ ಕೆಲಸ ಮುಗಿಯಿತು. ನಾನಿನ್ನು ಬರಲೇ? ನಿಮಗೆಲ್ಲರಿಗೂ ನನ್ನ ವಂದನೆಗಳು. (ಇಳಿಯುವನು)

— ತೆರೆ —

ದೃಶ್ಯ—12. ಉದ್ಯಾನ ಮಾರ್ಗ.

ಕೃಷ್ಣ: ಕರ್ಣಾ. ಸಂಧಿಯು ಮಾತು ಮುರಿಯಿತು. ಸಂಗ್ರಾಮವೇ ಸ್ಥಿರ ವಾಯಿತು. ಆದರೆ ಕರ್ಣಾ, ಖಂಡಿತವಾದ ಈ ಕದನದಲ್ಲಿ ಕಾದಾಡ ಲಿರುವ ನಾನು, ನೀನು, ಕೌರವರು, ಪಾಂಡವರು ಎಲ್ಲರೂ ಬಾಂಧವರು ಕಾಣಯ್ಯ—ಎಲ್ಲವರೂ ಪರಸ್ಪರ ರಕ್ತ ಸಂಬಂಧಿಕರು.

ಕರ್ಣ: ಭಗವಾನ್, ನೀವೆಲ್ಲರೂ ಬಾಂಧವರು ಸರಿಯೆ. ಆದರೆ ನಿಮ್ಮೊಡನೆ ಬಂಧುತನದ ಭಾಗ್ಯ ನನಗೆಲ್ಲಿಯದು ದೇವಾ?

ಕೃಷ್ಣ: ಭೇದವಿಲ್ಲೆಲೆ ಕರ್ಣಾ, ಬಂಧುತ್ವವ ನೀನು ತಿಳಿದಿಲ್ಲವಾದುದರಿಂದಲೇ ಮಹದೊಂದು ಅನಾಹುತವಾಯಿತು. ಆದುದರಿಂದಲೇ ಕೌರವ ಪಾಂಡವರೊಳಗೆ ಕದನವೇ ಖಂಡಿತವಾಯಿತು. ಆದರೆ ಇನ್ನಾದರೂ ಈ ಸಮರವನ್ನು ನಿಲ್ಲಿಸಬಹುದು. ಯಾವಾಗ ಅಂದರೆ, ನೀನಾರೆಂದು ನೀನು ತಿಳಿದಾಗ ಮಾತ್ರ.

ಕರ್ಣ: ಕೃಷ್ಣಾ, ನೀನು ಏನು ಹೇಳುವಿಯೋ, ಹೇಳಲಿಚ್ಛಿಸುವೆಯೋ ನನಗರಿಯದು. ಆದರೆ ನಾನು ವಂಶವಿಹೀನ. ಸೂತಪುತ್ರ. ಇಷ್ಟು ಮಾತ್ರ ನಾನು ಬಲ್ಲೆ.

ಕೃಷ್ಣ: ಮಾನನಿಧಿಯೇ-ಅಲ್ಲ, ನೀನು ಸೂತಪುತ್ರನಲ್ಲ. ವಂಶವಿಹೀನನಲ್ಲ. ನೀನು ಭಾನು ವಂಶಲಲಾಮ. ನಿನ್ನ ಕುಲ ನೀನರಿಯದೆ ಹೋದೆ ಯಲ್ಲಾ. ಏನಚ್ಚರಿ. ಮೇದಿನೀಪತಿ ನೀನು. ಸುಯೋಧನನಲಿ

ವೃಥಾ ಸೇವಕತನ ಉಚಿತವೇ ಕರ್ಣಾ ನಿನಗೆ? ನೀನೇ ಕುಂತೀ ದೇವಿಗೆ ಹಿರಿಯ ಸುತ. ಸೂರ್ಯಮಂತ್ರದಿ ಜನ್ಮವೆತ್ತವನು —ಕುಂತೀ ತಾನಿನ್ನೂ ಕನ್ಯೆಯಿರಲು ಮರುಳಾಟದಿ ದುರ್ವಾಸ ಮುನಿಯಿತ್ತ ಮಹಾ ಮಂತ್ರವ ಜಪಿಸಿದಳು. ಪ್ರಯುಕ್ತ ನೀ ಜನಿಸಲು, ಮದುವೆಯ ಮೊದಲೇ ತಾನು ತಾಯಿಯಾದೆನಲ್ಲಾ ಎಂದು ನಿನ್ನನ್ನು ಗಂಗಾಮಾತೆಗೆ ಅರ್ಪಿಸಿದಳು, ಕೇವಲ ಲೋಕಾಪವಾದದ ಭಯದಿಂದ. ಕರ್ಣಾ, ಪಾಂಡವರಲ್ಲಿ ನೀನೇ ಮೊತ್ತ ಮೊದಲಿಗನಯ್ಯಾ, ನೀನು ಬೇರೆ — ಅವರು ಬೇರೆ ಎಂದೆಣಿಸದಿರು. ಒಂದೇ ತಾಯಿಯ ಮಕ್ಕಳು. ಒಂದೇ ಕರುಳಿನ ತುಂಡುಗಳು ನೀವು. ನಿನ್ನ ಅಭ್ಯುದಯವನ್ನು ಬಯಸುವೆನು ಕೇಳು. ನಿನ್ನ ಕಾಲಿಗೆ ಅವರೈವರನ್ನು ತಂದು ಪೊಡಮಡಿಸುವೆ. ಬಾ ನನ್ನ ಸಂಗಾತ ಕರ್ಣಾ. ನಿನಗೆ ಹಸ್ತಿನಾಪತಿಯ ಪಟ್ಟ ಕಟ್ಟಿಸುವೆ. ಕೌರವರೂ ಪಾಂಡವರೂ ಸೇರಿ ನಿನಗೆ ನಮಿಸುವರು. ಎರಡು ಸಂತತಿಯೂ ನಿನಗೆ ಕಿಂಕರರು. ಅದನೊಲ್ಲದೆ ನೀನು ಸುಯೋಧನನ ಬಾಯಿಯ ತುಂಬುಲಕೆ ಕೈನೀಡುವೆಯಲ್ಲಾ? ಯೋಚಿಸು. ಎಡದ ಕಡೆಯಲ್ಲಿ ಕೌರವೇಂದ್ರನ ಸಮೂಹ - ಬಲದ ಭಾಗದಲ್ಲಿ ಪಾಂಡುಪುತ್ರರ ಸಮೂಹ. ಇದಿರಲ್ಲಿ ಮಾದ್ರಮಾಗಧ ಯಾದವಾದಿಗಳು. ನಡುವೆ ನೀನೋಲಗದೊಳೊಪ್ಪುವೆ. ಆ ಕಡು ವಿಲಾಸವ ಬಿಸುಟು, ಕುರುಪತಿ ಆಜ್ಞಾಪಿಸೆ 'ಜೀಯಾ–ಹಸಾದ' ವೆಂಬುದು ಅಸಹ್ಯವಲ್ಲವೇ ಕರ್ಣಾ. ಶೌರ್ಯದಲ್ಲಿ ನಿನಗೆ ಸಮನಾರು? ಕುಲದಲ್ಲಿ ರವಿಪುತ್ರ. ಗುರುವೇ ಭಾರ್ಗವ ರಾಮ. ಜೊತೆಯಲ್ಲಿ ಜನಿಸಿಹರು ವೀರ ಪಾಂಡವರು. ಎಂತಹ ವೈಭವ; ನಿನಗೆಣೆ ಯಾರಿಹರು ಕರ್ಣಾ......ನಡೆ ನಡೆ, ಧಾರಿಣಿ ಪತಿಯಾಗಿ ಬಾಳು.

ಕರ್ಣ: (ಕುಸಿದು) ಕೃಷ್ಣಾ......ಕೃಷ್ಣಾ......ಎಂತಹ ಧರ್ಮಸಂಕಟದಲ್ಲಿ ನನ್ನನ್ನು ಸಿಲುಕಿಸಿ ಬಂಧಿಸಿದಿಯೋ? ಎನ್ನ ಜನ್ಮದ ಮೂಲ ಎನಗೀವೇಳೆ ತಿಳುಹಿ ನನ್ನನ್ನು ಕೊಂದೆಯಾ ಕೃಷ್ಣಾ—ಅಯ್ಯೋ! ಕುರುಪತಿಗೆ ಕೇಡಾಯಿತು. ಪಾಂಡವರು......ಪಾಂಡವರು.......

ನನ್ನ ಸಹೋದರರೇ? ಸತ್ಯ–ಧರ್ಮ–ನ್ಯಾಯ ನೀತಿಗಳ ಮಂಗಲ ಮೂರ್ತಿ ಧರ್ಮಜನು ನನ್ನ ಅನುಜನೇ? ಸಹಸ್ರ ಗಜಬಲವನ್ನು ತನ್ನ ಭುಜದ್ವಯಗಳಲ್ಲಿ ಹೊತ್ತ ಭೀಮಸೇನನೆನ್ನ ನಿಜ ಸಹೋದರನೇ? ಹಾ–ಪಾರ್ಥ, ಮೂರು ಲೋಕಗಳ ಗಂಡನೆಂದು ಪ್ರಖ್ಯಾತನಾದ ನೀನು ನನ್ನ ಒಡಹುಟ್ಟಿದ ತಮ್ಮನೇ? ಅಮ್ಮಾ ಕುಂತೀ ತಾಯೀ, ಇಂತಹ ಸುಪುತ್ರರನ್ನು ಪೆತ್ತ ಆ ನಿನ್ನ ಪಾವನ ಗರ್ಭದಲ್ಲಿ ನನಗೂ ಉಸಿರಿತ್ತೆಯಾ ತಾಯೀ? ಈ ನಿರ್ಭಾಗ್ಯ ಕರ್ಣನ ಕಣ್ಣೀರಿಗೆ ಪೆತ್ತ ತಾಯಿಯ ಕಾಲುಗಳನ್ನು ತೊಳೆವ ಭಾಗ್ಯ ಒಮ್ಮೆಯಾದರೂ ಕೊಡಲಿಲ್ಲವೇಕಮ್ಮಾ? ಅಯ್ಯೋ ದುರ್ವಿಧಿಯೇ, ಎಂತಹ ಧರ್ಮಸಂಕಟದಲ್ಲಿ ಸಿಲುಕಿದೆನು? ಕಾದಿಕೊಲುವೊಡೆ ಪಾಂಡು ಸುತರು ಎನ್ನ ಸಹೋದರರು, ಕೊಲಲಿಲ್ಲಾ–ಕೊಲ್ಲದೆ ಉಳಿದೆ ನಾದೊಡೆ ಸ್ವಾಮಿ ದ್ರೋಹ; ಕೌರವೇಶ್ವರಗೆ ಕೇಡು. ಅಯ್ಯೋ ಭೇದದಿ ಹೊಕ್ಕಿರಿದನಲ್ಲಾ ಮಧುಸೂದನಾ. ಹಾ, ಕೃಷ್ಣಾ ಸಜೀವವಾಗಿ ನನ್ನನ್ನು ಸುಟ್ಟು ಹಾಕಿದೆಯಲ್ಲಾ.

ಕೃಷ್ಣ: ಏನ ಹೇಳುವೆ ಕರ್ಣಾ, ಚಿತ್ತಗ್ಲಾನಿಯೇಕಯ್ಯಾ? ಒಡಹುಟ್ಟಿದವ ರೊಡನಿರುವುದು ಸೇರದೇ ನಿನಗೆ. ಹಾನಿಯಿಲ್ಲ—ಚಿಂತಿಸದಿರು. ನಿನ್ನುಪದೆಸೆಯ ಬಯಸುವವನಲ್ಲ ನಾನು. ಕರ್ಣಾ, ಪಾಂಡವರಿಗೆ ನೀನೊಲಿದರೆ ಅವರುಳಿಯುವರು. ನೀ ಮುನಿದರೆ ಅವರಳಿಯು ವರು. ಹಿರಿಯಣ್ಣನಾಗಿ ಪೊರೆಯಬೇಕಾಗಿದ್ದ ಪಾಂಡವರನ್ನು ಇರಿಯುವೆಯಾ, ಅಂಗಾಧಿಪ?

ಕರ್ಣ: ಹರಿ, ಹರಿ; ಕರ್ಣನ ಕರುಳನ್ನು ಈಪರಿಯಿಂತೇಕೆ ಇರಿಯುವೆ? ಮರಳು ಮಾಧವಾ, ಮರಳು. ಈ ಕರ್ಣ, ಸಕಲ ರಾಜ್ಯದ ಸಿರಿಗೆ ಸೋಲುವವನಲ್ಲ. ಸಹೋದರರಾದ ಪಾಂಡವರ ಸೇವೆಯ ಸ್ವೀಕರಿಸಲಾರೆ. ಪೊರೆದ ಧಾತಾರಂಗೆ ಹಗೆಗಳ ಶಿರವ ತಂದೊಪ್ಪಿ ಸುವೆನೆಂಬೀ ಭರದೊಳಿದ್ದೆನು. ವೀರ ಪಾರ್ಥನ ಕೊರಳ ಕತ್ತರಿ ಸುವೆನೆಂಬ ಪ್ರತಿಜ್ಞೆಯ ತೊಟ್ಟಿರುವೆನು. ನನ್ನನ್ನು ವಚನ

ಭ್ರಷ್ಟನನ್ನಾಗಿ ಮಾಡುವೆಯಾ ಕೃಷ್ಣಾ? ಪಾಂಡವರ ಪಕ್ಷ ಸೇರಿ, ನಾನು ಸ್ವಾಮಿ ದ್ರೋಹಿ–ಮಿತ್ರ ದ್ರೋಹಿಯಾಗಲೇ?

ಕೃಷ್ಣ: ಕರ್ಣಾ, ನೀನು ವಚನ ಭ್ರಷ್ಟನಾಗಬೇಕೆಂದು ನನ್ನ ಇಚ್ಛೆಯಲ್ಲ. ಅಥವಾ ದ್ರೋಹಿಯಾಗಬೇಕೆಂಬ ದುರುದ್ದೇಶವೂ ಇಲ್ಲ. ಆದರೆ ಸಹೋದರರೊಳಗೆ ಸಂಭವಿಸಲಿರುವ ಮಹಾ ಸಮರವನ್ನು ನಿಲ್ಲಿಸುವ ಸಮರ್ಥ ವ್ಯಕ್ತಿಯೆಂದರೆ ಇಂದು ನೀನೊಬ್ಬನೇ ಎಂದು ಭಾವಿಸಿದ್ದೇನೆ. ನಿನ್ನಿಂದ ಸಾಧ್ಯ, ಕರ್ಣಾ–ನಿನ್ನಿಂದ ಮಾತ್ರ ಸಾಧ್ಯ.

ಕರ್ಣ: ಹೇಗೆ ಸಾಧ್ಯ ಕೃಷ್ಣಾ? ನನ್ನ ಹೆತ್ತ ತಾಯಿಯಾದ ಕುಂತಿದೇವಿಯೇ ನನ್ನನ್ನು ತನ್ನ ಪುತ್ರನೆಂದು ಜಗದೆದುರು ಸಾರಲಾರದವಳಾದರೆ, ನಾನಾದರೂ ಕುಂತೀಪುತ್ರನೆಂದು ಯಾರಲ್ಲಿ ಹೇಗೆ ಹೇಳಿಕೊಳ್ಳಲಿ ಕೃಷ್ಣಾ. ಹೇಳಿದರೂ, ತಿಳಿದಾಗ ಆ ತಾಯಿ ಕುಂತೀ ಮಾತೆ, ತನ್ನ ಗುಟ್ಟು ಬಯಲಾಯಿತಲ್ಲಾ ಎಂದು ಅದೆಷ್ಟು ನೊಂದುಕೊಳ್ಳಲಿಕ್ಕಿಲ್ಲ; ತಾಯಿಯ ಕರುಳನ್ನು ಎಂತು ನೋಯಿಸಲಿ ಕೃಷ್ಣಾ? ಇಲ್ಲ, ನಾನು ಇನ್ನು ಕ್ಷತ್ರಿಯನಾಗುವುದು ಬೇಡ. ಸೂತಜ ನಾಗಿಯೇ ಸಾಯುವೆ. ಸುಯೋಧನನ ಸಖನಾಗಿಯೇ ಉಳಿವೆ. ಹಲವು ಮಾತೇನು? ಅವನ ಒಲವು ತಪ್ಪಿದ ಬಳಿಕ ಎನಗೀ ಜಗದೊಳಗೆ ಬೇರೆ ಆಪ್ತರಿಲ್ಲ–ಕೃಷ್ಣಾ. ಪಾಂಡವರ ನೀನೇ ಸಲಹು. ಎಲ್ಲಿ ಧರ್ಮವೋ ಅಲ್ಲಿ ಜಯವಿದೆ. ಆದ್ದರಿಂದ ಧರ್ಮವು ಯಾವ ಪಕ್ಷವಲ್ಲಿದೆಎಂಬುದನ್ನು ಪ್ರತ್ಯಕ್ಷವಾಗಿ ನನ್ನ ಬಾಯಿಯಿಂದ ಹೇಳಿಸಬೇಡ. ಕಾಡದಿರು ಕೃಷ್ಣಾ, ನನ್ನನ್ನು ಅಪಖ್ಯಾತಿಗೆ ದೂಡದಿರು. ಬಂದೆನಾದೊಡೆ ರೂಢಿ ಮೆಚ್ಚದು ಭಗವಾನ್. ವೀರ ಸುಯೋಧನನೆ ಎನ್ನ ದಾತಾರ. ಆತನ ಹಗೆಯೇ ಎನ್ನ ಹಗೆ, ಕೃಷ್ಣಾ ಕೇಳು. ನಾಳೆಸಮರಾಂಗಣದಿ ತೋರುವೆನು ನಿಜಭುಜದ ಶೌರ್ಯಸಂಪತ್ತನು, ಮಾರಿಗೌತಣವಾಯಿತು ನಾಳಿನ ಭಾರತ. ಕೌರವನ ಋಣ ಹಿಂಗೆ, ರಣದಲಿ ನನ್ನೀ ಶರೀರವನೊಡ್ಡುವೆನು. ಪಾಂಡವರ, ನನ್ನ ಸಹೋದರರಾದ ಪಾಂಡವರ ನೀನೇ ಕಾವುದು ಕೃಷ್ಣಾ—ನೀನೇ ಕಾವುದು.

ಕೃಷ್ಣ: ಭಲಾ ಕರ್ಣಾ, ನಿನ್ನ ದೃಢ ಚಿತ್ತಕೆ ಮೆಚ್ಚಿದೆ. ಬಂದರೆ ಒಳಿತು. ಬಾರದಿದ್ದೊಡೆ ಆ ಮಂದಮತಿಗೆ ತಿಳುಹಿ, ತಮ್ಮಂದಿರಿಗೆ ರಾಜ್ಯವನ್ನು ಹಿಂದಕ್ಕೆ ಕೊಡಿಸುವುದು ಉಚಿತ. ಮತ್ತೊಮ್ಮೆ ಹೇಳುವೆ, ನಿನ್ನ ಮಾತನು ಹಿಂದುಗಳೆಯನು ಕೌರವೇಶ್ವರ,

ಕರ್ಣ: ಕೃಷ್ಣಾ, ಸಂಧಿಯನು ಉಸುರಿದೊಡೆ ನನ್ನ ಮನಗಾಣನೇ ಕೌರವ? ಎನ್ನ ನೆಚ್ಚಿನ ಸ್ವಾಮಿ. ಆ ಕಾರ್ಯಕ್ಕೆ ನಾನೊಲ್ಲೆ—ಭಗವನ್. ಸಂಜೆಯಾಯಿತು. ಎನ್ನ ಕಳುಹಬೇಕು ಕೃಷ್ಣಾ.

ಕೃಷ್ಣ: ತಥಾಸ್ತು—ಹೋಗಿ ಬಾ ಕರ್ಣಾ. ನಿನ್ನ ಕೀರ್ತಿ ಆಚಂದ್ರಾರ್ಕವಾಗಿ ಬೆಳಗಲಿ,

— ತೆರೆ —

ದೃಶ್ಯ 13. ಗಂಗಾತೀರ

ಕರ್ಣ: ಎಂತಹ ದುರ್ಭಾಗ್ಯ ಜನ್ಮ ನನ್ನದು. ಯಾವ ಗಳಿಗೆಯಲ್ಲಿ ಹಿಂದಿನ ಸಕಲ ಅಪಮಾನಗಳನ್ನು ತೊಳೆದುಕೊಂಡು ಪ್ರಕಾಶಿಸುವೆನೆಂಬ ಆಶಾಂಕುರವಾಯಿತೋ, ಅದೇ ಗಳಿಗೆಯಲ್ಲಿ ಪೂರ್ಣ ನಿರಾಶೆಯ ಕಾರ್ಗತ್ತಲು ಆವರಿಸುವಂತಾಯಿತೇ? ನಾನು ರಾಜಮಾತೆಯಾದ ಕುಂತೀ ಪುತ್ರನಾಗಿದ್ದರೂ ಧರ್ಮಪರರಾದ ಪಾಂಡವರಲ್ಲಿ ಹಿರಿಯನಾಗಿದ್ದರೂ, ಅಯ್ಯೋ ವಿಧೀ—ಸಾಯುವ ಕೊನೆಯ ಗಳಿಗೆಯಲ್ಲಾದರೂ, ಅದನ್ನು ಜಗದೆದುರು ಸಾರಲಾರದವನಾಗಿ ಹೀನಕುಲದ ಸೂತ ಪುತ್ರನೆಂದೇ ಸಾಯಬೇಕಾಗಿ ಬಂತೇ? ಹೇ, ಮಧುಸೂದನ ನಿಶ್ಚಿತಗೊಂಡ ಮುಂದಿನ ಮಹಾಸಮರವು, ಕರ್ಣನ ಕಲಿತನವನ್ನು ಪ್ರದರ್ಶಿಸುವ ಏಕೈಕ ರಣಭೂಮಿ ಎಂಬ ಅತ್ಯುತ್ಸಾಹದಲ್ಲಿದ್ದ ನನಗೆ ನನ್ನ ಜನ್ಮರಹಸ್ಯವನ್ನು ಪ್ರಕಾಶಗೊಳಿಸಿ ನನ್ನ ಮನದಲ್ಲಿ ಮತ್ತೆ ಘೋರಾಂಧಕಾರವು ಕವಿಯುವಂತೆ ಮಾಡಿದೆಯಲ್ಲವೇ? ಹೇ ಮಾಧವಾ, ನೀನು ಪಾಂಡವರ ಪಕ್ಷಪಾತಿ. ದೈವಬಲವೇ

ದುರ್ಲಭವಾದ ಮೇಲೆ ಧುರ್ಯೋಧನನಿಗೆ ಕೇಡಲ್ಲದೆ ಗೇಲುಂಟೆ? (ತಿರುಗಿ ನೋಡಿ)ಯಾರದು? ಇತ್ತ ಬರುತ್ತಿರುವುದು? ಭಾರವಾದ ಹೆಜ್ಜೆಗಳಿಂದ ಗಂಭೀರವಾಗಿ ಇತ್ತ ಬರುತ್ತಿರುವ ಆ ಅವಗುಂಠನ ವತಿಯ ಮುಖವನ್ನು ನೋಡುವ ಮೊದಲೇ ನನ್ನ ಹೃದಯದಲ್ಲಿ ಕೋಲಾಹಲವೇಕೆ? ನನ್ನ ಕಣ್ಣುಗಳಲ್ಲಿ ಆನಂದಭಾಷ್ಪಗಳೇಕೆ? ನನ್ನ ತನುವಿಡೀ ಪುಳಕಿತವಾಗಿ ಈ ಹರ್ಷದ ಹೊನಲೇಕೆ? ಅಹುದು, ಅವಳು ನನ್ನ ತಾಯಿ. ನನ್ನ ಹೆತ್ತವ್ವ. ಮಗನಿಗೆ ದರ್ಶನವೀಯಲು ಬಂದ ಮಹಾಮಾತೆ. ಕುಂತೀ ದೇವಿ...... ಅಮ್ಮಾ......ಅಮ್ಮಾ...... (ಕಾಲಿಗೆರಗುವನು)

ಕುಂತಿ: ಏಳು ಕಂದಾ, ಕರ್ಣಾ ಏಳು ಮಗೂ.

ಕರ್ಣ: ಅಮ್ಮಾ, ನನ್ನ ಅಮ್ಮ; ಅಲ್ಲವೇನಮ್ಮಾ ?

ಕುಂತಿ: (ಹೌದೆಂದು ತಲೆ ಅಲ್ಲಾಡಿಸುವಳು)

ಕರ್ಣ: ಹಾಗಾದರೆ ಮಹಾರಾಣಿ ಕುಂತೀ ದೇವಿ ನನ್ನ ತಾಯಿಯೇನಮ್ಮಾ?

ಕುಂತಿ: ಅಹುದು ಮಗೂ, ಆವಳೇ ನಿನ್ನ ನಿರ್ಭಾಗ್ಯ ಹೆತ್ತ ತಾಯಿ.

ಕರ್ಣ: ಅಮ್ಮಾ, ಯುಗಯುಗಾಂತರಗಳ ತಪಸ್ಸಿನ ಫಲವಾಗಿ, ನಾನು ಮಾಡಿದ ಜನ್ಮಜನ್ಮಾಂತರಗಳ ಪುಣ್ಯದ ಫಲವಾಗಿ, ನಿನ್ನ ಪವಿತ್ರ ಉದರದಲ್ಲಿ ಜನಿಸಿ ಇಂದು ನಿನ್ನನ್ನು ಅಮ್ಮಾ ಎಂದು ಕರೆವ ಭಾಗ್ಯ ಪಡೆದೆ. ಹೇಳಮ್ಮಾ, ಹೇಳು ತಾಯೀ, ಈ ನಿನ್ನ ದುರ್ದೈವೀ ಮಗನಿಂದ ನಿನಗೇನಾಗಬೇಕಾಗಿದೆ. ಹೇಳಮ್ಮ......

ಕುಂತಿ: (ಮೌನ)

ಕರ್ಣ: ಏಕಮ್ಮಾ, ಮೌನ?

ಕುಂತಿ: ಏನು ಹೇಳಲಿ ಮಗೂ, ಏನು ಹೇಳಲಿ ನನ್ನ ಕಂದಾ? ನನ್ನ ಮನದಲ್ಲಿ ಸುಖಸಂತೋಷಗಳೂ ದುಃಖ ದುಮ್ಮಾನಗಳೂ ಏಕಕಾಲದಲ್ಲಿ ಹುಟ್ಟಿಕೊಂಡು ಅವುದೋ ಒಂದು ಅವ್ಯಕ್ತವಾದ ವೇದನೆಯನ್ನುಂಟು ಮಾಡಿದೆ. ಪ್ರಸವವೇದನೆಯಿಂದ ನರಳುತ್ತಿದ್ದ ನಾರಿಯೊಬ್ಬಳು,

ಪ್ರಸವವಾದ ಬಳಿಕ, ಮುದ್ದು ಕುಮಾರನ ಮುಖಕಮಲವನ್ನು ಕಂಡು ಎಂತಹ ಆನಂದವನ್ನು ಹೊಂದುವಳೋ, ಅದಕ್ಕಿಂತಲೂ ಸಹಸ್ರ ಪಾಲು ಮಿಗಿಲಾದ ಆನಂದವನ್ನು ನಿನ್ನ ಮುಖವನ್ನು ನೋಡಿದಾಗ—ನಾನೀಗ ಪಡೆದೆ. ನೀನು ನನ್ನನ್ನು ಅಮ್ಮಾ ಎಂದು ಕರೆದಾಗ ಆಗುವ ತಂಪು ಈ ಕರುಳಿಗಳಲ್ಲದೇ ಮತ್ತಾರಿಗೂ ತಿಳಿಯದು, ಮಗೂ. ಆದರೆ ನಿನ್ನ ಬಾಳಿನ ಗತ ಚರಿತ್ರೆಯ ಸ್ಮರಣೆಯು ಚಿತ್ತದಲ್ಲಿ ಸುಳಿದಾಗ ನಾನೆಂತಹ ಪಾಪಕಾರ್ಯವನ್ನು ಮಾಡಿದೆನೆಂಬ ದುಃಖವು ನನ್ನನ್ನು ಜೀವಂತ ದಹಿಸುತ್ತಿದೆ ಕರ್ಣಾ.

ಕರ್ಣ: ಅಮ್ಮಾ ಇಂತಹ ಪರಿಪೂರ್ಣವಾದ ನನ್ನ ಬಾಳಿನ ಈ ಅಮೃತ ಗಳಿಗೆಯಲ್ಲಿ ಹಿಂದಿನ ಕಹಿ ಘಟನೆಗಳ ಕಡೆ ಚಿತ್ತ ಹಾಯಿಸಿ, ನಿನ್ನ ಮನದ ವ್ಯಾಕುಲತೆಯನ್ನು ಹೆಚ್ಚಿಸಿಕೊಳ್ಳಬೇಡಮ್ಮ. ಅದು ನನ್ನ ದುರ್ದೈವ, ನಾನು ಹುಟ್ಟುವಾಗಲೇ ಪಡಕೊಂಡು ಬಂದಂತಹ ಪೂರ್ವ ಜನ್ಮದ ಕರ್ಮ ಫಲ. ಮರೆತುಬಿಡು ತಾಯೀ—ಅದನ್ನೆಲ್ಲ ಚಿಂತಿಸಿ ಫಲವೇನು ಹೇಳು. ಆದರೆ ಇಂದು ನನ್ನ ಮೇಲೆ ನಿನ್ನ ಕೃಪೆ ಏಕಾಯಿತು ಹೇಳಮ್ಮ—ಹೇಳು.

ಕುಂತಿ: ಮಗೂ, ನೀನು ಪಾಂಡವರ ಅಗ್ರಜನು. ಈ ಸಮರ ಸನ್ನಾಹಗಳನ್ನು ಬದಿಗೊತ್ತಿ, ಅಣ್ಣ ತಮ್ಮಂದಿರು ತಮ್ಮ ಭೇದ ಭಾವವನ್ನು ಮರೆತು, ನಿನಗೇ ಪಟ್ಟಾಭಿಷೇಕ ಮಾಡಿಸಿ, ಎಲ್ಲರೂ ನಿನ್ನ ಸೇವೆ ಮಾಡುವುದನ್ನು ನಾನು ಕಣ್ಣಾರೆ ಕಂಡು ಸಂತೋಷ ಪಡಬೇಕು ಎಂಬ ಆಶೆಯಿದೆ. ಮಗನೇ, ತಂದೆಯ ನಂತರ ತಮ್ಮಂದಿರನ್ನು ಅಣ್ಣನೇ ಸಲಹಬೇಕಲ್ಲವೇ? ಅಂತಿರಲು ನೀನವರ ಪಾಲಿಸು, ರಕ್ಷಿಸು. ಅವರ ಮೇಲೆ ದ್ವೇಷ ಕಾರಬೇಡ. ಪರ ರೋಲಗದಲ್ಲಿ ಪರವಶನಾಗದಿರು. ನನ್ನ ಹಿರಿಯ ಮಗನಾಗಿ ನೀನೇ ಪಟ್ಟವನ್ನುವಹಿಸಿಕೋ. ನನ್ನ ಆಶೆಯ ಈಡೇರಿಸು ಕರ್ಣಾ.

ಕರ್ಣ: ಅಂದರೆ, ನಾನು ನನ್ನ ಸ್ವಾಮಿ, ಪ್ರಾಣಸ್ನೇಹಿತ ಸುಯೋಧನನಿಗೆ ಕೇಡು ಬಗೆಯಬೇಕೆಂದು ಬೋಧಿಸುತ್ತಿರುವೆಯೇನಮ್ಮ?

ಕುಂತಿ: ಮಗೂ, ಪಾಂಡವರು ನ್ಯಾಯಕ್ಕಾಗಿ–ಧರ್ಮಕ್ಕಾಗಿ ಯುದ್ಧ ಹೂಡ ಬೇಕಾಗಿದೆ. ಅನ್ಯಾಯದ ಅಪರಾವತಾರವಾದ ದುರ್ಯೋಧನನಿಗೆ ಜಯವು ಲಭಿಸುವುದುಂಟೆ? ಆತನು ಅತೀ ದುರುಳನು—ಬಿಡು, ಆತನ ಸಂಗವನು.

ಕರ್ಣ: ಅಮ್ಮಾ, ದುರ್ಯೋಧನನು ಪಾಂಡವರಿಗೆ ಏಕೆ? ಜಗತ್ತಿಗೇ ದುರುಳ ನಾದರೂ ಕರ್ಣನಿಗಾತನು ಪರಮಪೂಜ್ಯನು. ಕರ್ಣನ ಬಾಳಿನಲ್ಲಿ ಬೆಳಕನ್ನು ಬೀರಿದ ಮಹಾತ್ಮನವನು. ಜಗತ್ತಿನ ತಿರಸ್ಕಾರದಿಂದ ಉಂಟಾದ ಗಾಯವನ್ನು ವಾಸಿ ಮಾಡಿದ ಮಹಾನುಭಾವನು. ಅಮ್ಮಾ, ಜಗತ್ತು ನನಗೆ ಈಯದ ಮಾನ ಸನ್ಮಾನಗಳನ್ನು ಅವನು ನನಗಿತ್ತು ಗೌರವಿಸಿದ್ದಾನೆ. ಪಿತಾಮಹ ಭೀಷ್ಮರಲ್ಲಿ–ಗುರು ದ್ರೋಣಾಚಾರ್ಯರಲ್ಲಿ ಇಡದ ನಂಬಿಕೆಯನ್ನು ನನ್ನಲ್ಲಿ ಇಟ್ಟಿದ್ದಾನೆ. ತನ್ನ ಜೀವನದ ಆಶೆಆಕಾಂಕ್ಷೆಗಳ ಮಂದಿರವನ್ನು ಕರ್ಣನ ಶೌರ್ಯದ ನೆಲೆಗಟ್ಟಿನ ಮೇಲೆ ರಚಿಸಿಕೊಂಡಿದ್ದಾನೆ. ಏಕಮ್ಮಾ, ಹೆತ್ತ ತಾಯಿಗೇ ಬೇಡವಾದ ಈ ದರಿದ್ರ ದೇಹವನ್ನು ಅತಿಯಾದ ಪ್ರೀತಿಯಿಂದ ಪೋಷಿಸಿ,ಅಂಗರಾಜ್ಯದ ಅಧಿಪತಿಯನ್ನಾಗಿ ಮಾಡಿದ್ದಾನೆ-ನೀನನ್ನುವ ಆ ದುರುಳ ದುರ್ಯೋಧನನು. ಇಂತಿರಲು ನೀವೀಯುವ ಹಸ್ತಿನಾ ವತಿಯ ಪಟ್ಟದ ಆಸೆಗಾಗಿ ನಾನಿಂದು ದುರ್ಯೋಧನನನ್ನು ತ್ಯಜಿಸಲೇ? ಸ್ವಾಮಿದ್ರೋಹ, ಮಿತ್ರದ್ರೋಹ, ಕರ್ತವ್ಯದ್ರೋಹ ಮಾಡಿ ದಂತಾಗುವುದಿಲ್ಲವೇನಮ್ಮ? ಅಂತಹ ದ್ರೋಹಿ ನಾನಾದರೆ, ನಿಮ್ಮ ಮಗ ನಾನಾಗುವುದಾದರೂ ಹೇಗಮ್ಮ? ನಿಮ್ಮ ಪವಿತ್ರ ರಕ್ತಕ್ಕೆ ಕಲಂಕ ಹಚ್ಚಿದ ಮಹಾ ಪಾಪ ನನಗೆ ಬಾಧಿಸಲಿಕ್ಕಿಲ್ಲವೇನಮ್ಮ?

ಕುಂತಿ: ಕರ್ಣಾ, ಈ ಸಮರದಲ್ಲಿ ಸುಯೋಧನನಿಗೆ ಗೆಲುವಿಲ್ಲ. ಆತನ ಪಕ್ಷಪಾತಿಯಾಗಿ ನೀನೂ ರಣರಂಗದಲ್ಲಿ.........

ಕರ್ಣ: ಸಾಯುವೆನೆಂದೆಯಾ? ಮರಣಕ್ಕೆ ಅಂಜುವವ ನಿಮ್ಮ ಮಗನೇ? ರಣರಂಗದಲ್ಲಿ ಬರುವ ಸಾವು ವೀರನಿಗೆ ಅತ್ಯಂತ ಪ್ರಿಯವಾಗಿದೆ.ಅನ್ನ ದಾತನ ಸೇವೆಯಲ್ಲಿ ಒದಗುವ ಸಾವಿಗಿಂತಲೂ ಹೆಚ್ಚಿನ ಭಾಗ್ಯಶಾಲೀ

ಮರಣವು ಈ ಜೀವನದಲ್ಲಿ ಬೇರೊಂದಿಲ್ಲ. ಯಾವ ಪ್ರಲೋಭವೂ ಯಾವ ಅಂಜಿಕೆಯೂ ನನ್ನ ನಿಷ್ಠೆಯನ್ನು ಕದಲಿಸಲಾರವು ತಾಯಿ.

ಕುಂತಿ: ಹಾಗಾದರೆ ನಿನ್ನ ಹೆತ್ತ ಕರುಳಿನ ಮೇಲೆ ನಿನಗೆ ಇನಿತೂ ಮಮತೆ ಇಲ್ಲವೇ ಮಗೂ?

ಕರ್ಣ: ಹಾಗೇಕೆ ಹೇಳುವೆ ತಾಯೀ—ಈ ಜಗತ್ತಿನಲ್ಲಿ ಎಲ್ಲವನ್ನು ಕೊಟ್ಟು ಎಲ್ಲವನ್ನೂ ಪಡೆಯಬಹುದು. ಆದರೆ ಏನೂ ಕೊಡದೆ ಎಲ್ಲ ವನ್ನೂ ಪಡೆಯುವುದಾದರೆ ಅದು ಹೆತ್ತ ಕರುಳಿಂದ ಮಾತ್ರ ಸಾಧ್ಯ. ನಾನೀಗ ಮಾತೃಪ್ರೇಮದ ನಿರ್ಮಲ ಚಿತ್ತದಲ್ಲಿ ವಿಹರಿಸುತ್ತಿದ್ದೇನೆ. ಆ ಸಂತಸದ ಹುಚ್ಚಿನಲ್ಲಿ ಮತ್ತನಾಗಿದ್ದೇನೆ. ಅಮ್ಮಾ, ಅಮ್ಮಾ ಹೇಳು. ಆ ಎರಡು ಅಕ್ಷರಗಳಿಗೋಸ್ಕರ ನನ್ನ ಪ್ರಾಣವನ್ನೇ ಬೇಕಾದರೆ ಧಾರೆ ಎರೆಯುತ್ತೇನೆ. ಆದರೆ ನಿನ್ನ ಕೋರಿಕೆಯು ಧರ್ಮದ ಎಲ್ಲೆಯನ್ನು ಮಾತ್ರ ಮೀರಿ ಸಂಚರಿಸದಿರಲಿ.

ಕುಂತಿ: ಹಾಗಾದರೆ ನಿನ್ನಲ್ಲೊಂದು ಭಿಕ್ಷೆ ಬೇಡಲೇ, ಕುಮಾರಾ?

ಕರ್ಣ: ಹಾಗೇಕಮ್ಮ ಹೇಳುವೆ? ಮಗನಲ್ಲಿ ತಾಯಿ ಭಿಕ್ಷೆ ಬೇಡುವುದೇ? ಹೇಳಮ್ಮ ನಿನ್ನ ಮನದಿಂಗಿತವೇನು?

ಕುಂತಿ: ಕರ್ಣಾ, ನೀನು ಮಹಾಪರಾಕ್ರಮಶಾಲಿ. ಮುಂದಿನ ಸಂಗ್ರಾಮದಲ್ಲಿ ನಿನ್ನನುಜರಾದ ಪಾಂಡವರೈವರನ್ನು ನೋಯಿಸದಿರು. ಅವರನ್ನು ಕೊಲ್ಲದಿರು ಮಗೂ—ಇಷ್ಟೆ ನನ್ನ ಭಿಕ್ಷೆ.

ಕರ್ಣ: ಏಕಮ್ಮಾ ನನ್ನ ಪ್ರಾಣವನ್ನೇ ಕೇಳಬಹುದಿತ್ತಲ್ಲವೇ? ಮಗನಾಗಿ ನಿನ್ನ ಭಿಕ್ಷೆಯನ್ನು ತಿರಸ್ಕರಿಸುವ ಇಚ್ಛೆ ನನಗಿಲ್ಲ. ಹಾಗೆಂದು ವಚನ ಭ್ರಷ್ಟನಾಗಲಾರೆ. ಸುಯೋಧನನಿಗೆ ವಚನವಿತ್ತಿದ್ದೇನೆ. ಸಮರ ವೆಸಗಿದರೆ ಪಾರ್ಥನ ತಲೆಕೆಡಹುವೆನೆಂದು—ಆದ್ದರಿಂದ ಪಾರ್ಥ ನೊಬ್ಬನ ಬಿಟ್ಟು ಉಳಿದವರ ಕೊಲ್ಲೆನು. ಇದು ನನ್ನ ವಚನ. ಯುದ್ಧದಲ್ಲಿ ಮನಃಪೂರ್ವಕವಾಗಿ, ಆತ್ಮ ಸಾಕ್ಷಿಯಾಗಿ ಹೋರಾಡು ವೆನಾದ್ದರಿಂದ ಪಾರ್ಥನನ್ನು ರಕ್ಷಿಸುವ ಸರ್ವ ಹೊಣೆಗಾರಿಕೆಯೂ

ನಿಮ್ಮದು. ಅಮ್ಮಾ, ಏಕಮ್ಮಾ ಕಳವಳ? ಹರಿಯು ನೆರವೇ ನಿಮಗಿರುವಾಗ ಸುಯೋಧನನಿಗೆ ವಿಜಯದ ದಾರಿ ಇನ್ನೆಲ್ಲಿ? ಶ್ರೀ ಕೃಷ್ಣ ಪರಮಾತ್ಮನೇ ಪಾಂಡವರ ಪರವಾಗಿ ಈ ಸಮರದ ಸಾರಥ್ಯವನ್ನು ವಹಿಸಿರುವಾಗ ನಾವು ಗೆಲುವನ್ನು ಬಯಸುವುದು ಮೂರ್ಖತನವಲ್ಲವೇ?

ಕುಂತಿ: ನಿನ್ನ ನಿಶ್ಚಲ ಮನಸ್ಸಿಗೆ—ಸ್ವಾಮಿ ಭಕ್ತಿಗೆ ಮೆಚ್ಚಿದೆ ಮಗೂ, ನೀನು ಸಾಮಾನ್ಯನಲ್ಲ. ಭಗವಂತನ ಇಚ್ಛೆ ಇದ್ದಂತಾಗುವುದು —ನಾನಿನ್ನು ಬರಲೇ?

ಕರ್ಣ: ಆಗಬಹುದಮ್ಮಾ. ಹೋಗುವ ಮುನ್ನ ನನ್ನನ್ನೊಮ್ಮೆ ಆಶೀರ್ವದಿಸಮ್ಮಾ—ಇನ್ನೆಂದು ಕಾಣುವೆನೋ ನಿಮ್ಮ? ಅಥವಾ ಕಾಣದೇ ಇರುವೆನೋ. ನಿಮ್ಮ ಸೇವೆ ಮಾಡುವ ಸೌಭಾಗ್ಯ ದೇವರು ನನಗೆ ಕರುಣಿಸಲಿಲ್ಲ. ಪಾಂಡವರೇ ಅದೃಷ್ಟಶಾಲಿಗಳು. (ಕಾಲಿಗೆರಗುವೆನು)

ಕುಂತಿ: ನಿನಗೆ ಮಂಗಲವಾಗಲಿ—ಕೀರ್ತಿಶಾಲಿಯಾಗು ಮಗೂ.

— ತೆರೆ —

ದೃಶ್ಯ—14. (ಕೌರವನ ಮಂತ್ರಾಲೋಚನೆ)

ಕೌರವ: ಪೂಜ್ಯ ಪಿತಾಮಹರೆ, ಗುರುದ್ರೋಣಾಚಾರ್ಯರೆ, ಕೃಪಾಚಾರ್ಯರೆ ಶಲ್ಯ ಮಹಾರಾಜರೆ, ಬಂಧುಗಳೆ ಮತ್ತು ಮಿತ್ರರೆ, ಗಹನವಾದ ವಿಚಾರ ವಿನಿಮಯಕ್ಕಾಗಿ ತಮ್ಮೆಲ್ಲರನ್ನು ಇಂದು ನಾನು ಆಮಂತ್ರಿಸಿರುವೆನು. ಪಾಂಡವರಲ್ಲಿ ಯುದ್ಧವೇ ನಿರ್ಣಯವಾದುದು ತಮಗೆಲ್ಲರಿಗೂ ತಿಳಿದ ವಿಷಯ. ಹೀಗಿರಲು ಕುರು ಸಿಂಹಾಸನದ ರಕ್ಷಕರಾದ ನಾವೆಲ್ಲರೂ ಕ್ಷಾತ್ರ ಪಂಥಕ್ಕನುಸಾರ ಯುದ್ಧ ಮಾಡುವುದು ನಮ್ಮ ಧರ್ಮವಾಗಿದೆ. ಕಾದುವುದೇ ನಮ್ಮ ಕರ್ತವ್ಯ. ಈ ದಿಸೆಯಲ್ಲಿ ನಮ್ಮಲ್ಲಿರುವ ವೀರಾಧಿವೀರರಲ್ಲಿ ಸೇನಾಧಿಪತ್ಯವನ್ನು ವಹಿಸುವ ಮಹಾ ರಥಿಕನಾರೆಂಬುದನ್ನು ತಾವೇ ಸೂಚಿಸಬೇಕಾಗಿ ಇಚ್ಛಿಸುತ್ತೇನೆ. ಸೇನಾಧಿಪತಿ

ಆರೆಂಬುದನ್ನು ನಿರ್ಣಯಿಸುವ ಒಂದೇ ಒಂದು ವಿಷಯವಲ್ಲದೆ ಬೇರಾವ ವಿಚಾರವೂ ಅಪ್ರಸ್ತುತವೆಂದಷ್ಟೆ ಹೇಳಬಯಸುವೆನು.

ದ್ರೋಣ: ಬೇರಾವ ವಿಚಾರಗಳೂ ಇಲ್ಲಿ ಅಪ್ರಸ್ತುತವಷ್ಟೇ ಅಲ್ಲ. ನಿರರ್ಥಕವೂ ಅಹುದೆಂದು ನಮಗೆ ಎಂದೋ ತಿಳಿದ ವಿಷಯ. ಆದರೆ ಕರ್ಮಬದ್ಧರಾದ ನಾವು ಖಂಡಿತವಾದ ಕದನದಲ್ಲಿ ಕಾದಾಡದಿರುವುದು ನ್ಯಾಯವಲ್ಲ. ನಾವು ಧರ್ಮದಲ್ಲಿ ನಂಬಿಕೆಯಿದ್ದವರು. ಸತ್ಯದಲ್ಲಿ ನಿಷ್ಠೆ ಇದ್ದವರು—ಆದ್ದರಿಂದ ಜಯಾಪಜಯಗಳ ಗೊಡವೆ ನಮಗಿಲ್ಲ—ಎಲ್ಲಿ ಧರ್ಮವೋ ಅಲ್ಲಿ ಜಯವೆಂಬುದೇ ನಮ್ಮ ಮಂತ್ರ. ಆದ್ದರಿಂದ ಎಂದಾದರೊಮ್ಮೆ ಖಂಡಿತವಾಗಿಯೂ ಕಳೆದುಕೊಳ್ಳಬೇಕಾಗಿದ್ದ ಈ ದೇಹದ ಮೇಲೆ ನಮ್ಮ ನೀತಿಯಂತೆ ನಮಗೆ ಆಸೆಯಿಲ್ಲ. ಪ್ರಯುಕ್ತ ಯುದ್ಧಕ್ಕೆ ಹಿಂಜರಿಯುವೆವೆಂಬ ಸಂದೇಹ ನಿನಗೆ ಬೇಡ ಸುಯೋಧನಾ—ಬೇಡ.

ಕೃಪಾ: ದ್ರೋಣಾಚಾರ್ಯರು ನುಡಿದುದು ಸತ್ಯ. ವಿಚಾರ ವಿನಿಮಯಗಳು ಸಾಕಷ್ಟು ನಡೆದಿವೆ. ಧರ್ಮದ ದೃಷ್ಟಿಯಿಂದ ಮಾಡಬೇಕಾದ ಪ್ರಯತ್ನಗಳು ನಮ್ಮಿಂದ ಸಾಧ್ಯವಾದಷ್ಟು ಮಾಡಲ್ಪಟ್ಟಿವೆ. ಆದರೆ ಇಂದು ನಮ್ಮ ಮುಂದೆ ನಿಂತಿರುವ ಒಂದೇ ಒಂದು ಪ್ರಶ್ನೆಯೆಂದರೆ ಯುದ್ಧ—ಯುದ್ಧವು ಅನಿವಾರ್ಯವೆಂದಾದಾಗ ನಮಗೆ ಅದನ್ನು ಸ್ವೀಕರಿಸದಿರುವುದು ಅಸಾಧ್ಯ. ಒಂದಿಲ್ಲೊಂದು ರೀತಿಯಲ್ಲಿ ನಾವೆಲ್ಲರೂ ಇಂದು ಕುರುಸಿಂಹಾಸನಕ್ಕೆ ಕಟ್ಟುಬಿದ್ದಿದ್ದೇವೆ. ಪ್ರಕೃತ ಕಾದುವುದೇ ನಮ್ಮ ಕರ್ತವ್ಯವಾಗಿದೆ. ಯುದ್ಧವನ್ನು ತಪ್ಪಿಸುವ ನಮ್ಮ ಸರ್ವಪ್ರಯತ್ನಗಳೂ ನಿರರ್ಥಕವಾಗಿವೆ. ಆದ್ದರಿಂದ ನಮ್ಮ ಮುಂದಿರುವ ಯುದ್ಧಕ್ಕೆ ಸೇನಾಧಿಪತಿಯನ್ನಾಗಿ ವಯೋವೃದ್ಧರೂ ಜ್ಞಾನವೃದ್ಧರೂ ಮಾತ್ರವಲ್ಲ—ಇಚ್ಛಾಮರಣಿಗಳೂ ಆಗಿರುವಂತಹ ಭೀಷ್ಮಾಚಾರ್ಯರನ್ನು ನಾನು ಸೂಚಿಸುವೆನು. ಏಕೆಂದರೆ, ಪಿತಾಮಹರಿಗೆ ಸಲ್ಲಲೇ ಬೇಕಾದಂತಹ ಗೌರವವು ಸಲ್ಲಿಸಲ್ಪಟ್ಟ ಮೇಲೆಯೇ ಇತರರ ವಿಚಾರ ಗಮನಿಸುವುದು ಸೂಕ್ತವೆಂದು ನನ್ನ ಅಭಿಪ್ರಾಯ.

ದ್ರೋಣ: ಬಹಳ ಸಮಂಜಸವೂ ಸೂಕ್ತವೂ ಆದ ಸೂಚನೆಯಾಗಿದೆ. ಪಿತಾಮಹರೇ ಪ್ರಪ್ರಥಮ ಪ್ರಧಾನ ಸೇನಾಪತಿಯಾಗುವುದು ವಿಹಿತ.

ಶಲ್ಯ: ಇದಕ್ಕೆ ಪ್ರತಿಮಾತಾಡುವ ಯೋಗ್ಯತೆಯುಳ್ಳವನು ಈ ಸಭೆಯಲ್ಲಿ ಇದ್ದರೆ, ಅದು ನಾನೊಬ್ಬನೆ. ಏಕೆ? ನಿಮಗೆಲ್ಲರಿಗೂ ತಿಳಿದಂತೆ. ನಮಗೂ ತಿಳಿದಂತೆ ಮಾದ್ರದೇಶಾಧಿಪತಿಗಳು ಮರ್ಯಾದೆಯಲ್ಲಿ ಹಿಂದಿಲ್ಲ. ಶೌರ್ಯದಲ್ಲಿ ಹಿಂದಿಲ್ಲ. ವಿಲಾಸದಲ್ಲಿ ಹಿಂದಿಲ್ಲ. ಬುದ್ಧಿವಂತಿಕೆಯಲ್ಲೂ ಕಡಿಮೆಯಿಲ್ಲ. ನಿಜವಾಗಿ ನೋಡಿದರೆ ಆ ಗೌರವ ಮಾದ್ರ ದೇಶಾಧಿಪತಿಯಾದ ನನಗೆ ಸಲ್ಲಬೇಕಿತ್ತು—ಆದರೆ ಒಂದು ವಿಷಯದಲ್ಲಿ ನಾನು ಪಿತಾಮಹರಿಗಿಂತ ಹಿಂದಿದ್ದೇನೆ. ಯಾವುದರಲ್ಲಿ? ಪ್ರಾಯದಲ್ಲಿ. ಪ್ರಾಯಕ್ಕೆ ಮನ್ನಣೆ ನೀಡುವುದು ನನ್ನ ಧರ್ಮವಾದ್ದರಿಂದ ನಾನೂ ಭೀಷ್ಮಾಚಾರ್ಯರ ಸೇನಾಧಿಪತ್ಯಕ್ಕೆ ಅನುಮೋದಿಸುತ್ತೇನೆ. ನಾನು ಅನುಮೋದಿಸುವುದಕ್ಕೆ ಯಾರಾದರೂ ಆಕ್ಷೇಪಿಸುವವರು ಈ ಸಭೆಯಲ್ಲಿ ಇದ್ದಾರೆಯೋ? ಯಾರಿದ್ದಾರೆ?

ಅಶ್ವ: ಇಲ್ಲ—ಇಲ್ಲ. ಶಲ್ಯಮಹಾರಾಜರು ಹೇಳಿದುದನ್ನು ಅಲ್ಲಗಳೆವವರು ಯಾರೂ ಇಲ್ಲ. ನಮ್ಮ ಪಾಳೆಯದಲ್ಲಿ ಯುದ್ಧ ವಿದ್ಯಾ ಕುಶಲರು ಮಹಾಪರಾಕ್ರಮಿಗಳು. ಬಹಳಷ್ಟು ಮಂದಿ ಇದ್ದರೂ. ಯುದ್ಧದಲ್ಲಿ ಮುನ್ನುಗ್ಗುವುದಕ್ಕೆ ನಾ ಮುಂದು, ತಾ ಮುಂದು, ಅನ್ನುವ ಪಟುಭಟರು ಅನೇಕರಿದ್ದರೂ, ಭೀಷ್ಮ ಪಿತಾಮಹರೇ ಸೇನಾಧಿಪತ್ಯ ವಹಿಸಿ, ಸಮರವನ್ನು ನಡೆಸುವುದು ನಿಜವಾಗಿಯೂ ನ್ಯಾಯವಾದದು, ಯೋಗ್ಯವಾದುದು.

ಕೌರವ: ಮಹಾಮುಖಂಡರುಗಳ ಸೂಚನೆಯನ್ನು ಸ್ವೀಕರಿಸಿ ಪಿತಾಮಹರಲ್ಲಿ ಈ ಸುಯೋಧನನು ವಿನಯಪೂರ್ವಕ ಪ್ರಾರ್ಥಿಸುವುದೇನೆಂದರೆ, ಈ ಸಮರದ ಸಾರಥ್ಯವನ್ನು ವಹಿಸಲು ತಾವೇ ಸೇನಾಧಿಪತಿಯಾಗಬೇಕೆಂದು.

ಭೀಷ್ಮ: ವತ್ಸಾ ದುರ್ಯೋಧನಾ, ವೃದ್ಧನಾದ ನನ್ನನ್ನೇ ನೀವೆಲ್ಲರೂ ಆರಿಸಿರುವುದು ನನಗೆ ಪರಮ ಸಂತೋಷಕರ. ಏಕೆಂದರೆ ನಾನು ವೃದ್ಧನು. ನಿಮ್ಮೆಲ್ಲರಿಗಿಂತ ಮೊದಲು ನಾನೇ ಹೋಗಬೇಕಾದುದು ಸಹಜ. ನನ್ನಲ್ಲಿಂದು ಹಿಂದಿನ ಶೌರ್ಯ ಇರಲಿ, ಇಲ್ಲದಿರಲಿ ಕ್ಷಾತ್ರ ಮರ್ಯಾದೆಯನ್ನು ನನಗೆ ನೀವಿತ್ತು ಗೌರವಿಸಿದುದು ನನಗೆ ಹೆಮ್ಮೆಯ ವಿಷಯ. ಕಾದುವೆನು. ಕಾದುವೆನು. ಯುದ್ಧದಲ್ಲಿ ಮೊತ್ತಮೊದಲಿಗನಾಗಿ ಕಾದುವೆನು—ನನಗಾಗಿ ಅಲ್ಲ. ಕುರುಸಿಂಹಾಸನಕ್ಕಾಗಿ ನನ್ನ ಕರ್ತವ್ಯವನ್ನು ಪೂರೈಸಲು.

ಕರ್ಣ: (ರೋಷದಿಂದ) ಕೇಳಿದೆನು—ಕೇಳಿದೆನು. ಏನಿದು ಮರುಳುತನ? ಏ, ಸುಯೋಧನಾ, ಮಂದಿಯ ಮಾತಿಗೆ ಮರುಳಾಗಿ ಮುಂದಿನ ಮಹಾಸಮರದ ಸೇನಾಧಿಪತ್ಯದ ವೀರಪಟ್ಟವನ್ನು ಮುದಿತನದಿಂದ ಮೂಲೆಸೇರಿದ ಭೀಷ್ಮಾಚಾರ್ಯರಿಗೆ ಒಪ್ಪಿಸಿದೆಯಲ್ಲವೇ? ನಾವೇನು ಷಂಡರೇನು? ನಿನ್ನ ಅಭ್ಯುದಯಕ್ಕಾಗಿ ನಿನ್ನ ಋಣವಿಮೋಚನೆಗಾಗಿ, ಕಣ್ಣಲ್ಲಿ ಎವೆಯಿಕ್ಕದೆ ಯುದ್ಧವನ್ನೇ ನಿರೀಕ್ಷಿಸುತ್ತಿದ್ದರೆ ಸೇನಾಧಿಪತ್ಯವನ್ನು ಪಾಂಡವರ ಪಕ್ಷಪಾತಿಯಾದ, ಆ ವೃದ್ಧ, ಭೀಷ್ಮಾಚಾರ್ಯರಿಗೆ ಒಪ್ಪಿಸಿ ನಮ್ಮನ್ನಿಂದು ಅವಮಾನಗೊಳಿಸಿದೆ. ಏನಿದು, ಮೂರ್ಖತನ? ನಮ್ಮಂತ ಬಿಸಿ ರಕ್ತದ ರಣದಾಹದ ಎಳೆಯರ ಶೌರ್ಯದಲ್ಲಿ ನಿನಗೆ ವಿಶ್ವಾಸವಿಲ್ಲವೆ ಹೋಯಿತಲ್ಲವೇ? ಈ ನಿಷ್ಪ್ರಯೋಜಕ, ನಿರುತ್ಸಾಹೀ ರಾಜಕಾರಣೆಗಳನ್ನು ನೀನೇಕೆ ನಿವೃತ್ತಿ ಪಡಿಸುವುದಿಲ್ಲ? ನಮ್ಮಂತಹ ತರುಣರಲ್ಲಿ ನೀನೇಕೆ ನಂಬಿಕೆ ಇಡುವುದಿಲ್ಲ. ಇದೋ...ಇದೋ ಕೇಳು. ಈ ಯುದ್ಧವನ್ನು ಭೀಷ್ಮಾಚಾರ್ಯರೇ ಗೆಲ್ಲಲು ಸಮರ್ಥರೆಂದಾದರೆ, ಅವರು ಸೇನಾಧಿಪತಿಯಾಗಿ ರಣರಂಗದಲ್ಲಿ ಕಾದುವ ತನಕ ಈ ಕರ್ಣನು ಯುದ್ಧವನ್ನೇ ಮಾಡಲಾರನು. —ಕೌರವನಿಗೆ ಜಯಲಾಭವನ್ನು ತರಲು, ಒಬ್ಬ ಕರ್ಣನ ಭುಜಶೌರ್ಯವೇ ಸಾಕು. ಏಕೆ, ಕೌರವಾ, ಕರ್ಣನ ಕೆಳೆತನದಲ್ಲಿ, ಕರ್ಣನ ಕೆಚ್ಚಿನಲ್ಲಿ, ಕರ್ಣನ ಕದನ ಕೌಶಲ್ಯದಲ್ಲಿ ನಿನಗೆ ಸಂದೇಹವೇ?

ಕೌರವ: ಕರ್ಣಾ, ಕರ್ಣಾ, ದುಡುಕದಿರು, ದುಡುಕದಿರು. ನಿನ್ನ ಶೌರ್ಯ ಸಂಪತ್ತಿನ ಮೇರೆ ಹರಿದು ಅನಾಹುತವನ್ನು ಆಮಂತ್ರಿಸುವ ಆಪತ್ತಾಗುವುದು ಬೇಡ. ನನ್ನ ಮೇಲಿರುವ ನಿನ್ನ ಅಪಾರ ಮಮತೆಯನ್ನು ಬಲ್ಲೆ— ಯುದ್ಧದಲ್ಲಿ ನಿನಗಿರುವ ಉತ್ಸಾಹವನ್ನು ಅರಿತಿರುವೆ. ಆದರೆ ಕರ್ಣಾ, ಇದು ರಾಜಕಾರಣ. ಇಲ್ಲಿ ದುಡುಕುತನ ಸಲ್ಲದು. ಉದ್ವೇಗ ಒಲ್ಲದು. ವಿವೇಕಿಯಾಗು. ಶಾಂತನಾಗು.

ಭೀಷ್ಮ: (ಕೋಪಾವಿಷ್ಟನಾಗಿ ನಿಂತು) ಯಾರದು? ಯಾರದು? ಈ ಸಭೆಯಲ್ಲಿ ಭೀಷ್ಮನ ಪೌರುಷದ ಮೇಲೆ ಕೈಆಡಿಸಿದವರಾರು? ಭೀಷ್ಮನ ಕೆಚ್ಚನ್ನು ಕೆಣಕಿದವರಾರು? ಕರ್ಣನೇನು? ಕರ್ಣಾ, ಕೇಳಿದೆ—ಕೇಳಿದೆ. ಅಭಿಮಾನ ಕೆರಳಿಸುವ, ಘನತೆ ಗೌರವಗಳ ಬಡಿದೆಬ್ಬಿಸುವ ನಿನ್ನ ಕರ್ಣ ಕಠೋರ ನುಡಿಗಳ ಕೇಳಿದೆ. ಭೀಷ್ಮನಿಗೆ ಮುದಿತನ ಆಹುದು. ಆದರೆ ಭೀಷ್ಮನ ಪೌರುಷಕ್ಕೆ ಎಲ್ಲಿಯ ಮುದಿತನ? ಹಚ್ಚ ಹಸುರಾಗಿ, ಸದಾ ಹಸನ್ಮುಖಿಯಾಗಿ ಬೆಳಗುವ ಕ್ಷಾತ್ರ ತೇಜಸ್ಸು ಈ ಭೀಷ್ಮನ ನರ ನರಗಳಲ್ಲಿ ಹರಿಯುತ್ತಿರುವುದು.–ಏಕೆ ಕೌರವ, ಬಿಲ್ಗಾರ ಪಾರ್ಥನಿಗೆ ಪ್ರತಿಸ್ಪರ್ಧಿಯಾಗಿ ನೀಬೆಳೆಸಿದ ಈ ಸೂತಪುತ್ರನ ಉದ್ಗಾರಗಳನ್ನು ಕೇಳಿದೆಯೇನು? ಭೀಷ್ಮನ ಕೆಚ್ಚನ್ನು ಕೆಣಕುವಷ್ಟು ದರ್ಪ ಈ ಕುಲ ಹೀನನಿಗೆ–ಏ ಕರ್ಣಾ, ಕೇಳುವಿಯೇನು ? ಈ ವೃದ್ಧನ ಪ್ರತಿಜ್ಞೆ. ಮುಂದಿನ ಮಹಾ ಯುದ್ಧದಲ್ಲಿ ಹತ್ತು ದಿನಗಳ ಪರಿಯಂತ ಕಾದಾಡಿ ದಿನವೊಂದಕ್ಕೆ ಹತ್ತುಸಹಸ್ರ ಮಕುಟವರ್ಧನರನ್ನು ರಣರಂಗದಲ್ಲಿ ಕೆಡ ಹುವೆನು. ಆಯುಧವನ್ನು ಧರಿಸೆನೆಂದು ಪ್ರತಿಜ್ಞೆಗೈದ ಆ ಶ್ರೀಕೃಷ್ಣ, ಯುದ್ಧ ಮಧ್ಯೆಆಯುಧವನ್ನೆತ್ತಿಕೊಳ್ಳುವಂತೆ ಯುದ್ಧವೆಸಗುವೆನು.

ಕೌರವ: ಪಿತಾಮಹ, ಪಿತಾಮಹ—ಶಾಂತರಾಗಬೇಕು. ದಯುವಿಟ್ಟು ನೊಂದುಕೊಳ್ಳಬಾರದು. ತಾರುಣ್ಯದ ತೇಜವು, ನನ್ನ ಮೇಲಿನ ಅಭಿಮಾನವು ಕರ್ಣನನ್ನು ಆ ರೀತಿ ಮಾತಾಡಿಸಿತಷ್ಟೆ. ವಿನಹ ಬೇರೇನಲ್ಲ. ತಮ್ಮ ಪರಾಕ್ರಮದ ಮುಂದೆ ನಿಲ್ಲುವ ಪಟು ಭಟರಾರು? ಕರ್ಣನ ಪರವಾಗಿ ನಾನೇ ತಮ್ಮ ಕ್ಷಮೆಯಾಚಿಸುವೆನು.

ಕರ್ಣ: (ಎದ್ದು ಹೋಗುವನು)

ದ್ರೋಣ: ಪಿತಾಮಹರು ಉದ್ವೇಗಗೊಳ್ಳದೆ ಶಾಂತರಾಗಬೇಕು.

ಕೃಪಾ: ಸುಯೋಧನಾ, ಸೇನಾಧಿಪತ್ಯದ ಸರ್ವ ಸಿದ್ಧತೆಗಳನ್ನು ಮಾಡು. ಮುಂದೆ ವಾದ ವಿವಾದಗಳಿಗೆ ಅವಕಾಶ ಕೊಡಬೇಡ.

ಕೌರವ: ಆಗಬಹುದು ಆಚಾರ್ಯರೆ.

— ತೆರೆ —

ದೃಶ್ಯ—15.

ಶಕುನಿ: ಯಾರೆಣಿಸಿದ್ದರು? ಇಚ್ಛಾಮರಣಿ ಭೀಷ್ಮಪಿತಾಮಹರೇ ಹತ್ತು ದಿನಗಳ ಹೋರಾಟವೆಸಗಿದರೂ ಕೊನೆಗೆ ಶಿಖಂಡಿಯ ಮುಂದೆ ಯುದ್ಧ ಮಾಡಲಾರದವರಾಗಿ, ಶರಶಯ್ಯೆಯಲ್ಲಿ ಒರಗುವರೆಂದು. ಯಾರೆಣಿಸಿದ್ದರು? ಧನುರ್ವಿದ್ಯಾ ವಿಶಾರದರಾದ ದ್ರೋಣಾಚಾರ್ಯರೇ ರಣರಂಗದಲ್ಲಿ ಆ ತೆರ ಮಡಿವರೆಂದು. ವಿಧಿಯು ಪ್ರತಿಕೂಲವೇ? ಏಕೆಂದರೆ ಭೀಷ್ಮ ಪಿತಾಮಹರೂ, ದ್ರೋಣಾಚಾರ್ಯರೂ, ಪಾಂಡವರ ಪಕ್ಷಪಾತಿಗಳೆಂಬುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಮನಃಪೂರ್ವಕ ಯುದ್ಧ ಮಾಡಿದರೆಂದು ಹೇಗೆ ಹೇಳುವುದು? ಕೌರವನ ಅನ್ನ ತಿಂದುದಕ್ಕೆ ಯುದ್ಧ ಮಾಡಿ ದೇಹ ತೆತ್ತರು. ಆದರೆ ಉಳಿದ ವೀರನೆಂದರೆ ಕರ್ಣನೊಬ್ಬನೆ. ಕೌರವ ತನ್ನ ಎಲ್ಲಾ ಆಶೆ ಆಕಾಂಕ್ಷೆಗಳ ಗೋಪುರವನ್ನು ಕರ್ಣನ ಭುಜಶೌರ್ಯದಲ್ಲಿ ರಚಿಸಿಕೊಂಡಿದ್ದಾನೆ. ನೋಡೋಣ. ನಾಳಿನ ಯುದ್ಧದಲ್ಲಿ ಕರ್ಣ ಸೇನಾಧಿಪತಿಯಾಗಿ ತನ್ನ ಸ್ವಾಮಿಯ ಋಣ ಹೇಗೆ ತೀರಿಸುವನೆಂದು—

(ಹೋಗುವನು)

ದೃಶ್ಯ—16

(ಶಲ್ಯನ ಶಿಬಿರ—ಯುದ್ಧ ಭೂಮಿ)

ಶಲ್ಯ: (ಚಿಂತಾಕ್ರಾಂತನಾಗಿ) ನಿದ್ದೆಯೇ ಬರಲೊಲ್ಲದು. ಇಂದಿಗೆ 16 ದಿನಗಳ ಘೋರ ಸಂಗ್ರಾಮ ನಡೆದರೂ ವಿಜಯಶ್ರೀ ಕೌರವನಿಗೆ ಒಲಿಯಲಿಲ್ಲ. ಭೀಷ್ಮಾಚಾರ್ಯರು ಶರಶಯ್ಯೆಯಲ್ಲಿ ಒರಗಿದರೆ ದ್ರೋಣಾಚಾರ್ಯರು ರಣರಂಗದಲ್ಲೇ ಪ್ರಾಣಾರ್ಪಣೆ ಗೈದರು.

(ಶಕುನಿ ಶಲ್ಯರ ಪ್ರವೇಶ)

ಕೌರವ: ಮಾವಾ, ಇಷ್ಟು ರಾತ್ರಿಯಾದರೂ ವಿಶ್ರಾಂತಿ ತೆಗೆದುಕೊಳ್ಳಲಿಲ್ಲವೇ? ದೇಹದಲ್ಲಿ ದಣಿವಿಲ್ಲವೇ, ಮಾವಾ.

ಶಲ್ಯ: ದಣಿವಿದ್ದರೂ ನಮ್ಮಂತಹ ವೀರರಿಗೆ ಅದು ಗಣ್ಯವಲ್ಲ. ಯುದ್ಧದ ವಿಚಾರವನ್ನೇ ಆಲೋಚಿಸುತಿದ್ದೆ. ನಿದ್ದೆ ಹತ್ತಲಿಲ್ಲ.

ಶಕುನಿ: ಕೌರವನಿಗೂ ತಮ್ಮದೇ ಚಿಂತೆ. ನಿನ್ನೆಯ ದಿನ ನೀವು ಬಹಳವಾಗಿ ಹೋರಾಡಿ ಬಹಳವಾದ ಪ್ರಶಂಸೆಯನ್ನು ಪಡೆದಿರುವಿರಿ. ನಮ್ಮ ಪಾಳೆಯದಲ್ಲಿ ಎಲ್ಲರ ಬಾಯಲ್ಲೂ ನಿಮ್ಮದೇ ಹೊಗಳಿಕೆ. ಏನು ಹೋರಾಟ ನಿಮ್ಮದು?

ಶಲ್ಯ: (ಉಬ್ಬಿ) ಅಹುದೇ? ಎಲ್ಲರೂ ನನ್ನ ಸಾಹಸವನ್ನು ಹೊಗಳು ವರೇ? ಸರಿ, ಸರಿ. ಅಂದರೆ ನಾನು ಹಾಗೆ ಹೋರಾಡಿದ್ದೇನೆ ನಿನ್ನೆ. ಅಶ್ವ ಪರೀಕ್ಷೆಯಲ್ಲಿ ಹಾಗೂ ಅದನ್ನು ಓಡಿಸುವಲ್ಲಿ ನಮಗೆ ವಿಶೇಷ ಅನುಭವವಾದ್ದರಿಂದ ನಾನು ಧನುರ್ಧಾರಿಯಾಗಿ ರಣ ರಂಗಕ್ಕೆ ಹೊಕ್ಕು ಮುಂದರಿದಾಗಲೇ ವೀರನಾದ ಪಾರ್ಥನು ನನ್ನನ್ನು ಎದುರಿಸಿದ. ಆತನು ನನ್ನ ಮೇಲೆ ಬಾಣ ಪ್ರಯೋಗಿ ಸುವುದರೊಳಗೆ, ನಾನು ಹೇಗೆ ತಪ್ಪಿಸಿಕೊಂಡೆನೆಂದರೆ ಅದೊಂದು ಮಹಾ ಚಮತ್ಕಾರ.

ಶಕುನಿ: ಚಮತ್ಕಾರವಲ್ಲ—ಸಾಹಸ.

ಶಲ್ಯ: ಅಹುದು, ಸಾಹಸ. ಮತ್ತೆ ಅವನ ಕಣ್ಣಿಗೇ ಬೀಳಲಿಲ್ಲ. ಅಷ್ಟರಲ್ಲಿ ಭೀಮ ಬಂದ. ಅವನು ನನ್ನನ್ನು ಸರಿಯಾಗಿ ನೋಡುವುದ ರೊಳಗೆ ನಾನು ಅಲ್ಲೇ ಸತ್ತು ಬಿದ್ದವನಂತೆ ನಟಿಸಿದೆ.

ಶಕುನಿ: ಅಹಹಾ, ಏನು ಸಾಹಸ ನಿಮ್ಮದು.

ಶಲ್ಯ: ಅಹುದು. ಸಾಹಸವೆ. ಭೀಮ ಏನೂ ಮಾಡಲಿಲ್ಲ. ಮುಂದೆ ನಾನು ವೀರಾವೇಶದ ರಭಸದಲ್ಲಿ ಮುನ್ನುಗ್ಗಿದಾಗಲೇ ದೃಷ್ಟ ದ್ಯುಮ್ನನು ಎದುರಾದ. ನಾನು ಏನು ಮಾಡಿದೆ? ಕೂಡಲೇ ರಥ ತಿರುಗಿಸಿದೆ. ಅವನಿಗೆ ನನ್ನನ್ನು ಬೆನ್ನಟ್ಟುವುದಕ್ಕೇ ಆಗಲಿಲ್ಲ. ಯಾವ ರಥಿಕನಿಂದಲೂ ನನ್ನನ್ನು ಏನೂ ಮಾಡಲಿಕ್ಕೂ ಆಗಲಿಲ್ಲ.

ಶಕುನಿ: ಅದೇ ವಿಷಯ ನಾನು ಹೇಳಿದ್ದು. ಬಹಳ ಭೀಕರವಾಗಿ ಹೋರಾ ಡಿದಿರೆಂದು. ಯಾರೂ ನಿಮ್ಮನ್ನು ನೋಯಿಸಲಿಲ್ಲ. ನೋಯಿಸು ಸುತ್ತಿದ್ದರೆ ನೀವೇ ಅವರನ್ನು ಬಿಡುವವರು?

ಶಲ್ಯ: ಅವರನ್ನಲ್ಲ. ಅವರ ತಾತ ಮುತ್ತಾತರನ್ನೂ ಬಿಡುತ್ತಿರಲಿಲ್ಲ. ಅದಿ ರಲಿ. ಈ ಅಪರಾತ್ರಿಯಲ್ಲಿ ಏನು ಬಂದೆ ಸುಯೋಧನಾ?

ಕೌರವ: ಅದೇ ಕರ್ಣನ ವಿಚಾರ.

ಶಲ್ಯ: ಏನು, ಕರ್ಣನ ವಿಚಾರ? ಎಷ್ಟೆಂದರೂ ಅವನು ಸೂತಪುತ್ರನಲ್ಲವೇ? ಅವನನ್ನು ನಂಬಿ ನೀನು ಕೆಟ್ಟೆ. ನಿನ್ನೆಯ ಯುದ್ಧದಲ್ಲಿ ಧರ್ಮ ರಾಯನಿಗೇನೋ ಸ್ವಲ್ಪ ನೋಯಿಸಿದ್ದಿರಬೇಕು. ಮತ್ತೇನೂ ಆಗಲಿಲ್ಲ ಅವನಿಂದ.

ಕೌರವ: ಅದು ಸರಿ. ಆದರೆ ಅವನಿಗೆ ಸರಿಯಾದ ಸಾರಥಿ ಸಿಗದೆ ಮೋಸ ವಾಯಿತು. ಮಾವಾ, ಶೌರ್ಯದಲ್ಲಿ ಕರ್ಣನು ಕಿರೀಟಿಗಿಂತ ಕೀಳಲ್ಲ. ಕೃಷ್ಣನ ಎದುರಿಗೆ ಸಾಮಾನ್ಯ ಸಾರಥಿ ಎಲ್ಲಿ ಸಾಕು? ಅವನಿಗೆ?

ಶಲ್ಯ: ಆದರೆ ನನ್ನ ಮುಂದೆ ಕರ್ಣನು ಏನೂ ಅಲ್ಲ.

ಶಕುನಿ: ಛೆ, ಛೆ. ನೀವೆಲ್ಲಿ? ಕರ್ಣನೆಲ್ಲಿ? ನಿಮ್ಮೊಳಗೆ ಸಾಮ್ಯತೆಯೇ ಅಲ್ಲ.

ಶಲ್ಯ: ಹಾಗಾದರೆ ಮತ್ತೇನು?

ಕೌರವ: ಮತ್ತೇನಿಲ್ಲ. ಮಾವಾ. ಕರ್ಣ ನಮ್ಮ ಸೇನಾಧಿಪತಿ ಆಗಿದ್ದರೂ, ಸರಿಯಾದ ಸಾರಥಿ ಇಲ್ಲದೆ ಸೋತಿದ್ದಾನೆ. ನೀವು ಅವನಿಗೆ ಸಾರಥಿಯಾದರೆ ಅವನು ಗೆಲ್ಲುತ್ತಾನೆ. ಅರ್ಥಾತ್ ನಾವೂ ಗೆಲ್ಲುತ್ತೇವೆ. ನೀವು ಕರ್ಣನಿಗೆ ಸಾರಥಿಯಾಗಬೇಕು ಮಾವಾ.

ಶಲ್ಯ: (ಕೋಪದಿಂದ) ಏನು ಹೇಳಿದೆ ಕೌರವ? ನಾನು ಕರ್ಣನಿಗೆ ಸಾರಥಿ ಆಗಬೇಕೆ? ನನ್ನನ್ನು ನೀನು ಏನೆಂದು ತಿಳಿದುಕೊಂಡೆ? ಮಾದ್ರ ದೇಶದ ಅಧಿಪತಿಯಾದ ನಾನು ಸೂತಕುಲದ ಕರ್ಣನಿಗೆ ಸಾರಥಿಯಾಗಬೇಕೆ? ನನ್ನ ಘನತೆ ಗೌರವಗಳನ್ನು ಗಮನಿಸದೆ ನೀನು ನನ್ನನ್ನು ಕರ್ಣನ ಸಾರಥಿಯಾಗಬೇಕೆಂದು ಹೇಳುವೆಯಲ್ಲಾ. ನಿನಗೇನು ಹೇಳಲಿ? ನಿನ್ನ ಪಕ್ಷ ಸೇರಿ ಸೋತೆ. ಬೇರೇನಾದರೂ ಇದ್ದರೆ ಹೇಳು—ಆದರೆ ಆ ಕರ್ಣನಿಗೆ ಮಾತ್ರ ನಾನು ಸಾರಥಿಯಾಗಲಾರೆ.

ಕೌರವ: ಮಾವಾ, ಈಗ ನನಗೆ ನೀವಲ್ಲದೆ ಮತ್ತಾರು ಸಹಾಯ ಮಾಡಬೇಕು ಮಾವಾ? ನೀವೇನು ಸಾಮಾನ್ಯರೆ? ಕೃಷ್ಣನ ಸಾರಥ್ಯವೇ ಅರ್ಜುನನ ಗೆಲುವಿಗೆ ಕಾರಣವಲ್ಲದೆ ಮತ್ತೇನಿಲ್ಲ, ಶ್ರೀ ಕೃಷ್ಣನಿಗೆ ಸರಿಸಾಟಿಯಾದ—ಸರಿಸಾಟಿಯಾದ ಏಕೆ? ಅದಕ್ಕಿಂತಲೂ ಮಿಗಿಲಾದ ಸಾರಥ್ಯ ನೀವು ಬಲ್ಲವರಲ್ಲವೇ? ನಿಮ್ಮ ಸಮ್ಮುಖದಲ್ಲಿ ಕೃಷ್ಣನೂ ಏನು ಮಹಾ?

ಶಲ್ಯ: ಹಾಗಾದರೆ ಕೃಷ್ಣನಿಗಿಂತಲೂ ಮಿಗಿಲಾದ ಸಾರಥಿ ನಾನೆಂಬುದು ನಿಮಗೆ ತಿಳಿದಿದೆ ಅಲ್ಲವೇ?

ಶಕುನಿ: ತಿಳಿಯದೆ? ಚೆನ್ನಾಗಿ ತಿಳಿದಿದೆ. ಅದ್ದರಿಂದಲೇ ನಿಮ್ಮ ಬಳಿ ಬಂದಿದ್ದೇವೆ.

ಕೌರವ: ಕರ್ಣನೂ ಹೇಳಿದ ನಿಮ್ಮಷ್ಟು ಚತುರ ಸಾರಥಿ, ಕೃಷ್ಣನೂ ಅಲ್ಲ ವೆಂದು. ಆದ್ದರಿಂದ ಕರ್ಣನು ಏನೇ ಇರಲಿ, ಯಾರೇ ಇರಲಿ, ಅವನು ಯುದ್ಧ ಮಾಡುವುದು ನನಗೋಸ್ಕರ. ನೀವಾದರೂ ಸಾರಥಿ ಯಾಗುವುದು ನನಗೋಸ್ಕರವೆ. ಹೀಗಿರಲು ಸಹಾಯ ಮಾಡಿ ಮಾವ.

ಶಲ್ಯ: ಕರ್ಣನೂ ಹೇಳಿದನೇ? ನಾನೊಬ್ಬ ಮಹಾ ಸಾರಥಿ ಎಂದು. ಹೇಳಲೇ ಬೇಕು. ಹೇಳಲೇ ಬೇಕು. ಯಾರಿದ್ದಾರೆ ಈ ಜಗತ್ತಿನಲ್ಲಿ ನನ್ನಷ್ಟು ಅಶ್ವಹೃದಯ ಬಲ್ಲವರು. ನಾನು ಸಾರಥಿಯಾದರೆ ಯುದ್ಧದಲ್ಲಿ ಜಯವು ಖಂಡಿತವೆ. ಯಾರು ಅಲ್ಲವೆನ್ನುವವರು? ನೀನೋ? ಶಕುನಿಯೋ?

ಶಕುನಿ: ಛೆ; ಛೆ, ನಾವಿಬ್ಬರೂ ಅಲ್ಲ—ಮಾತ್ರವಲ್ಲ ಯಾರೂ ಅಲ್ಲವೆನ್ನುವವರಲ್ಲ.

ಕೌರವ: ಅಹುದು ಮಾವ.

ಶಲ್ಯ: ಆಯಿತು ಕೌರವಾ, ಒಪ್ಪಿದೆ. ನಿನಗೋಸ್ಕರ ಒಪ್ಪಿದೆ. ಆದರೆ ಒಂದು ಮಾತು. ನೋಡು, ನಾನು ಮಾದ್ರ ದೇಶದ ಅರಸ. ನಾನು ಯಾವಾಗಲೂ ಅರಸನೆ. ಆದ್ದರಿಂದ ನಾನು ಕರ್ಣನಿಗೆ ಸಾರಥಿಯಾದರೂ ನನ್ನ ಮಾತಿಗೆ ಅವನು ವಿರೋಧವಾಗಿ ಹೋಗ ಬಾರದು. ಹೋದರೆ ನಾನು ಅಲ್ಲೇ ಅಶ್ವ ವಾಘೆಗಳ ಬಿಸುಟು ಬರುವೆ. ತಿಳಿಯಿತಲ್ಲವೇ?

ಕೌರವ: ಕರ್ಣ ಅಂಥವನಲ್ಲ ಮಾವ—ನನಗಾಗಿ ಯಾವ ತ್ಯಾಗಕ್ಕೂ ಅವನು ಸಿದ್ಧನೆ. ನೀವಂತೂ ಅವನಿಗೆ ಸಾರಥಿಯಾದರೆ ಯುದ್ಧದಲ್ಲಿ ಖಂಡಿತ ಜಯ ಹೊಂದುವ.

ಶಲ್ಯ: ಹಾಗಾದರೆ ನಾನೊಬ್ಬ ಮಹಾ ಸಾರಥಿ. ಕೃಷ್ಣನಿಗಿಂತಲೂ ಮಿಗಿಲಾದ ಸಾರಥಿ ಎಂಬುದು ಎಲ್ಲರಿಗೂ ತಿಳಿದಿದೆ. ಅಲ್ಲವೇ?

ಕರ್ಣನಿಗೂ ತಿಳಿದಿತ್ತಲ್ಲವೇ? ನಿನಗೂ ತಿಳಿದಿತ್ತೆ? ಶಕುನಿಗೆ ಯಾವಾಗ ತಿಳಿದಿತ್ತು?

ಕೌರವ: ನಮಗೆಲ್ಲರಿಗೂ ಎಂದೋ ತಿಳಿದಿತ್ತು. ಆದರೆ ಅವಕಾಶ ಬಂದಿರಲಿಲ್ಲ. ಈಗ ಬಂದಿದೆ. ಆದ್ದರಿಂದಲೇ ನಿಮ್ಮಲ್ಲಿ ಬಂದು ನಿಮ್ಮ ಸಹಾಯವನ್ನು ಯಾಚಿಸಿದೆ.

ಶಲ್ಯ: ಒಳ್ಳೆಯದು. ಹೋಗಿರಿ. ನಾಳಿನ ಯುದ್ಧವನ್ನು ನೋಡಿರಿ. ಕರ್ಣನಿಂದ ನಾನು ಹೇಗೆ ಯುದ್ಧ ಮಾಡಿಸುವೆನೆಂದು.

ಕೌರವ: ಆಯಿತು ಮಾವಾ. ತುಂಬಾ ಉಪಕಾರವಾಯಿತು. ನಮಸ್ಕಾರ.

— ತೆರೆ —

ದೃಶ್ಯ—17. ಧರ್ಮರಾಯನ ಶಿಬಿರ.

(ಯುದ್ಧದಲ್ಲಿ ಗಾಯಹೊಂದಿದ ಧರ್ಮರಾಯನನ್ನು ಎತ್ತಿ ತರುವರು)

ಧರ್ಮ: ಅಯ್ಯೋ, ಈ ವೇದನೆ ಸಹಿಸಲಾರೆ, ಸಾಯುತಿದ್ದರೇ ಚೆನ್ನಾಗಿತ್ತು ಭೀಮಾ, ನಕುಲ, ಸಹದೇವರೇ ಅರ್ಜುನನೆಲ್ಲಿ? ಕೃಷ್ಣನೆಲ್ಲಿ? ನಾನೊಮ್ಮೆ ಅವರನ್ನು ನೋಡುವೆ.

ಭೀಮ: ಅಣ್ಣಾ, ಕೃಷ್ಣಾರ್ಜುನರು ಈಗಾಗಲೇ ಸಮಸಪ್ತಕರೊಡನೆ ಯುದ್ಧವೆಸಗಿ, ಕರ್ಣನೊಡನೆ ಹೋರಾಡುತ್ತಿರಬಹುದು.

ಧರ್ಮ: ಅಯ್ಯೋ, ಆ ಕರ್ಣನ ಶೌರ್ಯವೇ? ಇಷ್ಟು ದಿನದ ಯುದ್ಧದಲ್ಲಿ ನನ್ನನ್ನೀರೀತಿ ಯಾವ ರಥಿಕನೂ ನೋಯಿಸಲಿಲ್ಲ. ಆದರೆ ಆ ಕರ್ಣ ನನ್ನ ಪ್ರಾಣವನ್ನು ತೆಗೆಯದೆ ಏಕೆ ಬಿಟ್ಟನೋ? ಅಯ್ಯೋ… ಅಯ್ಯೋ ಸಹಿಸಲಾರೆ. ಸಹಿಸಲಾರೆ……ಆ ಕರ್ಣನನ್ನು ಹೇಗೆ ಗೆಲ್ಲುವುದೋ ಗೊತ್ತಾಗುವುದಿಲ್ಲ.

ಅರ್ಜುನ: ಹೇಗಿರುವಿ, ಅಣ್ಣಾ? ತುಂಬಾ ವೇದನೆಯೇ?

ಧರ್ಮ. ಬಂದೆಯಾ ಅರ್ಜುನಾ, ಕೃಷ್ಣನೂ ಬಂದನೇ? ಆ ಕರ್ಣನನ್ನು ಗೆದ್ದು ಬಂದೆಯಲ್ಲವೇ? ಚೆನ್ನಾಯಿತು. ಚೆನ್ನಾಯಿತು. ಅವನಿಗೆ— ಅವನಿಗೆ ಹಾಗೆಯೇ ಆಗಬೇಕು. ಅಬ್ಬಾ, ಏನು ಸಾಹಸ ಅವನದು. ಅವನು ನನ್ನನ್ನು ಎಷ್ಟು ನೋಯಿಸಿದ ಗೊತ್ತೇ? ಇಷ್ಟು ದಿನಗಳ ಯುದ್ಧದಲ್ಲಿ ಅವನಂತೆ ಯುದ್ಧ ಮಾಡಿದವರನ್ನು ನಾನು ಬೇರೆ ಯಾರನ್ನೂ ಕಂಡದ್ದಿಲ್ಲ...ಹಾ......ಮರ್ಮ ಸ್ಥಾನಗಳಿಗೇ ಬಾಣ ಹೊಡೆದಿದ್ದಾನೆ. ಯಾಕೋ, ಪ್ರಾಣ ಮಾತ್ರ ತೆಗೆಯಲಿಲ್ಲ. ಆ ಕರ್ಣನನ್ನು ಯಾವ ಶರದಿಂದ ಸಂಹರಿಸಿದೆ, ಅರ್ಜುನಾ.......?

ಅರ್ಜುನ: ಅಣ್ಣಾ, ಸಮಸಪ್ತಕರನ್ನು ಕೊಂದು ಹಿಂತಿರುಗುವಾಗ ನಿನಗೂ ಕರ್ಣನಿಗೂ ಮಹಾ ಯುದ್ಧವಾಯಿತೆಂದು ಕೇಳಿದೆ. ಮಾತ್ರವಲ್ಲ, ಆ ಯುದ್ಧದಲ್ಲಿ ಕರ್ಣನು ನಿನಗೆ ತುಂಬಾ ಘಾಸಿ ಮಾಡಿದುದರಿಂದ ನಿನ್ನನ್ನು ಶುಶ್ರೂಷೆಗಾಗಿ ಶಿಬಿರಕ್ಕೆ ಕೊಂಡೊಯ್ದರೆಂದು ಸುದ್ದಿ ಕೇಳಿ ನಿನ್ನನ್ನೊಮ್ಮೆ ನೋಡಿ ಹೋಗೋಣವೆಂದು ಬಂದೆ. ನೀನು ಚೇತರಿಸಿಕೊಂಡಿರುವೆಯಷ್ಟೆ? ನನ್ನನ್ನು ಆಶೀರ್ವದಿಸು. ನಿನ್ನನ್ನು ನೋಯಿಸಿದ ಆ ಕರ್ಣನನ್ನು ನಾನು ಈಗಲೇ ಕೊಂದು ಬರುವೆನು.

ಧರ್ಮ: ಏನು? ಕರ್ಣನನ್ನು ನೀನು ಇದಿರಿಸಲಿಲ್ಲವೇ? ಕರ್ಣ ಇನ್ನೂ ಯುದ್ಧದಲ್ಲಿ ಸಾಯಲಿಲ್ಲವೇ?....ಇಲ್ಲ...ಇಲ್ಲ...ಕರ್ಣನ ಶೌರ್ಯಕ್ಕೆ ನೀನೂ ಹೆದರಿದೆ. ಅವನನ್ನು ಎದುರಿಸುವ ಧೈರ್ಯ ನಿನ್ನಲ್ಲೆಲ್ಲಿದೆ?

ಅರ್ಜುನ: ಇಲ್ಲಣ್ಣಾ, ನಿನ್ನ ಆಶೀರ್ವಾದ ಬಲದಿಂದ ನಾನೀಗಲೇ ಯುದ್ಧ ರಂಗಕ್ಕೆ ತೆರಳಿ, ಕರ್ಣನನ್ನು ಕೊಂದೇ ಬರುವೆ.

ಧರ್ಮ: ನೀನು ಕೊಲ್ಲಲಾರೆ....ನೀನು ಕೊಲ್ಲಲಾರೆ....ನಿಮ್ಮ ಬಲವನ್ನೆಲ್ಲ ನಂಬಿ ನಾನು ಮೋಸಹೋದೆ. ಇಲ್ಲವಾದರೆ, ನನಗೀಗತಿ ಬರುತಿತ್ತೇ? ನೀನು ಕರ್ಣನಿಗೆ ಬೆನ್ನು ತೋರಿಸಿ ಇಲ್ಲಿಗೆ ಬರುತಿದ್ದೆಯೋ? ಬೇಡ, ಅರ್ಜುನಾ ಬೇಡ. ನೀನು ಯುದ್ಧ ಮಾಡುವುದು ಬೇಡ. ನಿನ್ನ ಆ ಗಾಂಢೀವವನ್ನು ಸುಡು.

ಅರ್ಜುನ: ಹಾ, ಅಣ್ಣಾ......ಎಂತಹ ದುರ್ವಾಕ್ಯವ ನುಡಿದೆ. ಯುದ್ಧದಲ್ಲಿ ಕರ್ಣನಿಂದ ನಿನಗಾದ ನೋವ ಸಹಿಸಲಾರದೆ. ನನ್ನನ್ನು ಹಳಿದುದು ಮಾತ್ರವಲ್ಲ, ನನ್ನೀ ಪವಿತ್ರವಾದ ಗಾಂಢೀವವನ್ನೂ ಜರೆದೆಯಲ್ಲವೇ? ಅಣ್ಣಾ; ಎಂತಹ ಅವಿವೇಕತನ ಮಾಡಿದೆ. ನಿನ್ನನ್ನು ಪ್ರಾಣಕ್ಕಿಂತ ಅಧಿಕವಾಗಿ ಪ್ರೀತಿಸುತ್ತಿದ್ದ ನಾನು, ನಿನ್ನ ನೆರಳನ್ನೇ ಈ ವರೆಗೆ ಚಾಚೂ ತಪ್ಪದೆ ಹಿಂಬಾಲಿಸಿದ ನಾನು, ಯುದ್ಧದಲ್ಲಿ ವೇದನೆಗೊಂಡ ನಿನ್ನ ಯೋಗಕ್ಷೇಮ ವಿಚಾರಿಸಲು ನಿನ್ನಲ್ಲಿಗೆ ಬಂದಿದ್ದರೆ—ನೀನು ಬಾಯಿಗೆ ಬಂದಂತೆ ಮಾತಾಡಿ ನನ್ನ ಅಮೋಘವಾದ ಗಾಂಢೀವವನ್ನೂ ಹಳಿದೆಯಲ್ಲವೇ? ತಿಳಿಯದೆ ನಿನಗೆ? ಗಾಂಡೀವವನ್ನು ನಿಂದಿಸಿದವರ ಶಿರಚ್ಛೇದನ ಮಾಡುವೆನೆಂದು ತೊಟ್ಟುಕೊಂಡ ಪ್ರತಿಜ್ಞೆ. ಕ್ಷತ್ರಿಯನಾಗಿ ಈಗ ನಾನು ಆ ಪ್ರತಿಜ್ಞೆಯನ್ನು ಪಾಲಿಸದಿರಲೆಂತು ಸಾಧ್ಯ? ನನ್ನ ಈ ಪ್ರತಿಜ್ಞೆಯಿಂದ ನಿನ್ನನ್ನು ಯಾರು ರಕ್ಷಿಸುವರೋ ರಕ್ಷಿಸಿಕೊಳ್ಳಲಿ. ನೀನು ನನ್ನ ಅಣ್ಣನಾದರೂ, ನಿನಗಿಂತ ಮೇಲು ನನಗೆ ನನ್ನ ಪ್ರತಿಜ್ಞೆ. ಇಂದೀಗ ನಿನ್ನ ಶಿರಚ್ಛೇದನ ಮಾಡುವುದೇ ನನ್ನ ಕರ್ತವ್ಯ.

ಭೀಮ: ....ಏ ಮೂರ್ಖ, ನಿನ್ನ ಪ್ರತಿಜ್ಞೆಗೆ ಬೆಂಕಿ ಹಾಕು ಅಣ್ಣನ ಮೇಲೆ ಕೈಮಾಡಿದರೆ ಜೋಕೆ, ನಿನ್ನ ಶಿರಸ್ಸನ್ನೇ ಪುಡಿ ಪುಡಿ ಮಾಡುವೆನು. ಏನೆಂದು ತಿಳಿದುಕೊಂಡಿರುವೆ? ಗಾಯಗಳಿಂದ ಅತಿಯಾಗಿ ನೊಂದ ನಮ್ಮಣ್ಣ ಸಂಕಟ ಸಹಿಸಲಾರದೆ, ಪ್ರಜ್ಞಾರಹಿತನಾಗಿ ಏನಾದರೂ ಹೇಳಿದ್ದರೆ, ನೀನು ನಿನ್ನ ಪ್ರತಿಜ್ಞೆಯೆಂದು ಅಣ್ಣನ ತಲೆಕಡಿಯಲು ಕತ್ತಿ ಎತ್ತಿದೆಯಲ್ಲವೇ?

ಅರ್ಜುನ: ಭೀಮಾ, ಅಣ್ಣನಾದ ಧರ್ಮಜ ಹೇಗೂ ಹೇಳಿರಬಹುದು. ನನ್ನನ್ನೆಷ್ಟು ನಿಂದಿಸಿದ್ದರೂ ನಾನು ಸಹಿಸುತ್ತಿದ್ದೆ. ಆದರೆ ನಾನು ಮಾಡಿಕೊಂಡ ಪ್ರತಿಜ್ಞೆ ನಿನಗೂ ಗೊತ್ತಿದೆ. ನನಗೆ ನನ್ನ ಪ್ರತಿಜ್ಞೆ ದೊಡ್ಡದು. ಅದನ್ನು ಕಾಪಾಡುವುದರಲ್ಲಿ ಎದುರಾಗುವ ಹರಿಹರ ಬ್ರಹ್ಮಾದಿಗಳೇ ಬಂದರೂ ಬಿಡುವವನಲ್ಲ. ಆದ್ದರಿಂದ

ತಡೆಯದಿರಿ. ತಡೆದಿರೆಂದರೆ ನಿಮ್ಮಗಳ ತಲೆಯೂ ನನ್ನ ಕತ್ತಿಗೆ ತುತ್ತಾಗಬಹುದು.

ಭೀಮ: ಥೂ ಹೇಡಿ, ನಾಲಿಗೆಯ ಬಿಗಿ ಹಿಡಿ. ಅಣ್ಣನ ಪ್ರಾಣದ ಮುಂದೆ ನಮ್ಮದೇನು ಮಹಾ? ಅಣ್ಣ ಸತ್ತು ನಾವು ಬದುಕುವುದೇ? ಇದೋ, ಅಣ್ಣನ ರಕ್ಷಣೆಗಾಗಿ ನಮ್ಮ ಮೂವರ ಪ್ರಾಣಗಳೂ ಪಣವಿದೆ. ತಿಳಿಯಿತೇ ನಿನಗೆ? ತ್ರಾಣವಿದ್ದರೆ ಮೊದಲು ನಮ್ಮ ಪ್ರಾಣಗಳನ್ನು ತೆಗೆದು ಮತ್ತೆ ಅಣ್ಣನ ತಲೆ ಕತ್ತರಿಸು.

ಅರ್ಜುನ: ಪ್ರತಿಜ್ಞಾ ಪಾಲನೆಯೇ ನನ್ನ ಪರಮೋದ್ದೇಶ–ಆದ್ದರಿಂದ ನನಗೆ ಬಂಧುತ್ವದ ಬಂಧನವಿಲ್ಲ. ನೀವು ಅಡ್ಡ ಬರುವಿರಾದರೆ, ನಿಮ್ಮನ್ನು ಎದುರಿಸದೆ ನನಗೆ ಗತ್ಯಂತರವಿಲ್ಲ. ಸಿದ್ಧರಾಗಿ–ಕೃಷ್ಣಾರ್ಪಣಮಸ್ತು.

ಕೃಷ್ಣ: (ಪ್ರವೇಶಿಸಿ) ನಿಮ್ಮ ಹೋರಾಟ ನನಗೆ ಅರ್ಪಿತವೇ? ಛೆ, ಛೆ, ಎಂತಹ ಅನ್ಯಾಯ? ಎಂತಹ ಅವಿವೇಕತನ? ಏನಿದು ಅರ್ಜುನಾ?

ಅರ್ಜುನ: ಕೃಷ್ಣಾ, ಅಣ್ಣನಾದ ಧರ್ಮಜನು ನನ್ನ ಗಾಂಢೀವವನ್ನು ಜರೆದ ಈ ವಿಷಮ ಪರಿಸ್ಥಿತಿಯಲ್ಲಿ ನನ್ನ ಪ್ರತಿಜ್ಞಾಪಾಲನೆಯ ಹೊರತು ಬೇರಾವ ಪಥವನ್ನು ನಾನು ಅನುಸರಿಸಲಿ?

ಕೃಷ್ಣ: ನಿನ್ನ ಪ್ರತಿಜ್ಞಾಪಾಲನೆಗೆ, ಧರ್ಮಸಮ್ಮತವಾದ—ಶಾಸ್ತ್ರ ಸಮ್ಮತವಾದ–ಬೇರೆ ಮಾರ್ಗವಿರುವಾಗ, ಅದನ್ನೇ ಅನುಸರಿಸಬಹುದಷ್ಟೆ?

ಅರ್ಜುನ: ಅದು ನಿನ್ನ ಮುಖದಿಂದ ಬಂದರೆ ನನಗೆ ಮಾನ್ಯ. ಅಂತೂ ನನ್ನ ಪ್ರತಿಜ್ಞೆಯನ್ನು ಪೂರೈಸುವುದೇ ನನ್ನ ಧರ್ಮ.

ಕೃಷ್ಣ: ಪಾರ್ಥಾ, ಸತ್ಯವಂತರಾದ ಧರ್ಮಾತ್ಮರಿಗೆ—ಮಾನವಂತರಿಗೆ ಅವರ ತೇಜೋವಧೆ ಮಾಡುವುದೆಂದರೆ ಅವರನ್ನು ಕೊಂದಂತೆಯೇ. ಏಕೆ, ಅದಕ್ಕಿಂತಲೂ ಮಹತ್ತರವಾದುದು. ಆದ್ದರಿಂದ ಧರ್ಮರಾಯನಂತಹ ಮಾನವಂತನ ತೇಜೋವಧೆ ನೀನು ಮಾಡಿದಿಯೆಂದರೆ, ಅವನನ್ನು ವಧಿಸಿದಂತೆಯೇ ಆಗುವುದು.

ಅರ್ಜುನ: ನಿನ್ನ ಮಾತುಗಳೇ ನನಗೆ ವೇದವಾಕ್ಯ—ಅನುಗ್ರಹೀತನಾದೆನು. ನೀನಂದಂತೆಯೇ ನನ್ನಣ್ಣನ ತೇಜೋವಧೆಯನ್ನು ಮಾಡಿ, ನನ್ನ ಪ್ರತಿಜ್ಞೆಯನ್ನು ಪೂರೈಸುವೆನು.

—ತೆರೆ —

ಯುದ್ಧ ಭೂಮಿ—18 ದೃಶ್ಯ.

ಕರ್ಣ: (ರಥಾರೂಢನಾಗಿ) ಮಾದ್ರೇಶ್ವರ, ಕರ್ಣನ ಬಾಳಿನಲ್ಲಿ ಬಂದಂತಹ ಈ ದಿನ ಹಿಂದೆ ಬಂದುದಿಲ್ಲ. ಮುಂದೆ ಬರುವಂತಹದಲ್ಲ. ಈ ಹಿಂದೆ ನನ್ನನ್ನು ಹೀನ ವಂಶಜ, ಸೂತ ಕುಮಾರನೆಂದು ಅವಹೇಳನ ಗೈದವರು ಕಾಣಬೇಕು—ನನ್ನ ಇಂದಿನ ಕಾಳಗವ. ಈ ಧರಿತ್ರಿಯಲ್ಲಿ ಧನಂಜಯನೊಬ್ಬನೇ ಅದ್ವಿತೀಯ ಧನುರ್ಧಾರಿ ಎಂದು ಸಾರಿದವರು ಕಾಣಬೇಕು—ಇಂದು ನಾನೆಸಗುವ ರಣಮಹೋತ್ಸವ. ನರನ ಶರಹತಿಗೆನ್ನ ತನು ಜರ್ಝರಿತವಾಗುವುದು. ನನ್ನ ಬಾಣಗಳಲ್ಲಿ ಬಿರಿಯುವುದು ಪಾರ್ಥನ ಪೌರುಷ. ಕೂರಂಬುಗಳು ಕುತ್ತಿ, ಮೈ ಸುರಿಸುವ ರುಧಿರ ಧಾರೆಯಲಿ ಮಿಂದು ಮಾಯಿಸಿಕೊಳ್ಳುವೆವು. ಕರುಳ ಮಾಲೆಯ ತೊಟ್ಟು ರಣಾಭಿಷೇಕವಂಗೈಸಿಕೊಳ್ಳುವೆವು. ಕೈದಣಿಯೆ ಜೊಯ್ದಾಡಿ, ಬಾಯ್ದಣಿಯೆ ಮೂದಲಿಸಿ, ಮೈದಣಿಯೆ ಗಾಯ್ಗೊಂಡು ಶರಮಾಲೆಯಿಂಶೋಭಿಸಿ, ರಕ್ತಾಂಬರದಿ ನಾನಿರುವುದ ಕುರುಪತಿ ಕಂಡನಾದರೆ ನನ್ನ ಬಾಳೇ ಧನ್ಯ—ಧನ್ಯ ನಾನೆನುವೆ. ತೋರೆನಗೆ ನರನ—ಎಲ್ಲಿಹನವ?

ಶಲ್ಯ: ಕರ್ಣಾ, ಮೈ ಉಬ್ಬಿನಲಿ ಕೊಬ್ಬಿದ ನುಡಿಗಳು ಬೇಡ—ತೋರುವೆನು ನಿನಗೆ, ನಿನ್ನ ಶತ್ರು ಫಲುಗುಣನ. ಶರವೇಗದಿ ರಥವನು ಚಲಿಸಿ ತಂದಿಹೆನಿದೋ ಪಾರ್ಥನ ಮುಂದೆ, ನೋಡತ್ತ.

ಕರ್ಣ: ಶಹಭಾಷ್ ಕಲಿ ಶಲ್ಯ—ಮಹಾಸಾರಥಿಯೋ ನೀನಹುದು. ನಿನ್ನ ಸಾರಥಿತನದಿಂದ ನನ್ನ ಸಾಮರ್ಥ್ಯವೂ ದ್ವಿಗುಣಿತವಾಗಿದೆ. ನೋಡು, ಸ್ವಾಮಿಯಾದ ಸುಯೋಧನನಿಗೋಸುಗ ರಣರಂಗವಲ್ಲಿ ನಾನು ಹೇಗೆ ಸವ್ಯಸಾಚಿಯೊಡನೆ ಸೆಣಸಾಡುವೆನೆಂದು.... ಎಲವೋ ಪಾರ್ಥ ಅಂದು ದ್ರೋಣಾಚಾರ್ಯರು ಬಿಲ್ವಿದ್ಯೆಯಲಿ ನೀನೇ ಅದ್ವಿತೀಯನೆಂದು ಘೋಷಿಸಿದಾಗ, ಕ್ಷಾತ್ರ ವೀರನಂತೆ ನಾನು ಮುಂದೆ ಬಂದು ನಿನಗೆ ಪಂಥವನ್ನೊಡ್ಡಿದೆ. ಆದರೆ ಯಾವುದೋ ನೆಪದಿಂದ

ನನಗೆ ಅವಕಾಶವನ್ನೀಯುಲಿಲ್ಲ. ಇಂದು ಅದೇ ಪಂಥವನ್ನು ಈ ಕುರುಕ್ಷೇತ್ರದಲ್ಲಿ ಮುಂದೊಡ್ಡಿದ್ದೇನೆ.

ಅರ್ಜುನ: ಕರ್ಣಾ, ನಾನಾದರೂ ಅದೇ ಅವಕಾಶವನ್ನು ಎದುರುನೋಡು ತಿದ್ದೆ. ದೈವಪ್ರೇರಣೆಯಿಂದ ಇಂದು ಒದಗಿದೆ. ನಿನ್ನ ಬತ್ತಳಿಕೆ ಯಲ್ಲಿ ಯಾವ ಮಹಾಸ್ತ್ರಗಳಿವೆಯೋ ಅವೆಲ್ಲವನ್ನೂ ಹೊರತೆಗೆ.

ಕರ್ಣ: ಗುರುದೇವ ಪರಶುರಾಮದತ್ತವಾದ ಈ ವಿಜಯಧನುಸ್ಸಿಗೆ ಹೂಡಿರುವ ಶರಾಘಾತವನ್ನು ಎದುರಿಸು. (ಬಾಣ ಬಿಡುವನು)

ಅರ್ಜುನ. ಅಗ್ನಿದತ್ತವಾದ ಈ ಗಾಂಢೀವವು ನಿನ್ನ ಶರಾಘಾತವನ್ನು ಹತ್ತಿಕ್ಕು ವುದು ಮಾತ್ರವಲ್ಲ, ನಿನ್ನ ಮೇಲೆ ಬಾಣಗಳ ಮಳೆಯನ್ನೇ ಸುರಿಸು ವುದು. (ಬಾಣ ಬಿಡುವನು)

ಕರ್ಣ: ಮೆಚ್ಚಿದೆನು, ಪಾರ್ಥ ಮೆಚ್ಚಿದೆನು. ಆದರೆ ಕರ್ಣನ ಸಾಹಸ ಇಷ್ಟೇ ಅಲ್ಲ, ನಿನ್ನ ಕತ್ತನ್ನು ಕತ್ತರಿಸಿ, ಸೃಷ್ಟಿಯನ್ನೇ ತನ್ನ ವಿಷ ಜ್ವಾಲೆಯಿಂದ ಸುಟ್ಟು ಭಸ್ಮ ಮಾಡಬಲ್ಲ ಈ ನನ್ನ ಸರ್ಪಾಸ್ತ್ರವನ್ನು ನಿನ್ನ ಯಾವ ಶರವು ಸಂಧಿಸುವುದೋ ನೋಡುವೆನು.

ಶಲ್ಯ: ಭಲಾ, ಕರ್ಣಾ ನೀನೊಬ್ಬ ಮಹಾರಥಿಕನೇ ಹೌದು. ಹಿಂದೆ ಹೀನ ವಂಶಜನೆಂದು ಹಳಿದ ನನ್ನ ಎಲ್ಲ ಮಾತುಗಳನ್ನೂ ಹಿಂತೆಗೆದಿದ್ದೇನೆ. ಮಹಾಶೂರನಯ್ಯ ನೀನು. ನಿನ್ನಂತಹ ಪರಾಕ್ರಮಶಾಲಿ ಇನ್ನೊಬ್ಬ ನಿಲ್ಲವೆಂದರೂ ತಪ್ಪಲ್ಲ. ನಿನ್ನಂತಹ ವೀರನನ್ನು ಮಿತ್ರನಾಗಿ ಪಡೆದ ಕೌರವನು ಧನ್ಯನೇ ಸರಿ. ಕೌರವೇಶ್ವರನ ಭಾಗ್ಯದ ಬಾಗಿಲು ತೆರೆ ದಿದೆ. ಈ ನಿನ್ನ ಅಪೂರ್ವವಾದ ಶರಾಘಾತದಿಂದ ಕಿರೀಟಿಯು ಪಾರಾಗುವುದು ಅಸಾಧ್ಯ. ಆದರೆ....

ಕರ್ಣ: ಏನು ಸಂದೇಹ?

ಶಲ್ಯ: ಸಂದೇಹವೇನೆಂದು ಹೇಳುವೆ ಕೇಳು. ನೀನಿಟ್ಟ ಗುರಿ ಕಂಠಸದೃಶ ವಾಗಿದೆ. ಆ ಗುರಿಯನ್ನು ಬದಲಿಸಿ ವಕ್ಷಸ್ಥಳಕ್ಕೆ ಇಟ್ಟೆಯೆಂದಾದರೆ, ನಿನ್ನ ಈ ಮಹಾಸ್ತ್ರ ವ್ಯರ್ಥವಾಗುವ ಪ್ರಮೇಯವೇ ಇಲ್ಲ.

ಕರ್ಣ: ಅದೇಕೆ ಹಾಗನ್ನುವಿ ಮಾದ್ರೇಶ.

ಶಲ್ಯ: ನಾನು ಅಶ್ವ ಹೃದಯ ಬಲ್ಲವನು. ಸಾರಥ್ಯದಲ್ಲಿ ಮಹಾ ಅನುಭವಿಯು. ಕೃಷ್ಣನು ನನ್ನಷ್ಟೆ ಪರಿಣತನೊ ನಾನರಿಯೆ. ಆದರೆ ನನ್ನಂತಹ ಚತುರ ಸಾರಥಿಯು ಕಂಠಕ್ಕಿಟ್ಟ ಗುರಿಯನ್ನು ರಥಾಶ್ವಗಳನ್ನು ಅಂಬೆಗಾಲಿಕ್ಕಿಸಿ ತಪ್ಪಿಸಲು ಸಾಧ್ಯ. ಆಗ ಆ ಗುರಿ ಕಂಠವನ್ನು ಕತ್ತರಿಸದೆ ಕಿರೀಟವನ್ನು ಮಾತ್ರ ಕೆಡಹಬಹುದು. ಅಷ್ಟೆ. ಆದರೆ ಗುರಿಯನ್ನು ವಕ್ಷಸ್ಥಳಕ್ಕಿಟ್ಟರೆ, ಹಾಗೆ ಮಾಡಿದರೂ ಕಂಠವನ್ನು ಛೇದಿಸುವುದರಲ್ಲಿ ಅನುಮಾನವಿಲ್ಲ. ಆದ್ದರಿಂದ ಈಗ ನೀನಿಟ್ಟ ಗುರಿಯನ್ನು ತಪ್ಪಿಸಿ, ಎದೆಗಿಡು ಅಂದೆ.

ಕರ್ಣ: ಮಾದ್ರಾಧಿಪ, ನೀನನ್ನುವುದೇನೋ ಸರಿಯಿರಬಹುದು. ಆದರೆ ನಾನು ಮಾತ್ರ ಇಟ್ಟಂತಹ ಈ ಗುರಿಯನ್ನು ತಪ್ಪಿಸಲಾರೆ.

ಶಲ್ಯ: ಏಕೆ, ತಪ್ಪಿಸಲಾರೆ.

ಕರ್ಣ: ತಿಳಿದಿಲ್ಲವೇ ನೀನು. ಕರ್ಣನಿಗೆ ಒಂದೇ ನಾಲಿಗೆ. ಒಂದೇ ಗುರಿ. ಈ ವರೆಗೂ ಇಟ್ಟ ಗುರಿ ಬದಲಿಸಿದವನಲ್ಲ. ಕೊಟ್ಟ ಮಾತು ತಪ್ಪಿದವನಲ್ಲ.

ಶಲ್ಯ: ತೊಟ್ಟ ಶರ ವ್ಯರ್ಥವಾದರೆ.......?

ಕರ್ಣ: ಬತ್ತಳಿಕೆ ಬರಿದಾಗಿಲ್ಲ. ಭುಜಬಲ ಕುಂದಿಲ್ಲ. ತೊಟ್ಟ ಶರ ವ್ಯರ್ಥವಾದರೂ ವ್ಯಥೆಯಿಲ್ಲ.

ಶಲ್ಯ: ನನ್ನ ಮಾತು ಮೀರಿ ನಡೆದರೆ ನಿನಗೆ ಜಯವಿಲ್ಲ.

ಕರ್ಣ: ಕರ್ಣನ ಜಯಾಪಜಯ ಕರ್ಣನ ಭುಜಶೌರ್ಯವನ್ನೇ ಅವಲಂಬಿಸಿದೆ.

ಶಲ್ಯ: ಥೂ ಮೂರ್ಖ, ನಿನ್ನನ್ನು ನಂಬಿ ಸುಯೋಧನ ಕೆಟ್ಟ—ದ್ರೋಹಿ. ನಿನ್ನ ಮತ್ತು ಸುಯೋಧನನ ಶ್ರೇಯಸ್ಸಿಗಾಗಿ ನಾನು ಹಿತನುಡಿದರೆ ತಿರಸ್ಕರಿಸಿದೆ. ಮತ್ತೇಕೆ ನಿನಗೆ ನನ್ನ ಸಾರಥ್ಯ?–ನಿನ್ನ ಭುಜಬಲವನ್ನೇ ನಂಬಿ ಪಾರ್ಥನೊಡನೆ ಸೆಣಸಾಡು. ವಾಘೆಗಳ ಬಿಸುಟೆ. ಇನ್ನು ನನ್ನ ಪಾಡು ನನಗೆ. (ಹೊಗುವನು)

ಕರ್ಣ: ನಡೆ, ನಡೆ. ನನಗಾಗಿ ನೀನು ಸಾರಥ್ಯ ವಹಿಸುವುದು ಬೇಡ. ಸುಯೋಧನನಿಗಾಗಿ. ನಿನಗಿಷ್ಟವಿಲ್ಲವಾದರೆ ನಾನು ಬೆಚ್ಚುವವನಲ್ಲ. ಬೆದರುವವನಲ್ಲ.—ಏ ಪಾರ್ಥಾ, ನಿನಗೆ ಸಾಮರ್ಥ್ಯವಿದ್ದರೆ ಈ ನನ್ನ ಸರ್ಪಶರದಿಂದ ನಿನ್ನನ್ನು ನೀನೇ ರಕ್ಷಿಸಿಕೋ.

ಕೃಷ್ಣ: ನೋಡಿದೆಯಾ ಅರ್ಜುನ, ಕರ್ಣನ ಬಿಲ್ಲೇರಿದ ಆ ಮಹಾಸ್ತ್ರವನ್ನು. ಹಿಂದೆ ನೀನು ಅಗ್ನಿಗೆ ಆಹುತಿಯಾಗಿ ಕೊಟ್ಟ ಖಾಂಡವ ವನದಿಂದ ತಪ್ಪಿಸಿಕೊಂಡು ಹೋದ ಅಶ್ವಸೇನ ಎಂಬ ಉರಗವಿದು. ನಿನ್ನ ಮೇಲಿನ ದ್ವೇಷದಿಂದ ಕರ್ಣನ ಕೈಸೇರಿದೆ. ಇದರಿಂದ ರಕ್ಷಿಸುವ ಉಪಾಯವೆಂದರೆ ಒಂದೇ. ಐದಂಗುಲದಷ್ಟು ರಥವ ಜಗ್ಗಿಸುವೆ. ಆಗ ಆ ಶರ ವ್ಯರ್ಥವಾಗುವುದು. ನಿನ್ನ ಯಾವ ಬಾಣವೂ ಆ ಉರಗಾಸ್ತ್ರವನ್ನು ಖಂಡಿಸಲಾರದು. (ಕರ್ಣನು ಬಿಟ್ಟ ಸರ್ಪಾಸ್ತ್ರವು ಅರ್ಜುನನ ಕಿರೀಟವನ್ನು ಹಾರಿಸಿಕೊಂಡು ಹೋಗುವುದು)

ಸರ್ಪಾಸ್ತ್ರ: (ಅಶರೀರವಾಣಿಯಿಂದ) ಮಹಾರಥಿ ಕರ್ಣಾ, ನಿನೀಗ ತೊಟ್ಟ ಸರ್ಪಾಸ್ತ್ರವೇ ನಾನು. ಪಾರ್ಥನ ಮೇಲಿನ ಸೇಡು ತೀರಿಸಲು. ನಿನ್ನನ್ನಾಶ್ರಯಿಸಿ ಬಂದು ನಿನ್ನ ಬತ್ತಳಿಕೆ ಸೇರಿದೆ. ಶಲ್ಯನೆಂದಂತೆ ನೀನು ಅರ್ಜುನನ ಹೃದಯಕ್ಕೆ ಗುರಿ ಇಡುತ್ತಿದ್ದರೆ, ನಾನವನ ಕಂಠವನ್ನೇ ಛೇದಿಸುತಿದ್ದೆ. ಆದರೂ ಚಿಂತಿಲ್ಲ. ಈಗ ನಾನು ಮತ್ತೊಮ್ಮೆ ನಿನ್ನಾಶ್ರಯ ಬೇಡುತ್ತಿದ್ದೇನೆ. ಮೊದಲಿನ ಗುರಿ ತಪ್ಪಿಸಿ ಅವನೆದೆಗೆ ಹೊಡೆ. ನಾನೂ ಖಂಡಿತವಾಗಿಯೂ ಪಾರ್ಥನ ಪ್ರಾಣ ಹೀರುವೆ.

ಕರ್ಣ: ಎಲೈ ಉರಗಾಸ್ತ್ರವೇ, ನೀನೇನೋ ನನಗೆ ಸಹಾಯ ನೀಡಲು ಮುಂದಾಗಬಹುದು. ಆದರೆ, ಕರ್ಣನ ಕಡುನನ್ನಿ ನೀನರಿಯೆ. ಇಟ್ಟ ಗುರಿ ಬದಲಿಸಲಾರೆ—ತೊಟ್ಟ ಬಾಣ ತೊಡಲಾರೆ—ಮಾತು ತಪ್ಪಲಾರೆ—ಇದು ನನ್ನ ವಚನ—ಈ ವಚನಕ್ಕೆ ಬದ್ಧ ನಾನು—ನನ್ನ ವಚನಕ್ಕಿಂತ ಮೇಲು ನನ್ನ ಪ್ರಾಣವಲ್ಲ—ದಯವಿಟ್ಟು ಕ್ಷಮಿಸು. ನಿನ್ನ ದಾರಿ ನಿನಗೆ—ಅನ್ಯರ ಸಹಾಯದಲ್ಲಿ ನಂಬಿಕೆ ಇಟ್ಟವ ನಾನಲ್ಲ—

ನನ್ನ ಸ್ವಂತ ಬಲದಲ್ಲೇ ನನಗೆ ನಂಬಿಕೆ. ಆದ್ದರಿಂದ ನಿನ್ನ ನೆರವನ್ನು ತಿರಸ್ಕರಿಸಿದ್ದೇನೆ.

ಸರ್ಪಾಸ್ತ್ರ:......ನಿನ್ನಿಚ್ಛೆ......

ಕರ್ಣ: ಶಲ್ಯನೆಂದಂತೆ ಶರ ವ್ಯರ್ಥವಾಯಿತು. ಇದರಿಂದ ನನ್ನ ತಾಯಿಗೆಷ್ಟು ಆನಂದವೋ......ವಿಧಿಯಿಚ್ಛೆ. ಒಂದು ಮಹಾಶರ ನಷ್ಟವಾದರೇನಂತೆ? ಮಂತ್ರಾಸ್ತ್ರಗಳ ತೆಗೆವೆ (ಅಸ್ತ್ರವೊಂದನ್ನು ಬಿಲ್ಲಿಗೆ ಹೂಡಿ, ಮಂತ್ರೋಚ್ಚಾರಣೆಗೆ ಅನುವಾಗುವನು. ಆದರೆ...) ಇದೇನು ...ಯಾವ ಮಂತ್ರಾಸ್ತ್ರದ ನೆನಹೂ ಬರಲೊಲ್ಲದು. ಮರೆವೆಯೋ? ಏತರಿಂದ?...ಗುರುದೇವನ ಶಾಪವೇ?...ಛೆ...ಹಾಗಾದರೆ ಮರಣ ಕಾಲ ಸನ್ನಿಹಿತವೇ? ಹಾ. ಸುಯೋಧನಾ ನಿನ್ನ ದುರ್ವಿಧಿಯೋ... (ರಥಚಕ್ರವು ಕುಸಿಯುವುದು) ಇದೇನು? ರಥದ ಗಾಲಿಯು ಭೂಮಿಯಲ್ಲಿ ಹೂತು ಹೋಯಿತಲ್ಲಾ, ಅರ್ಜುನ ತಡೆ, ತಡೆ, ನನ್ನ ರಥದ ಗಾಲಿಯು ಭೂಮಿಯಲ್ಲಿ ಹೂತುಹೋಗಿದೆ. ರಥದ ಗಾಲಿಯನ್ನೆತ್ತಿ ರಥಾರೂಢನಾಗಿ ಮತ್ತೆ ರಣ ಎಸಗುವೆ. ಅಷ್ಟರವರೆಗೆ ತುಸು ಸೈರಿಸು.

ಕೃಷ್ಣ: ಅರ್ಜುನ, ಕರ್ಣನ ಮಾತನ್ನು ಕೇಳದಿರು. ಆಪತ್ತೊದಗಿದಾಗಲೇ ವೈರಿಯ ಕೊಲ್ಲುವುದು—ಇದು ರಾಜನೀತಿ. ಆದ್ದರಿಂದ ದಿವ್ಯಾಸ್ತ್ರಗಳಿಂದ ಆತನಿಗೆ ಗುರಿಯಿಟ್ಟು ಹೊಡೆ.

ಅರ್ಜುನ: ರಥಹೀನನಾದ ವಿರೋಧಿ ನಿಶ್ಯಸ್ತ್ರನಾಗಿದ್ದಾಗ ಆತನನೆಂತು ಹೊಡೆಯಲಿ?

ಕೃಷ್ಣ: ಆ ಮಾತು ಈಗ ಬೇಡ. ಕರ್ಣನನ್ನು ಹೊಡೆಯಲು ಇದೇ ಸಂದರ್ಭ. ಹಿಂದು ಮುಂದು ನೋಡದಿರು. ಅಂದು ಚಕ್ರವ್ಯೂಹದಲ್ಲಿ ನಿನ್ನ ಮಗನಾದ ಅಭಿಮನ್ಯುವು ಸೆಣಸಾಡುವಾಗ ಇದೇ ಕರ್ಣನು ಹಿಂದಿನಿಂದ ಬಂದು ಅವನ ಕೈಗಳ ಕತ್ತರಿಸಿದನು. ಇಂದೇಕೆ ಅವನ ಮೇಲೆ ಮಮತೆ? ಇಂದೇಕೆ ಅವನ ಮೇಲೆ ಕರುಣೆ. ಅವನು ಮತ್ತೊಮ್ಮೆ ರಥಾರೂಢನಾದನೆಂದರೆ ಅವನನ್ನು ಗೆಲ್ಲಲು ಅಸಾಧ್ಯವಾಗಬಹುದು. ದೈವಕೃಪೆಯಿಂದ ಸಿಕ್ಕಿದ ಈ ಅವಕಾಶವನ್ನು ವ್ಯರ್ಥಗೊಳಿಸಬೇಡ. ಬಾಣಗಳನ್ನು ಪ್ರಯೋಗಿಸು.

ಅರ್ಜುನ: ಕೃಷ್ಣ, ನಿನ್ನ ಮಾತುಗಳೇ ನನಗೆ ಮಾನ್ಯ. ನನ್ನ ಮಗನ ಮೃತ್ಯುವಿಗೆ ಕಾರಣನಾದ ಈ ಮಹಾರಥಿಗೆ ನಾನೇ ಮೃತ್ಯುವಾಗುವೆನು. ಎಲವೋ ಕರ್ಣ, ನೀನು ಅಂದು ರಣರಂಗದಲ್ಲಿ ನನ್ನ ಪುತ್ರ ಅಭಿಮನ್ಯುವನ್ನು ಕೊಂದ ಸೇಡನ್ನು ನಾನಿಂದು ತೀರಿಸಿಕೊಳ್ಳುವೆನು. ನನ್ನ ಶರಹತಿಗೆ ನಿನ್ನ ಶಿರ ಧರೆಗುರುಳುವುದು. ಸಾಧ್ಯವಿದ್ದರೆ ತಪ್ಪಿಸು (ಬಾಣ ಹೂಡುವನು)

ಕರ್ಣ: ಹಾ ಕೌರವೇಶ್ವರ! ಹಾ ಕೃಷ್ಣಾ! ಅಮ್ಮಾ ಕುಂತಿ ತಾಯೀ, ನಿನಗಿತ್ತ ವಚನ ಪಾಲಿಸಿದ್ದೇನಮ್ಮಾ. ಈ ದುರ್ದೈವೀ ದುರಂತ ಕರ್ಣನನ್ನು ಆಶೀರ್ವದಿಸು ತಾಯೀ, ಇಟ್ಟ ಗುರಿ ಬದಲಿಸಲಿಲ್ಲ—ತೊಟ್ಟ ಬಾಣ ತೊಡಲಿಲ್ಲ—ಕೊಟ್ಟ ಮಾತು ತಪ್ಪಲಿಲ್ಲ, ಕೃಷ್ಣ ಭಗವಾನ್, ನನಗೆ ಸದ್ಗತಿಯನ್ನು ಕರುಣಿಸು.

ಅರ್ಜುನ: (ರಥದಿಂದ ಇಳಿದು ಆಶ್ಚರ್ಯದಿಂದ) ಏನಾಶ್ಚರ್ಯ! ಮರಣೋನ್ಮುಖನಾದ ಕರ್ಣನ ಬಾಯಿಂದ ಇದೆಂತಹ ಮಾತುಗಳು? ನನ್ನ ತಾಯಿಯನ್ನೇ ಇವನು ತಾಯಿ ಎನ್ನುವನಲ್ಲಾ? ಕೃಷ್ಣಾ, ಹಾಗಾದರೆ ಇವನಾರು. ಇವನೇಕೆ ಹೀಗೆ ಪ್ರಲಾಪಿಸುತ್ತಿರುವನು?

ಕೃಷ್ಣ: ಪಾರ್ಥ—ಎಲ್ಲವೂ ದೈವೇಚ್ಛೆ! ಇನ್ನೂ ಮುಚ್ಚುಮರೆಯೇಕೆ? ಇವನು ಕುಂತಿಯ ಜ್ಯೇಷ್ಠ ಪುತ್ರ. ಸೂರ್ಯ ಮಂತ್ರದಿ ಜನಿಸಿದವನು. ಸಮರದ ಮುನ್ನ ಅವನನ್ನು ಕಂಡು, ಅವನರಿಯದ ಅವನ ಜನ್ಮವೃತ್ತಾಂತ ತಿಳುಹಿ, ಅವನನ್ನು ಪಾಂಡವ ಪಕ್ಷಕ್ಕೆ ಆಮಂತ್ರಿಸಿ, ಸಮಗ್ರ ಕುರುಕುಲ ಸಿಂಹಾಸನದ ಅಧಿಪತಿಯಾಗೆಂದು ಅರುಹಿದೆ. ಸ್ವಾಮಿ ದ್ರೋಹವಾಗುವುದೆಂದು ತಿರಸ್ಕರಿಸಿದ. ಅದರ ಫಲವಾಗಿ ಇಂದು ಧರೆಗುರುಳಿ ಮರಣೋನ್ಮುಖನಾಗಿದ್ದಾನೆ.

ಅರ್ಜುನ: ಹಾಗಾದರೆ, ಮಹಾರಥಿ ಕರ್ಣ ನನ್ನ ಅಣ್ಣನೇ! ನಾನೆಂತಹ ಅಪರಾಧ ಮಾಡಿದೆ? ನಾನೆಂತಹ ಪಾಪಿಯಾದೆ? ಒಡಹುಟ್ಟಿದವನನ್ನು ಕೆಡಹಿದೆನಲ್ಲವೇ? ಅಯ್ಯೋ ದುರ್ವಿಧಿಯೇ ನನ್ನಿಂದ ಎಂಥಾ ಪಾಪ ಕೃತ್ಯವ ಮಾಡಿಸಿದೆ. ಅಣ್ಣಾ ಕರ್ಣಾ, ಅಕ್ಷಮ್ಯ ಅಪರಾಧಕ್ಕಾಗಿ ನನ್ನನ್ನು ಕ್ಷಮಿಸಲಾರೆಯಾ?

ಕರ್ಣ: ಬಾ ತಮ್ಮಾ ! ಅರ್ಜುನ ಬಾ ಬಳಿಗೆ, ಈ ಲೋಕ ಬಿಡುವ ಮುನ್ನ ನಿನ್ನನ್ನೊಮ್ಮೆ ಆಲಂಗಿಸುವ ಆಸೆ ನನಗೆ. ಅದೊಂದೇ ಆಸೆ. ನಮ್ಮ ತಾಯಿ ಕುಂತಿದೇವಿ ಅದೆಷ್ಟು ಸಂತುಷ್ಟಳು ಇಂದು? ನನ್ನ ಶರ ಹತಿಗೆ ನೀನು ಸಾಯುತ್ತಿದ್ದರೆ, ಆ ತಾಯಿ ತನ್ನ ಪ್ರಾಣ ಇಟ್ಟು ಕೊಳ್ಳುತ್ತಿದ್ದಳೋ, ಇಲ್ಲವೋ. ನಿನ್ನಂತಹ ಒಬ್ಬ ತಮ್ಮ ನನಗಿರುವ ನೆಂದು ತಿಳಿದಾಗ ನಾನೆಷ್ಟು ಸಂತೋಷಪಟ್ಟಿದ್ದೇನೆಂದು ನೀನು ಹೇಗೆ ತಿಳಿಯಬಲ್ಲೆ? ಆ ಆನಂದವನ್ನು ಜಗದೆದುರು ತೋರಲಾರ ದವನಾಗಿ, ನನ್ನಲ್ಲೆ ನಾನು ಕೊರಗಿದ್ದೇನೆ. ನನ್ನ ಮರಣಕ್ಕಾಗಿ ನೀನು ಮರುಗದಿರು. ನನ್ನನ್ನು ಕೊಂದವನು ನೀನಲ್ಲ. ಗುರುದೇವ ಭಾರ್ಗವರಾಮನೆನ್ನ ಕೊಂದ. ನನ್ನ ಜನ್ಮವೃತ್ತಾಂತ ನನಗೆ ತಿಳಿಸಿ ಕೃಷ್ಣ ಭಗವಾನ್ ಎನ್ನ ಕೊಂದ. ನನ್ನನ್ನು ವಚನ ಬದ್ಧನನ್ನಾಗಿ ಮಾಡಿದ ಜನನೀ ಕುಂತೀ ನನ್ನನ್ನು ಕೊಂದಳು. ಜನಿಸುವಾಗಲೇ ನನ್ನ ಜೊತೆಗಿದ್ದ ಕವಚಕುಂಡಲಗಳ ಬೇಡಿ ದೇವೇಂದ್ರ ಕೊಂದ. ಸಾರಥಿಹೀನನಾಗಿ ಧುರವ ಕಾದುವಾಗ ನನ್ನ ರಥ ಚಕ್ರವ ಕಚ್ಚಿ ಈ ದರಿತ್ರೀದೇವಿ ನನ್ನನ್ನು ಕೊಂದಳು. ನೀನು ಕೇವಲ ನಿಮಿತ್ತ ಮಾತ್ರನು. ಆದ್ದರಿಂದ ತಮ್ಮಾ ದುಃಖಿಸದಿರು. ಇದು ವಿಧಿ ಒಡ್ಡಿದ ಆಟ. ನನ್ನ ಮರಣದಲ್ಲಿ ನನಗೆ ಸಂತೃಪ್ತಿಯಿದೆ. ಕೌರವನ ಅನ್ನವುಂಡ ಈ ಜೀವ ಅವನಿಗಾಗಿ ಅವಸಾನವಾಗುತ್ತಿದೆ. ಹೆತ್ತ ತಾಯಿಗಿತ್ತ ವಚನದಿಂದ, ಮಾತೃ ಋಣದಿಂದ ಮುಕ್ತನಾಗುತ್ತಿ ದ್ದೇನೆ. ನಾನಿಂದು ಸಂತೋಷದೀದ ಸಾಯುತ್ತಿದ್ದೇನೆ, ಎಲ್ಲಿ ಧರ್ಮವೋ ಅಲ್ಲಿ ದಯಾಮಯ ಕೃಷ್ಣ—ಎಲ್ಲಿ ಕೃಷ್ಣನೋ, ಅಲ್ಲಿ ಜಯ. ನಾನು ನಿಮ್ಮ ಅನುಜನೆಂದು ಧರ್ಮ, ಭೀಮ, ನಕುಲ ಸಹದೇವರಿಗೆ ತಿಳಿಸಬೇಡ, ಪಾಪ! ಅವರೂ ನನ್ನ ಮರಣ ಕ್ಕಾಗಿ ದುಃಖಿಸಬಹುದು. ಇನ್ನು ನಾನು ತೆರಳುವೆನು. ನಿಮಗೆಲ್ಲ ರಿಗೂ ಶುಭವಾಗಲಿ. ಕೃಷ್ಣ ಭಗವಾನ್ ನನಗೆ ಸದ್ಗತಿ ಕೊಡು.

ಅರ್ಜುನ: ಅಣ್ಣಾ...ಅಣ್ಣಾ....

— ತೆರೆ —